ಕನ್ನಡ ವಿಶ್ವವಿದ್ಯಾಲಯ ಹಂಪಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ವಿದ್ಯಾರಣ್ಯ – 560 376

ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಸಂಶೋಧನಾ ನಿಬಂಧ
2018-19

ಮಾಗಡಿ ಚಕ್ರಭಾವಿ : ಒಂದು ಸಮಗ್ರ ಅಧ್ಯಯನ

ಸಂಶೋಧನಾ ವಿದ್ಯಾರ್ಥಿ
ಶಶಿರೇಖ
ನೋಂದಣಿ ಸಂಖ್ಯೆ : 182001030039

ಮಾರ್ಗದರ್ಶಕರು
ಡಾ. ಡಿ.ಕೆ. ಚಿತ್ತಯ್ಯ ಪೂಜಾರ್
ಸಹ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿದ್ಯಾಲಯ

ಮಾನ್ಯತಾ ಸಂಸ್ಥೆ
ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಂಶೋಧನಾ ಕೇಂದ್ರ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018

2018–2019

1433

ಕನ್ನಡ ವಿಶ್ವವಿದ್ಯಾಲಯ ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ವಿದ್ಯಾರಣ್ಯ – 560 376

ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಸಂಶೋಧನಾ ನಿಬಂಧ

2018-19

ಮಾಗಡಿ ಚಕ್ರಭಾವಿ : ಒಂದು ಸಮಗ್ರ ಅಧ್ಯಯನ

ಸಂಶೋಧನಾ ವಿದ್ಯಾರ್ಥಿ

ಶಶಿರೇಖ

ನೋಂದಣಿ ಸಂಖ್ಯೆ : 182001030039

ಮಾರ್ಗದರ್ಶಕರು

ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

ಸಹ ಪ್ರಾಧ್ಯಾಪಕರು

ಕನ್ನಡ ಅಧ್ಯಯನ ಕೇಂದ್ರ

ಬೆಂಗಳೂರು ವಿದ್ಯಾಲಯ

ಮಾನ್ಯತಾ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಂಶೋಧನಾ ಕೇಂದ್ರ

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018

2018–2019

ಸಂಶೋಧನಾ ವಿದ್ಯಾರ್ಥಿಯ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಸಂಶೋಧನೆ ನಡೆಸಿ **"ಮಾಗಡಿ ಚಕ್ರಭಾವಿ : ಒಂದು ಸಮಗ್ರ ಅಧ್ಯಯನ"** ಎಂಬ ಶೀರ್ಷಿಕೆಯ ಈ ನಿಬಂಧವನ್ನು ಡಾ. ಡಿ.ಕೆ. ಚಿತ್ತಯ್ಯ ಪೂಜಾರ್‌ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಈ ನಿಬಂಧವನ್ನು ಈ ಮೊದಲು ಭಾಗಶಃ ಆಗಲಿ ಪೂರ್ಣವಾಗಿ ಆಗಲಿ ಬೇರೆ ಯಾವುದೇ ಪದವಿ ಹಾಗೂ ಇನ್ನಿತರ ಸ್ವಂತ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಈ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಈ ಮೂಲಕ ಸಲ್ಲಿಸುತ್ತಿದ್ದೇನೆ.

ಸ್ಥಳ: ಬೆಂಗಳೂರು

ದಿನಾಂಕ: 25.07.2019

ಸಂಶೋಧಕರು
(ಶಶಿರೇಖ)
ಶಶಿರೇಖ

ಎಂ.ಫಿಲ್. ವಿದ್ಯಾರ್ಥಿ
ಹಂಪಿ ಕನ್ನಡ ವಿಶ್ವವಿದ್ಯಾಲಯ.

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀಮತಿ ಶಶಿರೇಖ ಅವರು, ಎಂ.ಫಿಲ್. ಪದವಿಗಾಗಿ ಬರೆದು ಸಿದ್ಧಪಡಿಸಿರುವ **"ಮಾಗಡಿ ಚಕ್ರಭಾವಿ : ಒಂದು ಸಮಗ್ರ ಅಧ್ಯಯನ"** ಎಂಬ ಸಂಪ್ರಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿರುತ್ತಾರೆ. ಈ ಸಂಪ್ರಬಂಧ ವಿಷಯವನ್ನು ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರೆ ಉದ್ದೇಶಗಳಿಗಾಗಲಿ ಸಲ್ಲಿಸಿಲ್ಲವೆಂದು ಈ ಮೂಲಕ ಧೃಡೀಕರಿಸಿರುತ್ತೇನೆ.

ಸ್ಥಳ: ಬೆಂಗಳೂರು

ದಿನಾಂಕ:

(ಡಾ. ಡಿ.ಕೆ. ಚಿತ್ತಯ್ಯ ಪೂಜಾರ್)

ಮಾರ್ಗದರ್ಶಕರು

ಪರಿವಿಡಿ

ಅಧ್ಯಾಯ – 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಇಡೀ ಪ್ರಪಂಚವನ್ನು ತನ್ನತ್ತ ಸೆಳೆಯುತ್ತಿರುವ ಸಂಸ್ಕೃತಿ ಎಂದರೆ ನಮ್ಮ ಹೆಮ್ಮೆಯ ಭಾರತೀಯ ಸಂಸ್ಕೃತಿ. ಅದರಲ್ಲೂ ಕರ್ನಾಟಕವು ಸಂಸ್ಕೃತಿಗಳ ಆಗರವಾಗಿವೆ. ಕರ್ನಾಟಕದ ಪ್ರತಿಯೊಂದು ಹಳ್ಳಿಹಳ್ಳಿಗಳಲ್ಲಿಯೂ ವೈವಿಧ್ಯಮಯವಾದ ಸಂಸ್ಕೃತಿಗಳು ಆಚರಣೆಯಲ್ಲಿರುವುದನ್ನು ಕಾಣಬಹುದು. ಅನೇಕ ಹಬ್ಬ-ಆಚರಣೆಗಳು, ಧರ್ಮಗಳು, ದೇವಾಲಯಗಳು, ವೀರಗಲ್ಲು, ಮಾಸ್ತಿಗಲ್ಲು, ನಿಸದಿಗಲ್ಲು, ಕೋಟೆಕೊತ್ತಲುಗಳು, ಕೆರೆ-ಕಟ್ಟೆ ಅನೇಕ ಪ್ರಾಚೀನ ಸ್ಮಾರಕಗಳನ್ನು ಕಾಣುತ್ತೇವೆ. ಅದರಂತೆ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಚಕ್ರಬಾವಿ ಗ್ರಾಮವು ಇದಕ್ಕೆ ಹೊರತಾಗಿಲ್ಲ. ಇಲ್ಲಿಯೂ ವೀರಗಲ್ಲು, ಮಾಸ್ತಿಗಲ್ಲು, ದೇವಾಲಯಗಳು, ಧರ್ಮಗಳು, ಕೆರೆ, ಕಟ್ಟೆ ಕಾಲುವೆ, ಕೋಟೆ ಮುಂತಾದ ಆಧಾರಗಳಿಂದ ಹೇಳಬಹುದಾಗಿದೆ.

ಚಕ್ರಬಾವಿ ಗ್ರಾಮವು ಇತಿಹಾಸಪೂರ್ವ ಕಾಲದಲ್ಲಿ ಅಸ್ತಿತ್ವದಲ್ಲಿತ್ತೆಂದು ಸಂಶೋಧನೆಯಿಂದ ತಿಳಿದುಬಂದಿದೆ, ಚಕ್ರಬಾವಿ ಗ್ರಾಮಕ್ಕೆ ಹೊಂದಿಕೊಂಡಿರುವ ಅಳಲುಕುಪ್ಪೆ ಗ್ರಾಮದ ಬೆಟ್ಟದಲ್ಲಿ ನೂರಾರು ಬೃಹತ್ ಶಿಲಾಯುಗದ ಸಮಾಧಿಗಳು ಮತ್ತು ಚಕ್ರಬಾವಿ ಗ್ರಾಮದ ಬೆಟ್ಟದ ಸಿದ್ಧಪ್ಪನಗುಡೆಯ ಹತ್ತಿರವಿರುವ ಪ್ರಾಚೀನ ಗುಹೆ ಇದಕ್ಕೆ ಸಾಕ್ಷಿಯಾಗಿದೆ. ಮೇಲಿನ ಎಲ್ಲಾ ಆಧಾರಗಳ ಮೇಲೆ ಚಕ್ರಬಾವಿ ಗ್ರಾಮಕ್ಕೆ ಸುಮಾರು ಏಳುಸಾವಿರ ವರ್ಷಗಳ ಇತಿಹಾಸವಿದೆ ಎಂದು ಹೇಳಬಹುದಾಗಿದೆ. ಇತಿಹಾಸ ಪೂರ್ವಯುಗದಿಂದ ಇತಿಹಾಸ ಯುಗಕ್ಕೆ ಬಂದರೆ ಚಕ್ರಬಾವಿಯು ಅನೇಕ ರಾಜವಂಶಗಳ ಆಳ್ವಿಕೆಗೆ ಸೇರಿತ್ತೆಂಬುದು ತಿಳಿಯುತ್ತದೆ. ಚಕ್ರಬಾವಿ ಗ್ರಾಮದಲ್ಲಿ ಕದಂಬರು, ಗಂಗರು, ಹೊಯ್ಸಳರು, ಚೋಳರು, ವಿಜಯನಗರ ಸಾಮ್ರಾಜ್ಯ, ಯಲಹಂಕ ನಾಡಪ್ರಭುಗಳು, ಮೈಸೂರು ಅರಸರು, ಚಕ್ರಬಾವಿಯ ಪಾಳೆಗಾರರು ಆಳ್ವಿಕೆ ಮಾಡಿರುವುದನ್ನು ಶಾಸನಗಳ ಆಧಾರದಿಂದ ಹೇಳಬಹುದು.

ಚಕ್ರಬಾವಿ ಗ್ರಾಮದಲ್ಲಿ ಅನೇಕ ಧರ್ಮಗಳು ಅಸ್ತಿತ್ವದಲ್ಲಿದ್ದವು. ಇವುಗಳಲ್ಲಿ ವೈಷ್ಣವ ಮತ್ತು ಶೈವ ಧರ್ಮಗಳು ಹೆಚ್ಚು ಪ್ರಬಲವಾಗಿದ್ದವು. ಇದಕ್ಕೆ ಸಾಕ್ಷಿಯಾಗಿ ಇಲ್ಲಿಯ ಅನೇಕ ದೇವಾಲಯಗಳು ವೈಷ್ಣವ ಮತ್ತು ಶೈವಧರ್ಮದ ದೇವಾಲಯಗಳು ಅಸ್ತಿತ್ವದಲ್ಲಿವೆ.

ಪ್ರಾಚೀನ ಕಾಲದಲ್ಲಿ ಚಕ್ರಬಾವಿಯ ಜನರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯು ಉತ್ತಮ ಮಟ್ಟದಲ್ಲಿತ್ತೆಂದು ಹೇಳಬಹುದು. ಚಕ್ರಬಾವಿಯ ಗ್ರಾಮದಲ್ಲಿರುವ ಪ್ರಾಚೀನ ಕೆರೆ, ಕಟ್ಟೆ, ಬಾವಿ ಕಲ್ಯಾಣಿಗಳು ರೈತರ ಬೆಳೆಗೆ ಅನುಕೂಲವಾಗಿದ್ದವು ಎಂಬುದಕ್ಕೆ ಸಾಕ್ಷಿಯಾಗಿವೆ. ಮಾಗಡಿ

ಸೀಮೆಯಲ್ಲಿ ನಡೆಯುತ್ತಿದ್ದಂತಹ ಕೆಲವೇ ಕೆಲವು ಬೆರಳೆಣಿಕೆಯ ಸಂತೆಗಳಲ್ಲಿ ಚಕ್ರಬಾವಿ ಸಂತೆಯೂ ಒಂದು. ಸಂತೆಗಳು ಅಂದಿನ ವ್ಯಾಪಾರ ಸ್ಥಳಗಳಾಗಿದ್ದು ಸಂತೆ ಅಥವಾ ವ್ಯಾಪಾರ ಸ್ಥಳಗಳು ಅಂದಿನ ಸಮಾಜದ ಆರ್ಥಿಕ ಭದ್ರತೆಯ ಕುರುಹುಗಳಾಗಿದ್ದವು. ಒಟ್ಟಿನಲ್ಲಿ ಚಕ್ರಬಾವಿಯಲ್ಲಿ ಅಂದಿನ ಕಾಲದಲ್ಲಿ ಸಮೃದ್ಧವಾಗಿ ನಡೆಯುತ್ತಿದ್ದ ಸಂತೆ, ಹಬ್ಬ-ಹರಿದಿನ, ಜಾತ್ರೆ ಮುಂತಾದವುಗಳು ಪ್ರಾಚೀನ ಕಾಲದಲ್ಲಿ ಚಕ್ರಬಾವಿ ಉತ್ತಮ ಆರ್ಥಿಕ ಭದ್ರತೆಯ ಕೇಂದ್ರವಾಗಿತ್ತು ಎಂದು ಹೇಳಬಹುದು.

ಚಕ್ರಬಾವಿಗ್ರಾಮದಲ್ಲಿ ಅನೇಕ ಸ್ಮಾರಕಶಿಲೆಗಳು ಅಸ್ತಿತ್ವದಲ್ಲಿವೆ. ವೀರಗಲ್ಲು, ಮಾಸ್ತಿಗಲ್ಲು, ವೀರಮಾಸ್ತಿಗಲ್ಲು, ಮಿಥುನಶಿಲ್ಪ; ಲಜ್ಜಾಗೌರಿ ಸಂಪ್ರದಾಯದ ಕಲ್ಲು, ಕೋಟೆ, ಕೆರೆ, ಕಟ್ಟೆ ಮುಂತಾದ ಸ್ಮಾರಕ ಮತ್ತು ಸ್ಮಾರಕ ಶಿಲೆಗಳು ಚಕ್ರಬಾವಿಯಲ್ಲಿ ಅಸ್ಥಿತ್ವದಲ್ಲಿವೆ. ಅನೇಕ ಯುದ್ಧಗಳು ಚಕ್ರಬಾವಿ ಗ್ರಾಮದಲ್ಲಿ ನಡೆದಿತ್ತೆಂದು ಇಲ್ಲಿನ ಸ್ಮಾರಕ ಶಿಲೆಗಳು ಕೂಗಿ ಹೇಳುತ್ತಿವೆ. ಇದಕ್ಕೆ ಪೂರಕವಾಗಿ ಚಕ್ರಬಾವಿಯ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುವಂತ ಕೆಲಸಗಳನ್ನು ಪತ್ರಿಕೆಗಳು ಮಾಡುತ್ತಿವೆ.

ಇಂದು ಕೇವಲ ಒಂದು ಸಣ್ಣ ಹಳ್ಳಿಯಾಗಿರುವ ಚಕ್ರಬಾವಿ ಗ್ರಾಮವು ಕೆಂಪೇಗೌಡರ ಕೊನೆಯ ರಾಜನಾದ ಮುಮ್ಮಡಿ ಕೆಂಪವೀರಪ್ಪೌಡನ ಕಾಲದಲ್ಲಿ ಒಂದು ಹೋಬಳಿ ಕೇಂದ್ರವಾಗಿತ್ತು ಎಂದರೆ ನಂಬಲೇಬೇಕಾಗಿದೆ. ಈ ರೀತಿಯ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಗ್ರಾಮದ ಬಗೆಗಿನ ಅಧ್ಯಯನದ ನನ್ನ ಉದ್ದೇಶವಾಗಿದೆ. ಆ ಮೂಲಕ ಅಂಚಿನಿಂದ ಕೇಂದ್ರದತ್ತ ಕೊಂಡೊಯ್ಯುವುದು ನನ್ನ ನಿಲುವಾಗಿದೆ. ಈ ಗುರಿ ಉದ್ದೇಶದಿಂದಲೇ ಪ್ರಸ್ತುತ 'ಮಾಗಡಿ ಚಕ್ರಬಾವಿ : ಒಂದು ಸಮಗ್ರ ಅಧ್ಯಯನ' ಈ ವಿಷಯವಾಗಿ ಅಧ್ಯಯನ ಕೈಗೊಂಡಿದ್ದೇನೆ. ಇವಿಷ್ಟು ಅಧ್ಯಯನದ ಮೊದಲ ಅಧ್ಯಾಯವಾದ ಉದ್ದೇಶ ಮತ್ತು ವ್ಯಾಪ್ತಿಯಾಗಿದ್ದರೆ, ಅಧ್ಯಾಯ ಎರಡರಲ್ಲಿ ಚಕ್ರಬಾವಿ ಗ್ರಾಮದ ಚರಿತ್ರೆಯನ್ನು ವಿವರಿಸುತ್ತಾ ಗ್ರಾಮದ ನಿಷ್ಪತ್ತಿ ಹಾಗೂ ಚಕ್ರಬಾವಿಯನ್ನು ಕದಂಬರು, ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯದ ಅರಸರು, ಯಲಂಕ ನಾಡಪ್ರಭುಗಳು ಮತ್ತು ಕೆಲವು ಪಾಳೆಗಾರರು ಆಳ್ವಿಕೆ ಮಾಡಿದ್ದಕ್ಕೆ ಶಾಸನ ಆಧಾರಗಳಿವೆ ಎಂಬುದನ್ನು ತಿಳಿಸುತ್ತೇನೆ.

ಕರ್ನಾಟಕದ ಪ್ರತಿ ಹಳ್ಳಿಗಳಲ್ಲೂ ಮನುಷ್ಯನನ್ನು ಸುಸಂಸ್ಕೃತನನ್ನಾಗಿ ಮಾಡಲು ಮತ್ತು ಸನ್ನಡತೆ ಕಲಿಸುವಲ್ಲಿ ದೇವಾಲಯಗಳು ಪ್ರಮುಖ ಪಾತ್ರವಹಿಸಿದೆ. ಚಕ್ರಬಾವಿ ಗ್ರಾಮದಲ್ಲಿ ವೈಷ್ಣವ ಮತ್ತು ಶೈವ, ವೀರಶೈವ ಧರ್ಮ ಅಸ್ತಿತ್ವದಲ್ಲಿರುವುದನ್ನು ಶಾಸನಗಳು, ದೇವಾಲಯಗಳು ಮತ್ತು ಶಿಲ್ಪಕಲೆಯಿಂದ ತಿಳಿದುಬರುತ್ತದೆ. ಈ ಎಲ್ಲಾ ವಿಚಾರಗಳನ್ನು ಅಧ್ಯಾಯ ಮೂರು ಮತ್ತು ಐದರಲ್ಲಿ ಚಕ್ರಬಾವಿಯ ಧಾರ್ಮಿಕ ಇತಿಹಾಸ ಅಧ್ಯಾಯದಲ್ಲಿ ವಿವರಣಾತ್ಮಕವಾಗಿ ತಿಳಿಸುತ್ತೇನೆ.

ಒಂದು ಆದರ್ಶ ಗ್ರಾಮವಾಗಬೇಕೆಂದರೆ ಅಲ್ಲಿನ ಸಮಾಜ ಮತ್ತು ಆರ್ಥಿಕ ಮಟ್ಟ ಉತ್ತಮ ಸ್ಥಿತಿಯಲ್ಲಿರಬೇಕು. ಚಕ್ರಬಾವಿಯ ಸಾಮಾಜಿಕ ಮತ್ತು ಆರ್ಥಿಕ ಜೀವನ ಉತ್ತಮ ಸ್ಥಿತಿಯಲ್ಲಿತ್ತೆಂದು ಕೆಲವು ಶಾಸನಗಳಿಂದ ಮತ್ತು ಪ್ರಸ್ತುತ ಅಸ್ಥಿತ್ವದಲ್ಲಿರುವ ಕೆಲವು ಆಚರಣೆಗಳಿಂದ ತಿಳಿದುಬರುತ್ತದೆ. ಅಂತಹ ಕೆಲವು ಮಹತ್ವದ ವಿಷಯಗಳನ್ನು ಆಧಾರ ಸಮೇತ ಅಧ್ಯಾಯ ನಾಲ್ಕರಲ್ಲಿ ಚಕ್ರಬಾವಿಯ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಸಮಗ್ರವಾಗಿ ವಿವರಿಸಿರುತ್ತೇನೆ. ಅಧ್ಯಾಯ ಆರರಲ್ಲಿ ಚಕ್ರಬಾವಿಯಲ್ಲಿ ದೊರೆತಿರುವ ಪ್ರಾಚೀನ ಕಾಲದ ಕೆಲವು ವಿಶಿಷ್ಟ ಶಿಲ್ಪಗಳು, ಬೃಹತ್ ಶಿಲಾಯುಗದ ಸಮಾಧಿಗಳು ಮತ್ತು ಸ್ಮಾರಕ ಶಿಲೆಗಳ ಬಗ್ಗೆ ತಿಳಿಸುತ್ತೇನೆ. ಅಂತೆಯೇ ಅಧ್ಯಾಯ ಏಳರಲ್ಲಿ ಚಕ್ರಬಾವಿ ಗ್ರಾಮಕ್ಕೆ ಸಂಬಂಧಿಸಿದಂತೆ ಸುಮಾರು ಒಂಬತ್ತು ಶಾಸನಗಳ ವಿವರಣೆಯನ್ನು ನೀಡುತ್ತೇನೆ.

ಅಂತಿಮವಾಗಿ ಚಕ್ರಬಾವಿಯ ಛಾಯಾಚಿತ್ರಗಳೊಂದಿಗೆ, ಭೂನಕ್ಷೆಯನ್ನು ದಾಖಲಿಸಿ ಸಮಾರೋಪ ಭಾಗದೊಂದಿಗೆ ಗ್ರಾಮದ ಬಗೆಗೆ ಬೆಳಕು ಚೆಲ್ಲುವಂತಹ ಅಧ್ಯಯನದ ಕಾರ್ಯದಲ್ಲಿ ತೊಡಗುತ್ತೇನೆ.

ಅಧ್ಯಾಯ – 2

ಚಕ್ರಬಾವಿ ಗ್ರಾಮದ ಚರಿತ್ರೆ

ಅಧ್ಯಾಯ – ಎರಡು

ಚಕ್ರಬಾವಿ ಗ್ರಾಮದ ಚರಿತ್ರೆ

ಚರಿತ್ರೆ, ಇತಿಹಾಸ ಎಂದಾಕ್ಷಣ ಅಲಕ್ಷ್ಯ ತೋರುವುದು ಸರ್ವೇಸಾಮಾನ್ಯ. ಇತಿಹಾಸದ ಬಗ್ಗೆ ಅಲಕ್ಷ್ಯ, ಅವಜ್ಞೆ ಬೆಳೆಸಿಕೊಳ್ಳದೇ ಅದನ್ನು ದಾಖಲಿಸುವ ಪ್ರಯತ್ನ, ಪ್ರವೃತ್ತಿ ಬೆಳೆಯಬೇಕಿದೆ. ಇತಿಹಾಸವನ್ನು ತಿಳಿಯದವರು ಮತ್ತೊಂದು ಇತಿಹಾಸವನ್ನು ಸೃಷ್ಟಿಸಲಾರರು ಇತಿಹಾಸವು ವರ್ತಮಾನ, ಭವಿಷ್ಯತ್‌ಗಳ ನಡುವೆ ಸಂಬಂಧವಿರುತ್ತದೆ. ಇಂದಿನ ಜನತೆ ಹಿಂದಿನ ಘಟನೆಗಳ ಇತಿಹಾಸವನ್ನು ದಾಖಲಿಸುವುದು ಅವಶ್ಯಕವಾಗಿದೆ.

ಇತಿಹಾಸವನ್ನು ಇತಿಹಾಸ ಪೂರ್ವಕಾಲ ಮತ್ತು ಇತಿಹಾಸ ಕಾಲವೆಂದು ಎರಡು ಭಾಗಗಳಾಗಿ ವಿಂಗಡಿಸುತ್ತೇವೆ. ಇತಿಹಾಸ ಪೂರ್ವಕಾಲವು ಕ್ರಿ.ಪೂ.10,000 ದಿಂದ ಕ್ರಿ.ಪೂ.300ರ ವರೆಗೆ ಗುರುತಿಸಲಾಗಿದೆ. ಕ್ರಿ.ಪೂ.300ರ ನಂತರದ ಕಾಲವನ್ನು ಇತಿಹಾಸ ಕಾಲವೆಂದು ಕರೆಯುತ್ತೇವೆ. ಶಿಲಾಯುಗದ ಕಾಲವನ್ನು ಇತಿಹಾಸ ಪೂರ್ವಕಾಲವೆಂದು ಕರೆಯಲಾಗಿದೆ. ಈ ಕಾಲದಲ್ಲಿ ದಾಖಲೆ ಹಾಗೂ ಲಿಪಿಗಳಿಲ್ಲದ ಕಾರಣ ಆ ಕಾಲದಲ್ಲಿ ಶಿಲಾಯುಗದ ಜನರು ಬಳಸುತ್ತಿದ್ದ ಮಡಿಕೆ, ಕುಡಿಕೆ, ಆಯುಧ, ಅವರ ಸಮಾಧಿಯಲ್ಲಿದ್ದ ಮೂಳೆಗಳ ಆಧಾರದಿಂದ ಆ ಕಾಲದ ಮನುಷ್ಯರ ಜೀವನ ವಿಧಾನವನ್ನು ಗುರುತಿಸಲಾಗುತ್ತಿದೆ. ಕರ್ನಾಟಕದಲ್ಲಿ ತುಮಕೂರು, ಚಿಕ್ಕಮಗಳೂರು, ಚಿತ್ರದುರ್ಗ, ಬಳ್ಳಾರಿ, ಶಿವಮೊಗ್ಗ, ವಿಜಾಪುರ, ಮೈಸೂರು, ಬೆಂಗಳೂರು, ರಾಮನಗರ, ಗುಲ್ಬರ್ಗಾ ಜಿಲ್ಲೆಗಳಲ್ಲಿ ಶಿಲಾಯುಗದ ಜನರು ವಾಸಿಸುತ್ತಿದ್ದ ಕುರುಹುಗಳು ದೊರೆತಿವೆ.

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಸಾವನದುರ್ಗ, ಕಲ್ಯ, ಕುಪ್ಪೆಪಾಳ್ಯ, ವಿರೂಪಾಪುರ ಮುಂತಾದ ಕಡೆ ಪುರಾತನ ಮಾನವ ನೆಲೆಯ ಕುರುಹುಗಳಿವೆ. ಅದೇ ರೀತಿ ಸಾವನದುರ್ಗ, ಗುಡ್ಡಹಳ್ಳಿ, ಗವಿನಾಗಮಂಗಲ, ಅಜ್ಜನಹಳ್ಳಿ, ಹೂಜಗಲ್ಲು, ಹೊಸಪಾಳ್ಯ ಮುಂತಾದ ಕಡೆಗಳಲ್ಲಿ ಬೃಹತ್ ಶಿಲಾಯುಗದ ಘೋರಿಗಳಿವೆ.[1]

ಚಕ್ರಬಾವಿಯ ಸುತ್ತಮುತ್ತಲಿನಲ್ಲಿ ಪ್ರಾಚೀನ ಶಿಲಾಯುಗದ ಜನರು ವಾಸಿಸುತ್ತಿದ್ದರು. ಚಕ್ರಬಾವಿಗೆ ಹೊಂದಿಕೊಂಡಿರುವ ಗ್ರಾಮವಾದ ಅರಳುಕುಪ್ಪೆಯ ಬೋರೆದೇವರ ಗುಡ್ಡ ಮತ್ತು

---

[1] ಡಾ.ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ–ಸಂಸ್ಕೃತಿ, ಪು.14

ಮೂರುಗುಡ್ಡೆ (ಮೂರು ಬೆಟ್ಟಗಳು ಜಂಟಿಯಾಗಿರುವುದರಿಂದ ಸ್ಥಳೀಯರು ಮೂರುಗಡ್ಡೆ ಎಂದು ಕರೆಯುತ್ತಾರೆ) ಬೆಟ್ಟದ ಸುತ್ತಮುತ್ತಲಿನಲ್ಲಿ ನೂರಾರು ಬೃಹತ್ ಶಿಲಾಯುಗದ ಘೋರಿಗಳನ್ನು ಕಾಣಬಹುದು. ಇವುಗಳನ್ನು ಬೃಹತ್ ಶಿಲಾಯುಗದ ಘೋರಿಗಳೆಂದು ಸ್ಪಷ್ಟವಾಗಿ ಹೇಳಬಹುದು. ಇಲ್ಲಿ ದೊರೆತ್ತಿರುವ ಎಲ್ಲ ಘೋರಿಗಳು ವೃತ್ತಾಕಾರವಾಗಿವೆ. ಸುಮಾರು ಹತ್ತು ಅಡಿ ಅಗಲದ ಎತ್ತರದ ಮಧ್ಯೆ ಬಂಡೆ ಇದ್ದು, ಬಂಡೆಯ ಸುತ್ತ ಕಲ್ಲುಗಳನ್ನು ಜೋಡಿಸಲಾಗಿದೆ. ಶಿಲಾಯುಗದ ಸಂಸ್ಕೃತಿಯಲ್ಲಿ ಶವಗಳನ್ನು ಸುಮಾರು ಹತ್ತು ಅಡಿ ಭೂಮಿಯನ್ನು ಅಗೆದು ಒಳಗಡೆ ಶವಗಳನ್ನು ಮಲಗಿಸಿ, ಮೇಲೆ ಬಂಡೆ ಅಥವಾ ಚಪ್ಪಡಿಯಿಂದ ಮುಚ್ಚುತ್ತಿದ್ದರು. ಕೆಲವು ಘೋರಿಗಳ ಮೇಲೆ ಕಲ್ಲುಗಳನ್ನು ಚೌಕವಾಗಿ ನಿಲ್ಲಿಸುತ್ತಿದ್ದು, ಕೆಲವು ಘೋರಿಯ ಸುತ್ತ ಕಲ್ಲನ್ನು ಜೋಡಿಸುತ್ತಿದ್ದರು. ಶವವನ್ನು ಹೂಳಲು ಸುಮಾರು ಏಳು ಅಡಿಯಿಂದ ಇಪ್ಪತ್ತೈದು ಅಡಿಗಳ ವರೆಗೆ ಗುಂಡಿ ತೆಗೆಯುತ್ತಿದ್ದರು. ಘೋರಿ ಮೇಲಿನ ವೃತ್ತಾಕಾರದ ಮುಚ್ಚಳಿಕೆಗಳು ನಾಲ್ಕು ಅಡಿಯಿಂದ ಆರು ಅಡಿ ಅಗಲವಾಗಿದ್ದು, 8–10 ಅಂಗುಲ ದಪ್ಪವಾಗಿಯೂ ಇರುತ್ತವೆ.[2]

ಅಳಲುಕುಪ್ಪೆಯಲ್ಲಿ ದೊರೆತಿರುವ ಎಲ್ಲ ಘೋರಿಗಳು ಶಿಲಾಯುಗಕ್ಕೆ ಸಂಬಂಧಿಸಿದ್ದು ಇವುಗಳ ಕಾಲವನ್ನು ಕ್ರಿ.ಪೂ.5000 ಅಂದರೆ ಸುಮಾರು 7000 ವರ್ಷಗಳು ಪ್ರಾಚೀನವೆಂದು ಹೇಳಬಹುದು.

ಅಳಲುಕುಪ್ಪೆ ಮತ್ತು ಚಕ್ರಬಾವಿಯ ಸ್ಥಳೀಯರು ಇದನ್ನು ಪಾಂಡವ ಗುಡಿಗಳೆಂದು ಕರೆಯುತ್ತಾರೆ. ಪಾಂಡವರು ವನವಾಸದ ಸಂದರ್ಭದಲ್ಲಿ ಇಲ್ಲಿ ಬಂದು ತಂಗಿದ್ದರು. ಅವರು ತಂಗುವುದಕ್ಕೋಸ್ಕರ ಈ ಗುಡಿಗಳನ್ನು ನಿರ್ಮಿಸಿಕೊಂಡಿದ್ದರು. ವೃತ್ತಾಕಾರದ ಬಂಡೆಯ ಕೆಳಗೆ ಸರ್ಪಗಳಿವೆ. ಬಂಡೆಗಳನ್ನು ಮುಟ್ಟಿದರೆ ಸರ್ಪ ಕಚ್ಚುತ್ತವೆ. ಅಂತಹ ಶಕ್ತಿ ಇದೆ ಈ ಬಂಡೆಗಳಲ್ಲಿ ಎಂದು ಅಲ್ಲಿನ ಸ್ಥಳೀಯ ನಂಜುಂಡಪ್ಪ ಹೇಳುತ್ತಾರೆ. ಅದೇ ರೀತಿ ಚಕ್ರಬಾವಿಯ ಬೆಟ್ಟದ ಸಿದ್ದಪ್ಪನ ಗುಡ್ಡೆ ಹತ್ತಿರ ಶಿಲಾಯುಗದ ಜನರು ವಾಸಿಸುತ್ತಿದ್ದ ಕುರುಹುಗಳಿವೆ. ಒಟ್ಟಾರೆ ಅಳಲುಕುಪ್ಪೆಯಲ್ಲಿರುವ ಈ ಘೋರಿಗಳು ಮತ್ತು ಚಕ್ರಬಾವಿಯ ಬೆಟ್ಟದ ಸಿದ್ದಪ್ಪನ ಗುಡ್ಡೆಯಲ್ಲಿರುವ ಕೆಲವು ಕುರುಹುಗಳು ಇತಿಹಾಸ ಪೂರ್ವಕಾಲದೆಂದು ನಿಸ್ಸಂದೇಹವಾಗಿ ಹೇಳಬಹುದು. ಈ ಆಧಾರದಿಂದ ಚಕ್ರಬಾವಿಗೆ ಸುಮಾರು 7000 ವರ್ಷಗಳ ಇತಿಹಾಸವಿದೆಯೆಂದು ಹೇಳಬಹುದು.

---

[2] ಡಾ.ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ-ಸಂಸ್ಕೃತಿ, ಪು.13

ಚಕ್ರಬಾವಿ ಗ್ರಾಮ ನಿಷ್ಪತ್ತಿ :– ಹದಿಮೂರನೇ ಶತಮಾನದ ಶಾಸನದಲ್ಲಿ ಚಕ್ರಬಾವಿಯನ್ನು 'ಚಕ್ಕರಬಾವಿ' ಎಂದು ಕರೆಯಲಾಗಿದೆ. ಅನಂತರದ ಕೆಲವು ಶಾಸನಗಳಲ್ಲಿ ಚಕ್ರಬಾವಿ ಎಂಬ ಉಲ್ಲೇಖಗಳಿವೆ. ಪುರಾಣ ಕಾಲದಲ್ಲಿ ಚಕ್ರಬಾವಿಯನ್ನು ಸುದರ್ಶನಪುರಿ, ಚಕ್ರಪುರಿ ಎಂದೆಲ್ಲ ಕರೆಯುತ್ತಿದ್ದರೆಂದು ಗ್ರಾಮಸ್ಥರು ಹೇಳುತ್ತಾರೆ. ಆದರೆ ಇದಕ್ಕೆ ಸರಿಯಾದ ದಾಖಲೆಗಳಿಲ್ಲ. ವಿಷ್ಣುವಿನ ಸುದರ್ಶನಚಕ್ರವು ಬಾವಿಯೊಳಗೆ ಬಿದ್ದಿದ್ದರಿಂದ ಚಕ್ರಬಾವಿ ಗ್ರಾಮವು 'ಸುದರ್ಶನ ಪುರಿ'ಯಾಯಿತು. ಆನಂತರ ಚಕ್ರಪುರಿಯಾಗಿ ಇಂದು ಚಕ್ರಬಾವಿಯಾಗಿದೆ ಎನ್ನುತ್ತಾರೆ ಗ್ರಾಮಸ್ಥರು.

ವೇಣುಗೋಪಾಲಸ್ವಾಮಿ ದೇವಾಲಯದ ಹತ್ತಿರ ಒಂದು ಪ್ರಾಚೀನ ಕಾಲದ ವೃತ್ತಾಕಾರದ ಬಾವಿಇತ್ತೆಂದು ಚಕ್ರಬಾವಿಯ ಕೆಲವು ಹಿರಿಯರು ಹೇಳುತ್ತಾರೆ. ಈ ಪ್ರಾಚೀನ ಕಾಲದ ಬಾವಿಯಿಂದಲೇ ಬಹುಶಃ ಈ ಊರಿಗೆ 'ಚಕ್ರಬಾವಿ' ಎಂಬ ಹೆಸರು ಬಂದಿರಬಹುದು. ಇದಕ್ಕೆ ಪೂರಕವೆಂಬಂತೆ ಚಕ್ರಬಾವಿಯಲ್ಲಿ ಅನೇಕ ಬಾವಿಗಳು ಇವೆ. ಇದೊಂದು ವೈಷ್ಣವ ಸಂಪ್ರದಾಯದ ಗ್ರಾಮವಾಗಿದೆ.

ಚಕ್ರಬಾವಿಯನ್ನು ಆಳ್ವಿಕೆ ಮಾಡಿದ ರಾಜಮನೆತನಗಳು ಮತ್ತು ಪಾಳೇಗಾರರು :–

ಇತಿಹಾಸ ಕಾಲದಲ್ಲಿ ಕರ್ನಾಟಕವನ್ನು ಮೌರ್ಯರು, ಶಾತವಾಹನರು, ಕದಂಬರು, ಗಂಗರು, ಬಾದಾಮಿ, ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯ, ಯಲಹಂಕ ನಾಡಪ್ರಭುಗಳು ಮತ್ತು ಕೆಲವು ಪಾಳೆಯಗಾರರು ಆಳ್ವಿಕೆ ಮಾಡಿದ್ದಾರೆ. ಆದರೆ ಚಕ್ರಬಾವಿಯಲ್ಲಿ ಕೆಲವು ರಾಜಮನೆತನಗಳು ಆಳ್ವಿಕೆ ಮಾಡಿದ್ದಕ್ಕೆ ಶಾಸನ ಆಧಾರಗಳಿವೆ.

ಕದಂಬರು :– ಕದಂಬರು ಕರ್ನಾಟಕವನ್ನಾಳಿದ ಮೊದಲ ರಾಜ ಮನೆತನದವರು. ಸುಮಾರು 200 ವರ್ಷಗಳ ತಮ್ಮ ಆಳ್ವಿಕೆಯಲ್ಲಿ ಕರ್ನಾಟಕ ಹಾಗೂ ಭಾರತೀಯ ಸಂಸ್ಕೃತಿಗೆ ಅಮೂಲ್ಯ ಕಾಣಿಕೆ ಸಲ್ಲಿಸಿದ್ದಾರೆ. ಕ್ರಿ.ಶ.ನಾಲ್ಕನೇ ಶತಮಾನದ ಮಧ್ಯಭಾಗದ ಹೊತ್ತಿಗೆ ಬನವಾಸಿಯಲ್ಲಿ ತಲೆಯೆತ್ತಿದ ಕದಂಬರು, ಬನವಾಸಿಯನ್ನೇ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಇವರ ಪ್ರಮುಖ, ಮೊದಲ ದೊರೆ ಮಯೂರವರ್ಮ.

ಚಕ್ರಬಾವಿಯಿಂದ ಸಮಾರು 15–20 ಕಿ.ಮೀ. ದಲ್ಲಿರುವ ಕಲ್ಯದ ಕಲ್ಲೇಶ್ವರ ದೇವಾಲಯದ ಶಿವಲಿಂಗವು ಕ್ರಿ.ಶ. 3–4ನೇ ಶತಮಾನದ್ದಾಗಿದೆ ಅದು ಕದಂಬರ ಕಾಲದ

ಶಿವಲಿಂಗವಾಗಿದ್ದು ಕದಂಬರ ಆಳ್ವಿಕೆ ಚಕ್ರಬಾವಿ ಸೇರಿದಂತೆ ಇಲ್ಲಿಯವರೆಗೂ ಹಬ್ಬಿತ್ತು ಎಂದು ಊಹಿಸಬಹುದು.

ಗಂಗರು :- ಕರ್ನಾಟಕದಲ್ಲಿ ಕದಂಬರ ನಂತರ ಗಂಗರು ಅಧಿಕಾರಕ್ಕೆ ಬಂದರು. ಕರ್ನಾಟಕದ ಇತಿಹಾಸದಲ್ಲಿ ಗಂಗರ ಆಳ್ವಿಕೆ ಚಿರಸ್ಮರಣೀಯವಾಗಿದೆ. ಗಂಗರು ಸುಮಾರು ಆರು ಶತಮಾನಗಳ ಕಾಲ ಕರ್ನಾಟಕದ ಬಹುಭಾಗವನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಿದ್ದರು. ರಾಜ್ಯದ ಭದ್ರತೆಯ ದೃಷ್ಟಿಯಿಂದ ಅನುಕೂಲಕ್ಕೆ ತಕ್ಕಂತೆ ರಾಜಧಾನಿಯನ್ನು ಆಗಿಂದಾಗ್ಗೆ ಬದಲಾಯಿಸುತ್ತಿದ್ದಂತೆ ಕಂಡುಬರುತ್ತದೆ. ಕೋಲಾರ ಅವರ ಮೊದಲ ರಾಜಧಾನಿ. ಹಿಂದೆ ಇದನ್ನು ಕೋಲಾಹಲ ಅಥವಾ ಕುವಲಾಲ ಎಂದು ಕರೆಯುತ್ತಿದ್ದರು. ಎರಡನೆಯ ರಾಜಧಾನಿ ತಲಕಾಡು. ಮೂರನೆಯ ರಾಜಧಾನಿ ಚನ್ನಪಟ್ಟಣದ ಬಳಿ ಇರುವ ಮಾಕುಂದ ಮತ್ತು ನೆಲಮಂಗಲದ ಮಣ್ಣೆಯೂ ಇವರ ಉಪ ರಾಜಧಾನಿಗಳಾಗಿದ್ದವು.

ಚಕ್ರಬಾವಿಯಿಂದ ಸುಮಾರು 20–25 ಕಿ.ಮೀ ದೂರದಲ್ಲಿರುವ ಚನ್ನಪಟ್ಟಣದ ಮಾಕುಂದ, ನೆಲಮಂಗಲದ ಮಣ್ಣೆಯೂ ಇವರ ಉಪ ರಾಜಧಾನಿಗಳಾಗಿದ್ದವು. ಗಂಗರ ಕಾಲದಲ್ಲಿ ಕರ್ನಾಟಕದಲ್ಲಿ 96,000 ಹಳ್ಳಿಗಳಿದ್ದವೆಂದು ಶಾಸನಗಳಿಂದ ತಿಳಿದು ಬರುತ್ತದೆ. ಈ 96,000 ಹಳ್ಳಿಗಳಲ್ಲಿ ಚಕ್ರಬಾವಿಯಿಂದ 10–15 ಕಿ.ಮೀ.ದಲ್ಲಿರುವ ದೊಡ್ಡಗಂಗವಾಡಿ, ಚಿಕ್ಕಗಂಗವಾಡಿಗಳು ಸೇರಿದ್ದವು. ಆದ್ದರಿಂದ ಗಂಗರು ಗಂವಾಡಿಯವರೆಗೆ ಅಧಿಕಾರ ನಡೆಸಿದ್ದರೆಂದ ಮೇಲೆ ಚಕ್ರಬಾವಿಯೂ ಅವರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹೇಳಬಹುದು. ಚಕ್ರಬಾವಿಯಿಂದ 10–15 ಕಿ.ಮೀ ದೂರದಲ್ಲಿರುವ ಕುಪ್ಪೆಪಾಳ್ಯದಲ್ಲಿ ಗಂಗರ ದೊರೆ ಶಿವಮಾರನನ್ನು ಉಲ್ಲೇಖಿಸುವ ಶಾಸನವಿರುವುದು[3] ಚಕ್ರಬಾವಿಯವರೆಗೆ ಗಂಗರ ಆಳ್ವಿಕೆ ಇತ್ತು ಎಂಬುದಕ್ಕೆ ಪೂರಕ ದಾಖಲೆಯಾಗಿದೆ.

ಚೋಳರು :- ಕರ್ನಾಟಕದಲ್ಲಿ 11ನೇ ಶತಮಾನದಲ್ಲಿ ಚೋಳರ ಆಳ್ವಿಕೆಯಿತ್ತು. ಚೋಳರು ತಮ್ಮ ಆಳ್ವಿಕೆಯ ಸಂದರ್ಭದಲ್ಲಿ ಅನೇಕ ದಾನಧರ್ಮ ನೀಡಿದ್ದರೆಂದು ಕರ್ನಾಟಕದ ತಮಿಳು ಶಾಸನಗಳಿಂದ ತಿಳಿದು ಬರುತ್ತದೆ. ಚಕ್ರಬಾವಿಯಿಂದ 15 ಕಿ.ಮೀ ದೂರದಲ್ಲಿರುವ ತಿರುಮಲೆ ಶ್ರೀರಂಗನಾಥ ಸ್ವಾಮಿ ದೇವಾಲಯವು ಚೋಳರ ಕಾಲವೆಂದು ಕರೆಯುತ್ತಾರೆ. ಚಕ್ರಬಾವಿಯಿಂದ 5–6 ಕಿ.ಮೀ ದಲ್ಲಿರುವ ಸಾತನೂರು ಗ್ರಾಮದ ಪುಂಡರೀಕ ದೇವಾಲಯದ ಅಧಿಷ್ಠಾನದಲ್ಲಿ ಚೋಳರ ಕಾಲದ ಒಂದು ತಮಿಳು ಶಾಸನವಿದೆ. ಆದ್ದರಿಂದ ಚಕ್ರಬಾವಿಯೂ ಚೋಳರ ಆಳ್ವಿಕೆಗೆ ಒಳಪಟ್ಟಿತ್ತೆನ್ನಬಹುದು.

---

[3] ಡಾ.ಎಚ್.ಎಸ್.ಗೋಪಾಲರಾವ್ (ಸಂ). ನೆಲದಸಿರಿ, ಪು.37

ಹೊಯ್ಸಳರು :- ಚಾಲುಕ್ಯರ ಪತನಾಂತರ ಕರ್ನಾಟಕದಲ್ಲಿ ತಲೆ ಎತ್ತಿದವರು ಹೊಯ್ಸಳರು. ಇವರು ಸ್ವಲ್ಪಕಾಲ ಚಾಲುಕ್ಯರ ಮಾಂಡಲಿಕರಾಗಿದ್ದು ಕ್ರಿ.ಶ.11ನೇ ಶತಮಾನದ ಆದಿಭಾಗದಲ್ಲಿ ಪ್ರಾಬಲ್ಯಕ್ಕೆ ಬಂದರು. ಸುಮಾರು ಮೂರು ಶತಮಾನಗಳಿಗೂ ದೀರ್ಘಕಾಲ ಕರ್ನಾಟಕದ ಬಹುಭಾಗವನ್ನು ತಮ್ಮ ಆಳ್ವಿಕೆಗೊಳಪಡಿಸಿಕೊಂಡಿದ್ದರು. ಸುಭದ್ರ ಸರ್ಕಾರ ವ್ಯವಸ್ಥೆಗೊಳಿಸಿದ್ದು ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಒಂದು ಹೊಸ ಅಧ್ಯಾಯವನ್ನೇ ಆರಂಭಿಸಿದರು. ಹೊಯ್ಸಳರು ನಿರ್ಮಿಸಿದ ನೂರಾರು ದೇವಾಲಯಗಳು ಕನಾಟಕದಲ್ಲೇ ಏಕೆ, ಇಡೀ ಭಾರತದ ಇತಿಹಾಸದಲ್ಲೇ ಉತ್ತಮ ಮಾದರಿಯದಾಗಿವೆ. ಆ ಮೂಲಕ ಕರ್ನಾಟಕದ ಕೀರ್ತಿಯನ್ನು ಉತ್ತುಂಗ ಶಿಖರಕ್ಕೆ ಒಯ್ದಿದ್ದಾರೆ.

ಹೊಯ್ಸಳರು ದೋರಸಮುದ್ರ (ಹಳೇಬೀಡು)ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ್ದ ಪ್ರಸಿದ್ಧ ರಾಜಮನೆತನ. ಚಕ್ರಬಾವಿಯಲ್ಲಿ ಹೊಯ್ಸಳ ಆಳ್ವಿಕೆ ಇತ್ತು ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಮಾಡಬಳ್ ಹೋಬಳಿಯ ಉಡುವೆಗೆರೆ ಶಾಸನದಲ್ಲಿ ಚಕ್ರಬಾವಿಯ ಉಲ್ಲೇಖ ಇರುವುದನ್ನು ಗಮನಿಸಬಹುದು. ಕ್ರಿ.ಶ.1315ರ ಉಡುವೆಗೆರೆ ಶಾಸನದಲ್ಲಿ[4] ಹೊಯ್ಸಳರ ವೀರಬಲ್ಲಾಳನ ಮಹಾ ಪ್ರಧಾನರಾದ ದೇವಪಗೌಡ, ಚೌಡಪನವರು ದಾಸರಾಯಹಳ್ಳಿ ನಾಡನಲ್ಲಿರುವ ಉಡುವೆಗೆರೆಯನ್ನು ಚಕ್ರಬಾವಿಯ ಮಂಜಶೆಟ್ಟಿಯ ಮಗ ಕೋಟೆಯಪ್ಪ ಶೆಟ್ಟಿಗೆ ಕೊಡುಗೆಯಾಗಿ ನೀಡಿದ ವಿವರವಿದೆ. ಚಕ್ರಬಾವಿಗೆ ಹೊಂದಿಕೊಂಡಿರುವ ಹುಲಿಕಟ್ಟೆ ಗ್ರಾಮದ ವೀರಗಲ್ಲು ಶಾಸನದ[5] ಲಿಪಿ ಹೊಯ್ಸಳ ಕಾಲದ್ದಾಗಿದೆ.

ಚಕ್ರಬಾವಿಯ ಅರಳೀಮರ ಕೆಳಗೆ ಮುರಿದು ಬಿದ್ದಿರುವ ವೇಣುಗೋಪಾಲ ಸ್ವಾಮಿ ವಿಗ್ರಹವು ಹೊಯ್ಸಳರ ಕಾಲದ ಶಿಲ್ಪವಾಗಿದೆ. ಈ ಶಿಲ್ಪವನ್ನು ಬಳಪದ ಕಲ್ಲಿನಿಂದ ಕೆತ್ತಲಾಗಿದ್ದು, ಬೇಲೂರು, ಹಳೇಬೀಡನಲ್ಲಿ ನಿರ್ಮಿಸಿರುವ ದೇವಾಲಯಗಳ ಕಲ್ಲಿಗೂ, ಈ ಕಲ್ಲಿಗೂ ಸಾಮ್ಯತೆಯಿದೆ. ಅದೇ ರೀತಿ ಚಕ್ರಬಾವಿಯಿಂದ 5–6 ಕಿ.ಮೀ ದೂರದಲ್ಲಿರುವ ಹೊಯ್ಸಳರ ಕಾಲ ಪುಂಡರೀಕನ ವಿಗ್ರಹ ಇದೇ ಬಳಪದ ಕಲ್ಲಿನಿಂದ ನಿರ್ಮಿಸಲಾಗಿದೆ. ಇಷ್ಟೆಲ್ಲಾ ಆಧಾರಗಳಿಂದ ಹೊಯ್ಸಳರ ಆಳ್ವಿಕೆ ಚಕ್ರಬಾವಿಯವರೆಗೂ ಹಬ್ಬಿತ್ತು ಎನ್ನಬಹುದು.

ವಿಜಯನಗರ ಸಾಮ್ರಾಜ್ಯ :- ವಿಜಯನಗರ ಅರಸರು ಹಂಪಿ ಮತ್ತಿತರ ಸ್ಥಳಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡಿದರು. ಕ್ರಿ.ಶ.1484ರ ಹುಲಿಕಟ್ಟೆ

---

[4] EC.IX, ಮಾಗಡಿ–10, ಹೋಬಳಿ, ಪು.100

[5] ಡಾ.ವಿ.ಜಯರಾಮ್, ವಿಜಯವಾಣಿ ಪುಟ–4 ದಿನಾಂಕ 25.3.2017

ಶಾಸನದಲ್ಲಿ[6] ವಿಜಯನಗರದ ಸಾಳ್ವ ಮನೆತನದ ಸಾಳ್ವ ನರಸಿಂಹನು ಆಳ್ವಿಕೆ ಮಾಡಿದ್ದರ ಉಲ್ಲೇಖವಿದೆ. ಈ ಶಾಸನದಲ್ಲಿ ಸಾಳ್ವ ನರಸಿಂಹನು ಸಿದ್ದದೇವ ಒಡೆಯರ ಮಗ ಗಂಗೆಯ ಒಡೆಯರಿಗೆ ಗದ್ದೆ, ಬೆದ್ದಲು, ಹಣ, ಭತ್ತ ಸಕಲ ಆದಾಯ ಬರುವ ಗ್ರಾಮವನ್ನು 20 ಗದ್ಯಾಣ ಹೊನ್ನಿಗೆ ಶೋತ್ರಿಯಾಗಿ (ಕೆಲವು ಜನರ ಸಮ್ಮುಖದಲ್ಲಿ) ಕೊಟ್ಟಿದ್ದಾನೆ. ಈ ಶಾಸನದಲ್ಲಿ ಗ್ರಾಮದ ಹೆಸರು ಅಳಿಸಿಹೋಗಿದೆ. 'ಆ ಗ್ರಾಮವನ್ನು' ಎಂಬ ಮಾತ್ರ ಉಲ್ಲೇಖವಿದೆ. ಈ ಶಾಸನವು ಹುಲಿಕಟ್ಟೆ ಹೊಲದಲ್ಲಿ ಸಿಕ್ಕಿರುವುದರಿಂದ ಬಹುಶಃ ಆ ಗ್ರಾಮ ಹುಲಿಕಟ್ಟೆ ಅಥವಾ ಚಕ್ರಬಾವಿ ಗ್ರಾಮವಾಗಿರಬಹುದು. ಈ ಶಾಸನದಿಂದ ಚಕ್ರಬಾವಿ – ಹುಲಿಕಟ್ಟೆಯಲ್ಲಿ ವಿಜಯನಗರದವರು ಆಳ್ವಿಕೆ ನಡೆಸಿದ್ದೆಂದು ತಿಳಿಯಬಹುದು.

ಯಲಹಂಕ ನಾಡಪ್ರಭುಗಳು:– ಯಲಹಂಕ ನಾಡಪ್ರಭುಗಳು ಯಲಹಂಕ, ಮಾಗಡಿ, ಬೆಂಗಳೂರು ಮುಂತಾದ ಪ್ರದೇಶಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡುತ್ತಿದ್ದರು. ಚಕ್ರಬಾವಿ ಗ್ರಾಮವನ್ನು ಯಲಹಂಕ ನಾಡಪ್ರಭುಗಳಾದ ಒಂದನೇ ಕೆಂಪೇಗೌಡ (ಬೆಂಗಳೂರು ಕೆಂಪೇಗೌಡ), ಇಮ್ಮಡಿ ಕೆಂಪೇಗೌಡ (ಮಾಗಡಿ ಕೆಂಪೇಗೌಡ), ಮುಮ್ಮಡಿ ಕೆಂಪೇಗೌಡ, ಮುಮ್ಮಡಿ ದೊಡ್ಡ ವೀರಪ್ಪಗೌಡ, ಮುಮ್ಮಡಿ ಕೆಂಪವೀರಪ್ಪಗೌಡ ಮುಂತಾದವರು ಆಳ್ವಿಕೆ ನಡೆಸಿದ್ದಕ್ಕೆ ಶಾಸನಾಧಾರಗಳಿವೆ. ಮುಮ್ಮಡಿ ಕೆಂಪ ವೀರಪ್ಪಗೌಡ ಯಲಹಂಕ ನಾಡಪ್ರಭುಗಳ ಕೊನೆಯ ರಾಜ ಕಾಲದಲ್ಲಿ ಚಕ್ರಬಾವಿಯು ಹೋಬಳಿ ಕೇಂದ್ರವಾಗಿ ಉಚ್ಛ್ರಾಯ ಸ್ಥಿತಿಯಲ್ಲಿದ್ದುದು ಗಮನಾರ್ಹ ವಿಷಯವಾಗಿದೆ.

ಮಾಗಡಿ ಕೆಂಪೇಗೌಡ (ಇಮ್ಮಡಿ ಕೆಂಪೇಗೌಡ) :– ಈತನು ಬೆಂಗಳೂರು ಕೆಂಪೇಗೌಡನ ಮಗ. ಕ್ರಿ.ಶ.1621–1667ವರೆಗೆ ಆಳ್ವಿಕೆ ಮಾಡಿದ್ದನೆಂದು ಶಾಸನ ಗಳಿಂದ ತಿಳಿದುಬರುತ್ತದೆ. ಇವನ ಆಳ್ವಿಕೆಯ ಕಾಲದಲ್ಲಿ ಅನೇಕ ಧರ್ಮಕಾರ್ಯ ಗಳನ್ನು ಮಾಡಿದ್ದಾನೆ. ಚಕ್ರಬಾವಿಯಲ್ಲಿ ಇವನ ಆಳ್ವಿಕೆ ಇತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ.

ಕ್ರಿ.ಶ.1630ರಲ್ಲಿ ಮಾಗಡಿ ಸೀಮೆಯ ಕಂಚುಗಾರಹಳ್ಳೀ, ಹಾಲುಸಿಂಗನಹಳ್ಳಿ ಗ್ರಾಮಗಳನ್ನು ಮಾಗಡಿ ರಾಮೇಶ್ವರ ದೇವಾಲಯದ ದೀಪಾರಾಧನೆ, ರಥೋತ್ಸವ ಮುಂತಾದ ಕಾರ್ಯಗಳಿಗೋಸ್ಕರ ದಾನ ನೀಡಿದರು.[7] ಕ್ರಿ.ಶ.1631ರಲ್ಲಿ ಕಲ್ಯ, ಮಾಡಬಳ್, ತಿರುಮಲೆ, ಹರತಿ, ಮಾಗಡಿ ಸ್ಥಳಗಳಲ್ಲಿ ನರಸಿಂಹ ಭಟ್ಟರಿಗೆ ಪಂಚಾಂಗದ ಹಕ್ಕನ್ನು[8] ನೀಡಿದ್ದನು. ಈ

---

[6] EC.IX ಮಾಗಡಿ–32, ಸಾತನೂರು ಹೋಬಳಿ, ಪು. 112

[7] EC.IX ಮಾಗಡಿ–1 ಪು. 93

[8] EC.IX ಮಾಗಡಿ 84, ಪು.97

ಸಂದರ್ಭದಲ್ಲಿ ಕಲ್ಯದ ಕಲ್ಲಿನಾಥ ದೇವರಿಗೆ ನೀಡಿದ್ದಾನೆ. ಇಮ್ಮಡಿ ಕೆಂಪೇಗೌಡ ನೀಡಿರುವ ದಾನದ ಊರುಗಳು ಚಕ್ರಬಾವಿಯ ಹತ್ತಿರದ ಗ್ರಾಮಗಳೇ ಆಗಿವೆ.

ಮುಮ್ಮಡಿ ಕೆಂಪೇಗೌಡ (3ನೇ ಕೆಂಪೇಗೌಡ) :- ಈತನು ಮಾಗಡಿ ಕೆಂಪೇಗೌಡ ಪುತ್ರನಾಗಿದ್ದು ಕ್ರಿ.ಶ.1656-1674ರ ವರೆಗೆ ಆಳ್ವಿಕೆ ಮಾಡಿದ್ದನೆಂದು ಶಾಸನಗಳಿಂದ ತಿಳಿಯುತ್ತದೆ. ಈತನು ಮಳೆಯ ಕೆಂಪರಾಯನೆಂದು, ರಾಜ್ಯದಲ್ಲಿ ಮಳೆ ಇಲ್ಲದಾಗ ತನ್ನ ಭಕ್ತಿಯಿಂದ ಮಳೆ ಕರೆದೆನೆಂದು ಜನಪದರು ನಂಬುತ್ತಾರೆ. ಈತನು ಕೆಂಪಸಾಗರದ ಕೆರೆಯನ್ನು ಕಟ್ಟಿಸಿದನೆಂದು ಶಾಸನಗಳಿಂದ ತಿಳಿದು ಬರುತ್ತದೆ.

ಕ್ರಿ.ಶ.1658ರ ಅರಳಕುಪ್ಪೆ ಶಾಸನದಲ್ಲಿ[9] ಮುಮ್ಮಡಿ ಕೆಂಪೇಗೌಡರು ಚಕ್ರಬಾವಿಯಲ್ಲಿ ಆಳ್ವಿಕೆ ನಡೆಸಿದ್ದನೆಂದು ತಿಳಿದುಬರುತ್ತದೆ. ಈತನು ಕಾಶಿಯಲ್ಲಿ (ಶಿವಗಂಗೆ)ಯಲ್ಲಿ ಒಂದು ಮಠವನ್ನು ಕಟ್ಟಿಸಿ, ಆ ಮಠದಲ್ಲಿ ಒಂದು ಶಿವಲಿಂಗವನ್ನು ಪ್ರತಿಷ್ಠಾಪಿಸಿ ಆ ಮಠಕ್ಕೆ ಚಕ್ರಬಾವಿ ದಾಖ್ಲೆಯ ಅರಳಕುಪ್ಪೆ ಗ್ರಾಮವನ್ನು ದಾನ ನೀಡಿದನು. (ಶಿವಗಂಗೆಯನ್ನು ದಕ್ಷಿಣ ಕಾಶಿ ಎಂದು ಕರೆಯುತ್ತಾರೆ) ಕ್ರಿ.ಶ.1656ರಲ್ಲಿ ಶೇಷಯ್ಯಂಗಾರ್ ಅವರಿಗೆ ಸಿದ್ದಪ್ಪನ ಹಳ್ಳಿಯನ್ನು ಕ್ರಿ.ಶ.1674ರಲ್ಲಿ ಅನೇಕ ಬ್ರಾಹ್ಮಣರಿಗೆ ಕೆಂಪಸಾಗರ, ಶ್ರೀಪತಿಹಳ್ಳೀ, ಹಾಲಶೆಟ್ಟಿಹಳ್ಳಿಗಳಲ್ಲಿ ಹೊಲಗಳನ್ನು ದಾನ ನೀಡಿದ್ದನು.[10]

ಮುಮ್ಮಡಿ ದೊಡ್ಡ ವೀರಪ್ಪಗೌಡ :- ಈತನು ಕ್ರಿ.ಶ.1681-1688 ರವರೆಗೆ ರಾಜ್ಯಭಾರ ಮಾಡಿದನು. ಈತನು ಕವಿಗಳಿಗೆ ಆಶ್ರಯ ನೀಡಿ ಏಕಾಂಬರ ದೀಕ್ಷಿತರಿಂದ ವೀರಭದ್ರ ವಿಜಯ ಕೃತಿಯನ್ನು ಬರೆಸಿದ್ದನು.[11] ಕ್ರಿ.ಶ.1684ರ ಶಾಸನದಲ್ಲಿ ಮುಮ್ಮಡಿ ದೊಡ್ಡ ವೀರಪ್ಪಗೌಡನನ್ನು ಚಕ್ರಬಾವಿಯಲ್ಲಿ ಆಳ್ವಿಕೆ ನಡೆಸಿದಕ್ಕೆ ದಾಖಲೆಯಿದೆ. ಈ ಶಾಸನದಲ್ಲಿ ಮುಮ್ಮಡಿ ದೊಡ್ಡ ವೀರಪ್ಪಗೌಡನು ಮಾಗಡಿ ಸೀಮೆಗೆ ಸೇರಿದ ಕಲ್ಲುದೇವನಹಳ್ಳಿ, ನೇರಲವಾಡಿ, ಸಾತನೂರುಗಳಲ್ಲಿ ಕೆರೆ ಕಟ್ಟಿಸಿ ಚಕ್ರಬಾವಿಯ ಗ್ರಾಮದಲ್ಲಿ ಹೊಲ, ಗದ್ದೆ, ಮನೆಯನ್ನು ತಮ್ಮ ತಂದೆ-ತಾಯಿಗಳಿಗೆ ಪುಣ್ಯವಾಗಲಿ ಎಂದು ಮಾಗಡಿ ಶ್ರೀ ರಾಮೇಶ್ವರ ಸನ್ನಿದಾನದಲ್ಲಿ ಲಕ್ಷ್ಮೀಪತಿ ಭಟ್ಟರಿಗೆ ದಾನ ನೀಡಿದ ವಿವರವಿದೆ.[12] ಇದೇ ಶಾಸನದ ಹಿಂಭಾಗದಲ್ಲಿ ಚಕ್ರಬಾವಿಯಿಂದ 3-4ಕಿ.ಮೀ ದೂರದಲ್ಲಿರುವ ಸೀಗೆಕುಪ್ಪೆ ಗ್ರಾಮವನ್ನು ಶೃಂಗೇರಿಮಠಕ್ಕೆ, ಅರಳುಕುಪ್ಪೆ ಗ್ರಾಮವನ್ನು ಶಿವಗಂಗೆ ಮಠಕ್ಕೆ ದಾನ ನೀಡಿ ಸಹಿ ಹಾಕಿದ್ದಾನೆ.

---

[9] EC.IX ಮಾಗಡಿ-35 ಸಾತನೂರು ಹೋಬಳಿ, ಪು.113

[10] EC.IX ಮಾಗಡಿ-5, ಪು.98

[11] ಕರ್ನಾಟಕ ಪರಂಪರೆ, ಸಂಪುಟ-2, ಪು.187

[12] EC.IX ಅನುಬಂಧ ಸಂಪುಟ, ಮಾಗಡಿ-86, ಪು.97

ಕ್ರಿ.ಶ.1681ರ ಶಾಸನದಲ್ಲಿ[13] ದೊಡ್ಡ ವೀರಪ್ಪಗೌಡನು 15 ಜನ ಬ್ರಾಹ್ಮಣರಿಗೆ ಮಾಗಡಿ ಸೀಮೆಗೆ ಸೇರಿದ ಕಲಿಕೆರೆ, ಡೊಂಕನಪುರ ಗ್ರಾಮಗಳನ್ನು ದಾನ ನೀಡಿದ್ದನೆಂದು ತಿಳಿಯುತ್ತದೆ. ಕ್ರಿ.ಶ.1688ರ ಶಾಸನದಲ್ಲಿ[14] ಮುಮ್ಮಡಿ ವೀರಪ್ಪಗೌಡನು ಮೇಲುಕೋಟೆ ಚೆಲುವನಾರಾಯಣ ಸ್ವಾಮಿ, ಮಹಾಲಕ್ಷ್ಮಿ ದೇವಾಲಯ ಮತ್ತು ಮಾಗಡಿ ತಿರುವೆಂಗಳನಾಥ ದೇವರಿಗೆ ಉತ್ಸವಗಳ ವೆಚ್ಚಕ್ಕೋಸ್ಕರ ಮಾಗಡಿ ಸೀಮೆಗೆ ಸೇರಿದ ಬೇಡರಹಳ್ಳಿ, ತಿರುಮಲೆ ಗ್ರಾಮಕ್ಕೆ ಸೇರಿದ ಹಳ್ಳಿಗಳಿಂದ ಬರುವ ಎಲ್ಲ ಆದಾಯವನ್ನು ತಿರುಮಲಯ್ಯ ಎಂಬ ಬ್ರಾಹ್ಮಣನಿಗೆ ದಾನ ನೀಡಿದನೆಂದು ತಿಳಿಯುತ್ತದೆ. 3ನೇ ದೊಡ್ಡ ವೀರಪ್ಪಗೌಡನು ದಾನ ನೀಡಿದ ಗ್ರಾಮಗಳು ಚಕ್ರಬಾವಿಯ ಹತ್ತಿರದ ಗ್ರಾಮಗಳೇ ಆಗಿವೆ.

ಮುಮ್ಮಡಿ ಕೆಂಪವೀರಪ್ಪಗೌಡ :- ಈತನು 3ನೇ ದೊಡ್ಡವೀರಪ್ಪನಗೌಡನ ಮೊಮ್ಮಗ ಇವರು ಕ್ರಿ.ಶ.1708-1728ರ ವರೆಗೆ ಆಳ್ವಿಕೆ ಮಾಡಿದ್ದನು. ಈತನು ಕೆಂಪೇಗೌಡರ ವಂಶಸ್ಥರ ಕೊನೆಯ ಹಾಗೂ ಪ್ರಬಲ ರಾಜನಾಗಿದ್ದನೆಂದು ಶಾಸನಗಳಿಂದ ತಿಳಿದ ಬರುತ್ತದೆ. ಇವನ ಕಾಲದಲ್ಲಿ ಚಕ್ರಬಾವಿಯು ಹೋಬಳಿ ಕೇಂದ್ರವಾಗಿದ್ದು, ಚಕ್ರಬಾವಿಯಲ್ಲಿ ಕೋಟೆಯನ್ನು ಕಟ್ಟಿಸಿದ್ದು, ಒಂದು ದೊಡ್ಡ ಸೈನ್ಯದ ದಂಡು ಚಕ್ರಬಾವಿಯಲ್ಲಿತ್ತು. ಇದಕ್ಕೆ ಸಾಕ್ಷಿಯೆಂದರೆ ಚಕ್ರಬಾವಿಯಲ್ಲಿರುವ ನೂರಾರು ವೀರ ಮಾಸ್ತಿಗಲ್ಲು ಮತ್ತು ವೀರಗಲ್ಲುಗಳು, ಹೋಬಳಿ ಕೇಂದ್ರವೆಂದ ಮೇಲೆ ಚಕ್ರಬಾವಿ ದೊಡ್ಡ ಪಟ್ಟಣವೇ ಆಗಿತ್ತು. ಜನಜಂಗುಳಿ ಹೆಚ್ಚಾಗಿದ್ದು, ಶತ್ರುಗಳೂ ಆಗಾಗ ಚಕ್ರಬಾವಿಯ ಮೇಲೆ ದಾಳಿ ಮಾಡುತ್ತಿದ್ದರು. ಕೊನೆಗೆ ಒಂದು ದೊಡ್ಡ ಯುದ್ಧವಾಗಿ ಹಲವಾರು ಸೈನಿಕರು ಸತ್ತಾಗ ಅವರ ಮಡದಿಯರು ಸಹಗಮನ ಮಾಡಿಕೊಂಡಿದ್ದಾರೆ. ಆದ್ದರಿಂದಲೇ ಚಕ್ರಬಾವಿಯಲ್ಲಿ ಇಷ್ಟೊಂದು ವೀರಮಾಸ್ತಿಗಲ್ಲುಗಳಿರುವುದು.

ಇನ್ನೊಂದು ಮಹತ್ವದ ವಿಷಯವೆಂದರೆ ಇತ್ತೀಚೆಗೆ ಚಕ್ರಬಾವಿಯಲ್ಲಿ ಪತ್ತೆಯಾದ ಒಂದು ವೀರಗಲ್ಲು ಬಹುಶಃ ಮುಮ್ಮಡಿ ಕೆಂಪವೀರಪ್ಪಗೌಡನ ಸೇನಾಧಿಪತಿಯ ವೀರಗಲ್ಲಾಗಿರಬಹುದು. (ಇದನ್ನು ಅಶ್ವಮೇಧಯಾಗದ ಕಲ್ಲು ಎಂದು ತಪ್ಪಾಗಿ ಪತ್ರಿಕೆಯಲ್ಲಿ ಬರೆಯಲಾಗಿತ್ತು) ಈ ಶಿಲ್ಪದಲ್ಲಿ ಒಬ್ಬ ವೀರ ಖಡ್ಗವಿಡಿದು ನಿಂತಿದ್ದಾನೆ. ಪಕ್ಕದಲ್ಲಿ ಪಟ್ಟದ ಕುದುರೆ ನಿಂತಿದೆ. (ಛತ್ರಿಯುಳ್ಳ ಕುದುರೆ) ಅನೇಕ ಸೈನಿಕರು ಯುದ್ಧ ಭೂಮಿಯಲ್ಲಿ ಹೋರಾಡುತ್ತಿದ್ದಾರೆ. ಇವೆಲ್ಲ ಆಧಾರದಿಂದ ಚಕ್ರಬಾವಿಯಲ್ಲಿ ದೊಡ್ಡ ಯುದ್ಧವಾಗಿರಬಹುದು. ಬಹುಶಃ ಮುಮ್ಮಡಿ ಕೆಂಪವೀರಪ್ಪಗೌಡ ಕಾಲದಲ್ಲೇ ನಡೆದಿರಬಹುದು. ಈತನು ಚಕ್ರಬಾವಿಯಲ್ಲಿ

---

[13] EC.IX ಮಾಗಡಿ-8 ತಿರುಮಲೆ, ಪು.99

[14] ಡಾ.ಎಂ.ಜಿ.ಮಂಜುನಾಥ, (ಸಂ.)ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶಾಸನ ಸಂಖ್ಯೆ.72, ಪು.140

ತಮ್ಮ ಪೂರ್ವಿಕರು ಕಟ್ಟಿಸಿದ ಕೆರೆಗಳ ಮಾದರಿಯಲ್ಲಿ ಇಲ್ಲಿಯೂ ದೊಡ್ಡ ಕೆರೆಯನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ.

ಕ್ರಿ.ಶ.1710ರ ಶಾಸನದಲ್ಲಿ[15] ಮುಮ್ಮಡಿ ಕೆಂಪವೀರಪ್ಪಗೌಡನು ಚಕ್ರಬಾವಿಯನ್ನು ಹೋಬಳಿ ಕೇಂದ್ರವನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದರ ಉಲ್ಲೇಖವಿದೆ. ಈತನು ಚಕ್ರಬಾವಿ ಹೋಬಳಿಗೆ ಸೇರಿದ ಕೆಂಪನಹಳ್ಳಿಯನ್ನು ಮುಡುಂಬೆ ತಿಮ್ಮಪ್ಪಯ್ಯನ ಮಗ ವೆಂಕಪ್ಪಯ್ಯನಿಗೆ ದಾನ ನೀಡಿದನೆಂದು ತಿಳಿಯುತ್ತದೆ. ಈ ಶಾಸನದ ಕೊನೆಯಲ್ಲಿ 'ಕೆಂಪವೀರಪ್ಪ' ಎಂಬ ಸಹಿಯನ್ನು ಮಾಡಿದ್ದಾನೆ.

ಇವನ ಇತರೆ ಧರ್ಮಕಾರ್ಯಗಳು ಈ ರೀತಿಯಿವೆ. ಕ್ರಿ.ಶ.1708, 1713, 1714ರ ಶಾಸನಗಳ[16] ಪ್ರಕಾರ ಬೆಟ್ಟಹಳ್ಳಿ ಶ್ರೀ ಉರಿ ಗದ್ದಿಗೇಶ್ವರ ಮಠಕ್ಕೆ ಯಲಿಚವಾಡಿ, ಗುರುಸಿದ್ದಾಪುರ, ಕೋಟೆಪಾಳ್ಯ ಗ್ರಾಮಗಳಲ್ಲಿ ಭೂಮಿಯನ್ನು ದಾನ ನೀಡಿದ್ದಾನೆ. ಕ್ರಿ.ಶ.1712ರಲ್ಲಿ[17] ಮಾಗಡಿ ಸೋಮೇಶ್ವರ ದೇವರ ಪ್ರತಿಷ್ಠಾಪನೆ ಕಾಲದಲ್ಲಿ ಕಲ್ಯದ ಕೃಷ್ಣಪಾಳ್ಯವನ್ನು ವೆಂಕಟಯ್ಯನಿಗೆ ದಾನ ನೀಡಿದ್ದಾನೆ. ಇದೆ ಕಾಲದಲ್ಲಿ ಜುಟ್ಟನಹಳ್ಳಿ ಮತ್ತು ಶ್ರೀಪತಿಹಳ್ಳಿಗಳನ್ನು ಸೋಮೇಶ್ವರ ದೇವರ ವೆಚ್ಚಕ್ಕೋಸ್ಕರ ದಾನ ನೀಡಿದನು. ಇಷ್ಟೇ ಅಲ್ಲದೆ ಸೋಮೇಶ್ವರ ಗುಡಿಯ ಪ್ರತಿಷ್ಠಾಪನೆ ಕಾಲದಲ್ಲಿ 24 ಜನ ಬ್ರಾಹ್ಮಣ ಕುಟುಂಬಗಳಿಗೆ ದಾನ ನೀಡಿದನು.

ಈ ಎಲ್ಲಾ ಮಾಹಿತಿಗಳಿಂದ ಮುಮ್ಮಡಿ ಕೆಂಪವೀರಪ್ಪಗೌಡನು ಸೋಮೇಶ್ವರನ ಅನನ್ಯಭಕ್ತನಾಗಿದ್ದು, ಸೋಮೇಶ್ವರ ದೇವಾಲಯದ ಪ್ರತಿಷ್ಠಾಪನೆ ದಿನದಂದು ಮಾಗಡಿ ಸೀಮೆಯಲ್ಲಿ ಹಬ್ಬದ ವಾತಾವರಣವಿದ್ದು, ಇದರ ನೆನಪಿನಲ್ಲಿ ದೇವರಿಗೆ ಮತ್ತು ಬ್ರಾಹ್ಮಣರಿಗೆ ಯಥೇಚ್ಛವಾಗಿ ದಾನ ನೀಡಿದನು. ಇಷ್ಟೊಂದು ಪ್ರಬಲವಾಗಿ ಆಳ್ವಿಕೆ ಮಾಡುತ್ತಿದ್ದಾಗ ಅಕ್ಕಪಕ್ಕ ರಾಜರುಗಳು ಸಹಿಸುತ್ತಿರಲಿಲ್ಲ. ಕೊನೆಗೆ ಮೈಸೂರು ಮಹಾರಾಜರಾದ ಜಯಚಾಮರಾಜ ಒಡೆಯರ್‌ನಿಂದ ಸೋಲನ್ನು ಅನುಭವಿಸುತ್ತಾರೆ. ಮುಮ್ಮಡಿ ಕೆಂಪವೀರಪ್ಪಗೌಡ ಕ್ರಿ.ಶ.1728ರ ವರೆಗೆ ಬದುಕಿದ್ದು ಮೈಸೂರು ಮಹಾರಾಜರು ತನ್ನನ್ನು ಬಂಧಿಸಿಟ್ಟಿದ್ದರೆಂದು ತನ್ನ ಸಂಬಂಧಿಯರಾದ ಹುಲಿಕಲ್ಲಿನ ಕೃಷ್ಣರಾಜಗೌಡರಿಗೆ ಬರೆದ ಕಟ್ಟಕಡೆಯ ಪತ್ರದಿಂದ ತಿಳಿಯುತ್ತದೆ.[18] ಆ ಪತ್ರ ಈ ರೀತಿಯಿದೆ.

---

[15] ಡಾ.ಎಂ.ಜಿ.ಮಂಜುನಾಥ, (ಸಂ.)ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶಾಸನ ಸಂಖ್ಯೆ.76, ಪು.154

[16] ಡಾ.ಎಂ.ಜಿ.ಮಂಜುನಾಥ, (ಸಂ.)ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶಾಸನ ಸಂಖ್ಯೆ.75, ಪು.152 ಮತ್ತು ಶಾಸನ ಸಂಖ್ಯೆ 83, 84 (ಪು.172)

[17] ಡಾ.ಎಂ.ಜಿ.ಮಂಜುನಾಥ, (ಸಂ.)ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶಾಸನ ಸಂಖ್ಯೆ.77, ಪು.156

[18] ಡಾ.ಎಂ.ಜಿ.ಮಂಜುನಾಥ, (ಸಂ.)ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶಾಸನ ಸಂಖ್ಯೆ.91, ಪು.189

1. ಶ್ರೀಮತು ಕೆಂಪ ವೀರಪ್ಪಗೌಡರು ಚಿರಂಜೀವಿ ಹುಲಿಕಲ್ಲು ನಮ್ಮ ಕೃಷ್ಣರಾಜಗೌಡರಿಗೆ ಮಾಡುವ ಆಶೀರ್ವಾದ ಆದಾಗಿ ಪಾಲ್ಗುಣ ಬ೧೦ ರವರೆಗೆ ಶ್ರೀರಂಗಪಟ್ಟದಲು ನಾಉ ಕ್ಷೇಮದಲ್ಲಿ ಯಿದೇವೆ ಅಲ್ಲಿಯಿರುವಂತ ಸಕಲರು ಸಹಾ

2. ನಿಂಮ ಕ್ಷೇಮಕ್ಕೆ ಬರಸಿ ಕಳುಯಿಸುವದು ತರವಾಯ ನಮಗೆ ಸೋಮನಾತನ ವಿಲಾಸದಿಂದ ಯೀ ದುರ್ದಶೆ ಬಂದುಯಿರುವದು ಸರಿಯಷ್ಟೆಯೀಗ ನಂಮದೇಹಸ್ತಿತಿ ಬಹುತರ ಉಪದ್ರವಾಗಿಯಿದೆ. ಸೋಮನಾತನ ಪಾದಗಳಲು ಐಖ್ಯವಾಗೋ

3. ದೆಸೆ ತೋರುತ ಯಿದೆ ನಿರ್ವಾಹ ತೋರಲಿಲ್ಲ. ನಂಮ ವಂಶಕ್ಕೆ ಬಾಧ್ಯರು ನೀವೆ ಅಲ್ಲದೆ ಮತ್ತೆ ಬೇರೆಯಿಲ್ಲ. ಆದ್ದರಿಂದ ನಿಂಮ ಬಳಿಗೆ ನಂಮ ಸೋಮನ ಕೈಯಲ್ಲಿ ನಂಮ ಮುಖ್ಯ ಪಟ್ಟದ ಆಯುಧಾ ಸಿಖಿಸರ ಸಹಾ ಕೊಟ್ಟು ಕಳುಯಿಸಿ ಯಿದೇವೆ ನೀಉ ಬುದ್ಧಿ

4. ವಂತರಾಗಿ ಕಾಲಾನುಗುಂಣ್ಯವಾಗಿ ಯಿದ್ದುಕೊಂಡು ನಂಮ ದೇಹ ಸ್ತಿತಿ ವಿಚಾರಿಸಿಕೊಂಡು ಆ ತರುವಾಯ ಆಗತಕ್ಕ ಕೆಲಸಗಳಂನು ಆಗುಮಾಡಿಸುವದು ಕಡಮೆ ವಿಚಾರ ವಾಲೆ ಮುಖಾಂತರ

5. ಬರೆಯುತಕದು ಅಲ್ಲವಲ್ಲ ಯೀ ಸೋಮನ ಬಾಯಿಮಾತಿನಿಂದ ಯಲ್ಲ ವಿವರಉ ತಿಳಿಯುತ್ತಯೆದೆ (ಇವನು ನಂ) ಬಿದವನು ಯೀವಿವರ ನಿಂಮ ಮನಸ್ಸಿಗೆ ತೋ (ರೋ) ಹಾಗೆ ಮಾಡಿಸುವದು ನಿಮಗೆ ಆಪ್ತರಾದವರ ಯಿಲಿಗೆ ಕಳುಯಿಸುವದು. ಕೆಂಪಯ್ಯ.

ಈ ಶಾಸನದ ಸಾರಾಂಶ ಈ ರೀತಿಯಿದೆ.

ಯಲಹಂಕ ನಾಡಪ್ರಭುಗಳ ವಂಶದ ಕಟ್ಟಕಡೆಯ ಅರಸನಾದ ಕೆಂಪವೀರಪ್ಪಗೌಡರನ್ನು ಮೈಸೂರಿನ ಒಡೆಯರು ಬಂಧಿಸಿ ಶ್ರೀರಂಗಪಟ್ಟಣದಲ್ಲಿ ಸೆರೆಯಲ್ಲಿಟ್ಟಿದಾಗ ಬಂಧನದಲ್ಲಿಟ್ಟಿದ್ದ ಕೆಂಪವೀರಪ್ಪಗೌಡರು ಹುಲಿಕಲ್ಲಿನ ಕೃಷ್ಣರಾಜಗೌಡರಿಗೆ ಬರೆದ ಗುಪ್ತ ಪತ್ರ.

ಕೆಂಪವೀರಪ್ಪಗೌಡರು ತಮ್ಮ ನಂತರ ತಮ್ಮ ವಂಶಕ್ಕೆ ಹಕ್ಕುದಾರರಾಗಿ ಉಳಿದಿದ್ದ ಹುಲಿಕಲ್ಲಿನ ಕೃಷ್ಣರಾಜಗೌಡರಿಗೆ ತಮ್ಮ ನಂಬಿಗಸ್ತ ಸೋಮನ ಮೂಲಕ ತಮ್ಮ ಪಟ್ಟದಕತ್ತಿ, ಶಿಖಿಸರಗಳನ್ನು ಕೊಟ್ಟು ಕಳುಹಿಸಿ ಈ ಪತ್ರ ತರುತ್ತಿರುವ ಸೋಮನು ತನ್ನ ನಂಬಿಗಸ್ತನಾಗಿದ್ದಾನೆ. ಈತನ ಬಳಿ ನೀವು ಎಲ್ಲಾ ವಿಚಾರಗಳನ್ನು ಕೇಳಿ ತಿಳಿದುಕೊಂಡು ನಂತರ ಮಾಡತಕ್ಕ ಕೆಲಸಗಳನ್ನು ಆಗು ಮಾಡಿಸುವುದು ಎಂದು ಗೂಢವಾಗಿ ಬರೆದಿದ್ದಾರೆ. ಅಂದರೆ ತನ್ನನ್ನು ಬಂಧನದಿಂದ ಬಿಡಿಸುವ ವ್ಯವಸ್ಥೆ ಮಾಡಬೇಕೆಂಬುದಾಗಿ ಅವರ ಮನೋಭಿಲಾಷೆಯಾಗಿತ್ತೆಂದು

ತೋರುತ್ತದೆ. ಎಲ್ಲವನ್ನೂ ಕಾಗದದ ಮೂಲಕ ಬರೆಯಲು ಸಾಧ್ಯವಿಲ್ಲ. ಈ ಸೋಮನ ಬಾಯಿಮಾತಿನಿಂದ ಎಲ್ಲ ವಿವರಗಳನ್ನು ತಿಳಿಯುವುದು ನಿಮಗೆ ಆಪ್ತರಾದವರನ್ನು ಇಲ್ಲಿಗೆ ಕಳುಹಿಸುವುದು ಎಂಬುದಾಗಿ ಬರೆದಿರುವುದು ಗಮನಾರ್ಹ. ಪತ್ರದ ಕಡೆಯಲ್ಲಿ ಕೆಂಪವೀರಪ್ಪಗೌಡ ಒಪ್ಪವಾದ 'ಕೆಂಪಯ್ಯ' ಎಂಬ ಸಹಿಯಿದೆ.

ಕೆಂಪೇಗೌಡರ ವಂಶಾವಳಿ

ಭೈರೇಗೌಡ (ರಣಭೈರೇಗೌಡ)

|

ಜಯಗೌಡ (ಜಯಪ್ಪಗೌಡ)

|

ಗಿಡ್ಡೇಗೌಡ

|

ನಾಚೇಗೌಡ (ನಂಜೇಗೌಡ)

|

ಕೆಂಪನಾಚೇಗೌಡ (ಕೆಂಪನಂಜೇಗೌಡ)

|

1ನೇ ಕೆಂಪೇಗೌಡ (ಬೆಂಗಳೂರು ಕೆಂಪೇಗೌಡ)

|

ಇಮ್ಮಡಿ ಕೆಂಪೇಗೌಡ (ಮಾಗಡಿ ಕೆಂಪೇಗೌಡ)

|

ಮುಮ್ಮಡಿ ಕೆಂಪೇಗೌಡ (ಕೆಂಪಸಾಗರ ಕೆರೆಯನ್ನು ಕಟ್ಟಿಸಿದವನು)

|

ಮುಮ್ಮಡಿ ದೊಡ್ಡ ವೀರಪ್ಪಗೌಡ

|

ಇಮ್ಮಡಿ ಕೆಂಪವೀರಪ್ಪಗೌಡ

|

ಮುಮ್ಮಡಿ ಕೆಂಪವೀರಪ್ಪಗೌಡ
(ಚಕ್ರಬಾವಿಯನ್ನು ಹೋಬಳಿ ಕೇಂದ್ರವನ್ನಾಗಿ ಮಾಡಿಕೊಂಡವನು)

ಮೈಸೂರು ಅರಸರು :- ಮೈಸೂರು ಅರಸರು ಮೈಸೂರು ಶ್ರೀರಂಗಪಟ್ಟಣ ಮುಂತಾದ ಪ್ರದೇಶಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಮಾಗಡಿ ಸೀಮೆಯು ಕ್ರಿ.ಶ.1732ರ ನಂತರ ಮೈಸೂರು ಅರಸರ ಕೈವಶವಾಯಿತು. ಕ್ರಿ.ಶ.1737ರ ಶಾಸನದ[19] ಪ್ರಕಾರ ಚಕ್ರಬಾವಿಯು ಮೈಸೂರು ಮಹಾರಾಜ ಚಾಮರಾಜ ಒಡೆಯರ್‌ರವರ ಆಳ್ವಿಕೆಯಲ್ಲಿತ್ತೆಂದು ತಿಳಿದು ಬರುತ್ತದೆ. ಚಕ್ರಬಾವಿಯಿಂದ 2 ಕಿ.ಮೀ ದೂರದಲ್ಲಿರುವ ಹಲಸಬೆಲೆ ಗ್ರಾಮ ಶಾಸನದಲ್ಲಿ ಚಾಮರಾಜ ಒಡೆಯರ್ ಹಲಸಬೆಲೆ ಗ್ರಾಮವನ್ನು ಒಬ್ಬ ಬ್ರಾಹ್ಮಣನಿಗೆ ದಾನ ನೀಡಿದ್ದರ ಉಲ್ಲೇಖವಿದೆ.

ಚಕ್ರಬಾವಿಯ ಪಾಳೆಯಗಾರರು :- ಚಕ್ರಬಾವಿಯಲ್ಲಿ ಮರಳದೇವ ಮತ್ತು ಚಿಕ್ಕಪ್ಪ ಒಡೆಯ ಎಂಬ ಇಬ್ಬರು ಪಾಳೆಯಗಾರರು ಆಳ್ವಿಕೆ ಮಾಡುತ್ತಿದ್ದರೆಂದು ಶಾಸನದಿಂದ ತಿಳಿಯುತ್ತದೆ. ಚಕ್ರಬಾವಿಯ ಯಲಗದಹಳ್ಳೀ ಶಾಸನದ[20] ಪ್ರಕಾರ ಚಕ್ರಬಾವಿ ಸಿಂಹಾಸನದ ಪಟ್ಟದ ಮರುಳದೇವರು ಮತ್ತು ಚಿಕ್ಕಪ್ಪ ಒಡೆಯದೇವರು ಹೆರೂರ ಗವೀಮಠದ ಸಿದ್ದವೀರಣ್ಣ ವಡೇ ದೇವರಿಗೆ ಮರುಳದೇವರ ಕಟ್ಟೆ ಮತ್ತು ಚಿಕ್ಕವಡೆಯರ ಕಟ್ಟೆಯ ಹತ್ತಿರ ಭೂಮಿಯನ್ನು ದಾನ ನೀಡಿದರು.

ಮರುಳದೇವ ಮತ್ತು ಚಿಕ್ಕಪ್ಪ ವಡೆಯರು ಅಣ್ಣತಮ್ಮಂದಿರಾಗಿದ್ದು, ಹಿಂದೆ ಹೋಬಳಿ ಕೇಂದ್ರವಾಗಿದ್ದ ಚಕ್ರಬಾವಿಯನ್ನು ಆಡಳಿತ ಕೇಂದ್ರ ಮಾಡಿಕೊಂಡು ಮುಮ್ಮಡಿ ಕೆಂಪವೀರಪ್ಪ ಗೌಡನು ಕಟ್ಟಿಸಿದ ಕೋಟೆಯಲ್ಲಿದ್ದುಕೊಂಡು ಈ ಚಕ್ರಬಾವಿಯ ಸುತ್ತಮುತ್ತಲ ಗ್ರಾಮಗಳನ್ನು ಆಳುತ್ತಿದ್ದಿರಬಹುದು. ಈ ರೀತಿಯಾಗಿ ಚಕ್ರಬಾವಿಯಲ್ಲಿ ಕದಂಬರಿಂದ ಯಲಹಂಕ ನಾಡಪ್ರಭುಗಳೂ ಸೇರಿದಂತೆ ಪಾಳೆಯಗಾರರೂ ಆಳ್ವಿಕೆ ನಡೆಸಿದ್ದರೆಂದು ಶಾಸನಗಳಿಂದ ಹೇಳಬಹುದು.

---

[19] EC.IX ಮಾಗಡಿ-37, ಸಾತನೂರು ಹೋಬಳಿ. ಪು.113

[20] EC.IX ಮಾಗಡಿ-33, ಸಾತನೂರು ಹೋಬಳಿ, ಪು.112

ಚಕ್ರಬಾವಿಯನ್ನಾಳಿದ ಶಾಸನಾಧಾರಿತ ರಾಜರು

ವೀರಬಲ್ಲಾಳ (ಹೊಯ್ಸಳರು)

।

ಸಾಳುವ ನರಸಿಂಹ (ವಿಜಯನಗರ ಸಾಮ್ರಾಜ್ಯ)

।

ಇಮ್ಮಡಿ ಕೆಂಪೇಗೌಡ ಅಥವಾ ಎರಡನೇ ಕೆಂಪೇಗೌಡ (ಮಾಗಡಿ ಕೆಂಪೇಗೌಡ)

।

ಮುಮ್ಮಡಿ ಕೆಂಪೇಗೌಡ

।

ಮುಮ್ಮಡಿ ದೊಡ್ಡ ವೀರಪ್ಪಗೌಡ

।

ಮುಮ್ಮಡಿ ಕೆಂಪವೀರಪ್ಪಗೌಡ (ಚಕ್ರಬಾವಿಯ ಅಚ್ಚುಮೆಚ್ಚಿನ ರಾಜ)

।

ಚಾಮರಾಜ ಒಡೆಯರ್ (ಮೈಸೂರು ಅರಸರು)

।

ಮರುಳದೇವ– ಚಿಕ್ಕಪ್ಪ ಒಡೆಯದೇವ

(ಚಕ್ರಬಾವಿಯ ಪಾಳೆಯಗಾರರು)

ಅಧ್ಯಾಯ – 3

ಚಕ್ರಬಾವಿ ಗ್ರಾಮದ ಧಾರ್ಮಿಕ ಇತಿಹಾಸ

ಅಧ್ಯಾಯ - ಮೂರು

ಚಕ್ರಬಾವಿ ಗ್ರಾಮದ ಧಾರ್ಮಿಕ ಇತಿಹಾಸ

"ಮಾನವನ ಸಾಮಾಜಿಕ ಸ್ಥಿರತೆ ಹಾಗೂ ಭದ್ರತೆಯನ್ನು ನೀಡುವಲ್ಲಿ ಮುಂಚೂಣಿಯಲ್ಲಿರುವುದು ಧರ್ಮ. ಧರ್ಮದ ಸಾರವಾದ ಪಾವಿತ್ರ್ಯತೆಯ ಅಡಿಪಾಯದಲ್ಲಿ ಸಮಾಜವೇ ಮೂರ್ತಿವೆತ್ತ ಸ್ವರೂಪದಂತಿದೆ" ಎಂಬುದಾಗಿ ಕ್ರಿಯಾತ್ಮಕವಾದಿ ಸಮಾಜಶಾಸ್ತ್ರಜ್ಞ ಡರ್ಖೀಮ್ ಅಭಿಪ್ರಾಯಪಡುತ್ತಾನೆ. ಧರ್ಮ ವ್ಯಕ್ತಿಗತ ಹಾಗೂ ಸಾಮೂಹಿಕ ಅಥವಾ ಸಾಮಾಜಿಕ ಪ್ರಾಮುಖ್ಯವುಳ್ಳ ಕಾರ್ಯಗಳಲ್ಲಿನ್ನು ನಿರ್ವಹಿಸುತ್ತದೆ.

ಮಾನವ ವಿಕಾಸದ ಇತಿಹಾಸದೊಂದಿಗೆ ತಳುಕು ಹಾಕಿಕೊಂಡು ಬಂದಿರುವ ಪದವೆಂದರೆ 'ಧರ್ಮ', 'ಧರ್ಮ' ಎನ್ನುವ ಪದಕ್ಕೆ ಸಂವಾದಿಯಾಗಿ ರಿಲಿಜನ್ (Religion) ಎನ್ನುವ ಪದವನ್ನು ಇಂಗ್ಲೀಷ್ ಭಾಷೆಯಲ್ಲಿ ಬಳಸಲಾಗುತ್ತದೆ. ಲ್ಯಾಟಿನ್ ಭಾಷೆಯಲ್ಲಿ ಬಳಕೆಯಲ್ಲಿರುವ 'ರಿಲಿಗೋ' ಎನ್ನುವ ನಾಮಪದದಿಂದ ನಿಷ್ಪತ್ತಿ ಹೊಂದಿದೆ.

ಭಾರತೀಯ ಸಂದರ್ಭದಲ್ಲಿ 'ಧರ್ಮ' ಎನ್ನುವ ಪದಕ್ಕೆ 'ಧಾರಣ' ಮಾಡಿದುದು' ನೀತಿ (ನಿಯಮ), 'ನ್ಯಾಯ', 'ಕರ್ತವ್ಯ' ಅಥವಾ 'ಪವಿತ್ರ ದಯೆ' ಅಥವಾ 'ಕರುಣೆ' ಮುಂತಾದ ಇನ್ನೂ ಅನೇಕ ಅರ್ಥಗಳು ಕಂಡು ಬರುತ್ತವೆ. ಸಂಮೃದ್ಧವಾಗಿ ಕೇಳಿಬರುವ 'ಧರ್ಮಕಾರ್ಯ', 'ಧರ್ಮಕ್ಷೇತ್ರ', ಧರ್ಮದ್ರೋಹ, 'ಧರ್ಮಶಾಲ', 'ಧರ್ಮಸಂಕಟ', 'ಧರ್ಮರಾಜ' ಮುಂತಾದ ಇತ್ಯಾದಿ ಪದಗಳಲ್ಲಿ ಗುಣವಾಚಕವಾಗಿ ಕಂಡು ಬರುವ 'ಧರ್ಮ' ಎನ್ನುವ ಪದ ಇಡೀ ಮಾನವ ಬದುಕಿನ ಅರ್ಥಪೂರ್ಣಸತ್ವದ ಅವಿಭಾಜ್ಯ ಸಂಕೇತವಾಗುತ್ತದೆ.

ಸ್ವಾಮಿ ವಿವೇಕಾನಂದರು ಹೇಳುವಂತೆ ಮೃಗಸದೃಶನಾದವನ್ನು ಮಾನವನ್ನನಾಗಿ ಮಾಡುವ ಮಾನವನನ್ನು ದೇವನ್ನಾಗಿ ಮಾಡುವ ಭಾವನೆಯೇ ಧರ್ಮ. ಧರ್ಮವನ್ನು ನಾವು ರಕ್ಷಿಸಿದರೆ ಧರ್ಮವು ನಮ್ಮನ್ನು ರಕ್ಷಿಸುತ್ತದೆ ಎನ್ನುತ್ತಾರೆ. ಪ್ರತಿಯೊಂದು ಪ್ರದೇಶದ ಜನ ತನ್ನದೇ ಆದ ಧರ್ಮವನ್ನು ಅನುಸರಿಸುತ್ತಾರೆ. ಅಂತೆಯೇ ಕರ್ನಾಟಕವು ಸರ್ವಧರ್ಮ ಸಮನ್ವಯ ರಾಜ್ಯವಾಗಿದೆ. ಕರ್ನಾಟಕದಲ್ಲಿ ಪ್ರಾಚೀನ ಕಾಲದಲ್ಲಿ ಬೌದ್ಧಧರ್ಮ, ಜೈನಧರ್ಮ, ಶೈವಧರ್ಮ, ವೀರಶೈವ, ವೈಷ್ಣವ ಧರ್ಮಗಳು ಅಸ್ತಿತ್ವದಲ್ಲಿದ್ದವು. ಚಕ್ರಬಾವಿ ಗ್ರಾಮದಲ್ಲಿ ವೈಷ್ಣವ ಮತ್ತು ಶೈವ, ವೀರಶೈವ ಧರ್ಮ ಆಸ್ತಿತ್ವದಲ್ಲಿರುವುದನ್ನು ಶಾಸನಗಳು, ದೇವಾಲಯಗಳು ಮತ್ತು ಶಿಲ್ಪಕಲೆಯಿಂದ ತಿಳಿದುಬರುತ್ತದೆ. ಚಕ್ರಬಾವಿ ಗ್ರಾಮದಲ್ಲಿ ಶೈವ-ವೀರಶೈವ ಮತ್ತು ವೈಷ್ಣವ ಧರ್ಮಗಳು ಜೊತೆ ಜೊತೆಯಲ್ಲಿದ್ದವೆಂದು ತಿಳಿದು ಬರುತ್ತದೆ.

ಚಕ್ರಬಾವಿಯಲ್ಲಿ 12ನೇ ಶತಮಾನದ ಮುಂಚೆ ಅನೇಕ ಧರ್ಮಗಳು ಅಸ್ತಿತ್ವದಲ್ಲಿರಬಹುದು. ಆದರೆ ಅವುಗಳ ಉಲ್ಲೇಖ ದೊರೆಯುವುದಿಲ್ಲ. ನಮಗೆ ಆಧಾರ ದೊರೆಯುವುದು, 12ನೇ ಶತಮಾನದಿಂದ ಈಚೆಗೆ ಚಕ್ರಬಾವಿ ಗ್ರಾಮದ ಕೆರೆ ಬಳಿ ಅರಳಿಮರಳಿ ಕೆಳಗೆ ಒಂದು ವೇಣುಗೋಪಾಲ ಸ್ವಾಮಿ ವಿಗ್ರಹ ಮುರಿದು ಬಿದ್ದಿದೆ. ಇದು 12–13ನೇ ಶತಮಾನದಲ್ಲಿ ರಚನೆಯಾಗಿದ್ದು, ವೈಷ್ಣವ ಧರ್ಮದ ಪರಂಪರೆಗೆ ಸೇರಿದ ಶಿಲ್ಪವಾಗಿದೆ. ಈ ಶಿಲ್ಪವನ್ನು ಹೊಯ್ಸಳರ ಕಾಲದ ಬಳಪದ ಕಲ್ಲಿನಿಂದ ಮಾಡಿದ ಶಿಲ್ಪವಾಗಿದೆ. ಈ ವಿಗ್ರಹವು ಚಕ್ರಬಾವಿಯಲ್ಲಿರುವ ವೇಣು ಗೋಪಾಲಸ್ವಾಮಿ ದೇವಾಲಯದ ಮೂಲ ವಿಗ್ರಹವಾಗಿದೆ. ಚಕ್ರಬಾವಿಯಲ್ಲಿ ವೈಷ್ಣವಧರ್ಮ ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಈ ಶಿಲ್ಪ ಪ್ರಬಲವಾದ ಆಧಾರವಾಗಿದೆ.

ಕ್ರಿ.ಶ.1710ರ ಮುಮ್ಮಡಿ ಕೆಂಪ ವೀರಪ್ಪಗೌಡನ ಶಾಸನ[21] ದಲ್ಲಿ ಯಲಹಂಕ ನಾಡಪ್ರಭು ಮುಮ್ಮಡಿ ಕೆಂಪ ವೀರಪ್ಪಗೌಡನ ಆಳ್ವಿಕೆಯ ಸಂದರ್ಭದಲ್ಲಿ ತಮ್ಮ ಆಳ್ವಿಕೆಗೆ ಸೇರಿದ ಚಕ್ರಬಾವಿ ಹೋಬಳಿಯ ಕೆಂಪನಹಳ್ಳಿ ಗ್ರಾಮಕ್ಕೆ ಪ್ರತಿನಾಮಧೇಯ ವಾದ 'ಶ್ರೀನಿವಾಸಪುರ'ವನ್ನು ಮುಂಡುಂಬೆ ತಿಮ್ಮಪ್ಪಯ್ಯನ ಮಗ ವೆಂಕಪ್ಪಯ್ಯನಿಗೆ ದಾನ ನೀಡಿದನು. ಈ ಶಾಸನದಿಂದ ಚಕ್ರಬಾವಿಯಲ್ಲಿ ವೈಷ್ಣವ ಧರ್ಮ ಅಸ್ತಿತ್ವದಲ್ಲಿತ್ತೆನ್ನಬಹುದು. ಶ್ರೀನಿವಾಸಪುರ, ತಿಮ್ಮಪ್ಪಯ್ಯ, ವೆಂಕಪ್ಪಯ್ಯ ಎಂಬ ಹೆಸರುಗಳು ವೈಷ್ಣವ ಸಂಪ್ರದಾಯದ ಹೆಸರುಗಳಾಗಿವೆ.

ಹೊಯ್ಸಳರ ವೀರಬಲ್ಲಾಳನ ಮಹಾ ಪ್ರಧಾನಿ ದೇವಪ್ಪಗೌಡನ ಮೈದುನ ಚೌಡಪ್ಪನವರು ಚಕ್ರಬಾವಿಯ ಮಂಜ ಶೆಟ್ಟಿ ಮಗ ಕೋಟೆಯಪ್ಪ ಶೆಟ್ಟಿಗೆ ಉಡುವೆಗೆರೆಯನ್ನು ದಾನ ನೀಡಿದ ಶಾಸನವಿದೆ.[22] ಹೊಯ್ಸಳರು ವೈಷ್ಣವ ಮತಾವಲಂಬಿಗಳಾಗಿದ್ದು ಅವರ ಆಳ್ವಿಕೆಗೆ ಸೇರಿದ ಎಲ್ಲ ಸ್ಥಳಗಳಲ್ಲಿ ವೈಷ್ಣವ ಧರ್ಮವನ್ನು ಹರಡಿದ್ದರು. ಆದ್ದರಿಂದ ಚಕ್ರಬಾವಿಯಲ್ಲಿ ಹೊಯ್ಸಳ ಆಳ್ವಿಕೆ ಇದ್ದ ಮೇಲೆ ವೈಷ್ಣವ ಧರ್ಮವೂ ಇತ್ತೆಂದು ಹೇಳಬಹುದು.

ಚಕ್ರಬಾವಿ ಗ್ರಾಮದ ಅರಳಿಮರದ ಕೆಳಗೆ ವೈಷ್ಣವ ಸಂಪ್ರದಾಯದ ಒಂದು ವೀರಮಾಸ್ತಿಗಲ್ಲು ಚಕ್ರಬಾವಿಯಲ್ಲಿ ವೈಷ್ಣವ ಧರ್ಮವಿತ್ತೆಂಬ ಮಾಹಿತಿ ನೀಡುತ್ತದೆ. ಈ ವೀರಮಾಸ್ತಿಗಲ್ಲಿನ ಶಿಲ್ಪದಲ್ಲಿ ಮೂರನೇ ಹಂತದಲ್ಲಿ ಶಂಖ, ಚಕ್ರ ಮತ್ತು ವೈಕುಂಠದ

---

21 ಡಾ. ಎಂ.ಜಿ. ಮಂಜುನಾಥ(ಸಂ) ಯಲಹಂಕ ನಾಡಪ್ರಭುಗಳು ಶಾಸನ ಸಂಪುಟ, ಶಾಸನ ಸಂಖ್ಯೆ–76, ಪು.154.

22 EC - I X, ಮಾಗಡಿ–10, ಸಾತನೂರು ಹೋಬಳಿ. ಪು–100.

ಕಲ್ಪನೆಯನ್ನು ಚಿತ್ರಿಸಲಾಗಿದೆ. ವೈಷ್ಣವ ಧರ್ಮದ ಸ್ತ್ರೀಯೊಬ್ಬಳು ತನ್ನ ಗಂಡ ಸತ್ತಾಗ ಸಹಗಮನ ಮಾಡಿಕೊಂಡಳೆಂದು ಈ ಶಿಲ್ಪದಿಂದ ತಿಳಿದುಬರುತ್ತದೆ.

ಮುಮ್ಮಡಿ ದೊಡ್ಡ ವೀರಪ್ಪಗೌಡನು ಚಕ್ರಬಾವಿ ಗ್ರಾಮದಲ್ಲಿ ಹೊಲ, ಗದ್ದೆ, ಮನೆಗಳನ್ನು ತನ್ನ ತಂದೆ-ತಾಯಿಗಳಲ್ಲಿ ಪುಣ್ಯವಾಗಲೆಂದು ಮಾಗಡಿ ಶ್ರೀ ರಾಮೇಶ್ವರ ಸ್ವಾಮಿಯ ಸನ್ನಿಧಾನದಲ್ಲಿ ವಿಶ್ವಾಮಿತ್ರ ಗೋತ್ರ ಅಶ್ವಲಾಯನ ಸೂತ್ರದ ಲಕ್ಷ್ಮೀಪತಿ ಭಟ್ಟರಿಗೆ ದಾನ ನೀಡಿದ್ದರ ಶಾಸನವಿದೆ.[23] ರಾಮೇಶ್ವರ ಮತ್ತು ಲಕ್ಷ್ಮೀಪತಿ ಇವೆಲ್ಲ ವೈಷ್ಣವ ಸಂಪ್ರದಾಯದ ಹೆಸರುಗಳು. ಈ ಶಾಸನದಿಂದ ಚಕ್ರಬಾವಿಯಲ್ಲಿ ವೈಷ್ಣವಧರ್ಮವಿತ್ತೆಂದು ಹೇಳಬಹುದು.

ಚಕ್ರಬಾವಿಯಿಂದ 15ಕಿಮೀ ದೂರದಲ್ಲಿರುವ ತಿರುಮಲೆ ಶ್ರೀರಂಗನಾಥಸ್ವಾಮಿ ದೇವಾಲಯವು, ವೈಷ್ಣವ ಸಂಪ್ರದಾಯಕ್ಕೆ ಸೇರಿದ ದೇವಾಲಯವಾಗಿದ್ದು ಬ್ರಹ್ಮಾಂಡ ಪುರಾಣದಲ್ಲಿ ಉಲ್ಲೇಖಿಸಿರುವಂತೆ ಸ್ವರ್ಣಾದ್ರಿ, ಮಾಂಡವ್ಯಕುಟಿ-ಮಾಕುಟಿ-ಮಾಗುಡಿ-ಮಾಗಡಿ ಎಂಬ ಕ್ಷೇತ್ರವು ವೈಷ್ಣವ ಸಂಪ್ರದಾಯದ ಅತ್ಯಂತ ಪವಿತ್ರ ಕ್ಷೇತ್ರವಾಗಿದೆ.

ಈ ಕ್ಷೇತ್ರವು ಅಷ್ಟತೀರ್ಥಗಳಿಂದಲೂ, ಅಷ್ಟ ಪರ್ವತಗಳಿಂದಲೂ ಪವಿತ್ರ ಕಣ್ವಾನದಿ ಹಾಗು ಸುಂದರ ಗಿರಿ ಕಾನನಗಳಿಂದ ಕೂಡಿದ ದಿವ್ಯಕ್ಷೇತ್ರವಾಗಿತ್ತು. ಮಾಂಡವ್ಯ, ಕಣ್ವ, ವಶಿಷ್ಠ, ಪುರಂಜಯ, ಶಾಪತಪ, ಪ್ರಹ್ಲಾದ ಮುಂತಾದ ತಪಸ್ವಿಗಳ ತಪೋಭೂಮಿ. ತಿರುಪತಿ ಶ್ರೀನಿವಾಸ ದೇವರ ಆಜ್ಞೆಯಂತೆ ಮಾಂಡವ್ಯ ಋಷಿಗಳು ತಿರುಮಲೆಯ ಸ್ವರ್ಣಾದ್ರಿ ಕ್ಷೇತ್ರದಲ್ಲಿ ಕುಟೀರವನ್ನು ಕಟ್ಟಿಕೊಂಡು ತಪಸ್ಸು ಮಾಡಿದರು. ಆಗ ಒಂದು ದಿನ ಸ್ವಪ್ನದಲಿ ಶ್ರೀನಿವಾಸದೇವರು ಕಾಣಿಸಿಕೊಂಡು "ಉದ್ಭವ ಸಾಲಿಗ್ರಾಮ" ರೂಪದಲ್ಲಿರುವ ನನ್ನನ್ನು ನಿತ್ಯವೂ ಆರಾಧಿಸಿದರೆ ಇಷ್ಟಾರ್ಥ ಸಿದ್ಧಿಯಾಗಿ ಮೋಕ್ಷವು ದೊರಕುವುದು" ಎಂದು ಹೇಳಿದಂತಾಗಿ ಅದರಂತೆಯೇ ಆರಾಧಿಸುತ್ತಿದ್ದರು. ನಂತರ ಪಶ್ಚಿಮಾಭಿಮುಖವಾಗಿ ಭಕ್ತಪ್ರದ ವಿಮಾನದಲ್ಲಿ ಶ್ರೀ ವೆಂಕಟಾಚಲಪತಿ ಸ್ವಾಮಿ ಹಾಗೂ ಪೂರ್ವದಿಕ್ಕಿಗೆ ಸರೋಜಲತಿಕಾ ರೂಪದಿಂದ ಲಕ್ಷ್ಮಿದೇವಿಯನ್ನು ಪಾಂಚರಾತ್ರಾ ಆಗಮ ರೀತಿಯಲ್ಲಿ ಪ್ರತಿಷ್ಠಾಪಿಸಿ ವಶಿಷ್ಠಮಹರ್ಷಿಗಳ ಜೊತೆಗೂಡಿ ಆರಾಧಿಸಿ ಮುಕ್ತಿಯನ್ನು ಪಡೆದರೆಂದು ಹೇಳಲಾಗಿದೆ.

ಮಾಂಡವ್ಯ ಋಷಿಗಳನ್ನು ಉದ್ಧಾರ ಮಾಡಿ ಅನುಗ್ರಹಿಸಿದ್ದರಿಂದ ಶ್ರೀ ಪಶ್ಚಿಮ ವೆಂಕಟಾಚಲಪತಿ ಸ್ವಾಮಿಯು ಮಾಂಡವ್ಯನಾಥನೆಂಬುದಾಗಿ ಹಾಗೂ ರೂಢಿಯಲ್ಲಿ ಶ್ರೀರಂಗನಾಥಸ್ವಾಮಿ ಎಂಬುದಾಗಿ ಈ ಕ್ಷೇತ್ರವು ಪ್ರಸಿದ್ಧಿ ಪಡೆಯಿತು. ಇಲ್ಲಿರುವ ಉದ್ಭವ

---

[23] EC-I X, ಅನುಬಂಧ ಸಂಪುಟ, ಮಾಗಡಿ-85, ಪು-97.

ಸಾಲಿಗ್ರಾಮಕ್ಕೆ ಎಷ್ಟೇ ತೀರ್ಥವನ್ನು ಅಭಿಷೇಕ ಮಾಡಿದರೂ ಒಂದು ಹನಿಯೂ ಸಿಗದಂತೆ ಭೂಮಿಯಲ್ಲಿ ಇಂಗಿಹೋಗುತ್ತದೆ. ಅದು ಎಲ್ಲಿಗೆ ಹೋಗುತ್ತದೆಂದು ಇಲ್ಲಿಯವರೆಗೆ ತಿಳಿಯದೇ ಇರುವುದು ಒಂದು ಪವಾಡ.

ಯಾರಿಗೆ ತಿರುಪತಿ ತಿಮ್ಮಪ್ಪನ ದರ್ಶನ ಮಾಡಲು ಸಾಧ್ಯವಾಗುವುದಿಲ್ಲವೋ ಅಂತಹವರು ಈ ಕ್ಷೇತ್ರದಲ್ಲಿ ಉದ್ಭವ ಸಾಲಿಗ್ರಾಮ ಮತ್ತು ಶ್ರೀ ಪಶ್ಚಿಮ ವೆಂಕಟಾಚಲಪತಿ ದರ್ಶಿಸಿದರೆ ಅಲ್ಲಿಯಷ್ಟೇ ಪುಣ್ಯ, ಇಷ್ಟಾರ್ಥ ಫಲ ಸಿದ್ಧಿಸುವುದೆಂದು ಹೇಳಲಾಗಿದೆ.

ಈ ಉದ್ಭವ ಸಾಲಿಗ್ರಾಮವನ್ನು ದೇವರ ಪಾದದ ಮುಂಭಾಗದ ಕೆಳಗೆ ಕಾಣಬಹುದಾಗಿದೆ. ಒಳಗಿನ ಪ್ರಾಕಾರದಲ್ಲಿ ಗರುಡ, ಆಂಜನೇಯ, ಸರೋಜಲತಿಕಾ ಲಕ್ಷ್ಮಿದೇವಿ ಅಮ್ಮನವರು, ಸೀತಮ್ಮನವರು, ಶ್ರೀರಾಮ, ಶ್ರೀ ವೈಷ್ಣವ ಪರಂಪರೆಯ ಆಳ್ವಾರ್, ಆಚಾರ್ಯರು, ಬೆಳೆಯುವರಂಗ, ಶ್ರೀ ಸುದರ್ಶನ ಆಳ್ವಾರ್‌ರವರ ಪ್ರತ್ಯೇಕ ಗುಡಿಗಳಿವೆ. ಚೋಳರ ಕಾಲವಾದ 11–12ನೇ ಶತಮಾನದಲ್ಲಿ ದ್ರಾವಿಡ ಶೈಲಿಯಲ್ಲಿ ದೇವಸ್ಥಾನವನ್ನು ನಿರ್ಮಿಸಲಾಗಿದೆ. ಮುಂದೆ ಹೊಯ್ಸಳರು, ವಿಜಯನಗರದ ಅರಸರು, ಕೆಂಪೇಗೌಡನ ವಂಶಸ್ಥರು, ಮೈಸೂರಿನ ಅರಸರ ಆಳ್ವಿಕೆಯಲ್ಲಿ ದಾನ–ದತ್ತಿ–ಕೊಡುಗೆಗಳಿಂದ ದೇವಸ್ಥಾನದ ಪೂಜಾ ಕೈಂಕರ್ಯಗಳು ವಿಜೃಂಭಣೆಯಿಂದ ನೆರವೇರುತ್ತಿತ್ತೆಂದು ಶಾಸನಗಳಲ್ಲಿ ಹೇಳಲಾಗಿದೆ. ಈ ಶಾಸನಗಳಲ್ಲಿ ಶ್ರೀ ರಂಗನಾಥಸ್ವಾಮಿಯನ್ನು 'ತಿರುವೇಂಗಡನಾಥ' ಎಂದೂ ಕರೆಯಲಾಗಿದೆ.

ಇಷ್ಟೆಲ್ಲಾ ಪೌರಾಣಿಕ ಹಿನ್ನೆಲೆಯಿರುವ ಶ್ರೀ ಕ್ಷೇತ್ರವು ಇಡೀ ಮಾಗಡಿ ತಾಲ್ಲೂಕಿನ ಆರಾಧ್ಯದೈವವಾಗಿದ್ದು ಅಂತೆಯೇ ಮಾಗಡಿ ತಾಲ್ಲೂಕಿನ ಗ್ರಾಮವಾದ ಚಕ್ರಭಾವಿಯಲ್ಲಿಯೂ ತಿರುಮಲೆ ಶ್ರೀ ರಂಗನಾಥಸ್ವಾಮಿ ವಕ್ತ್ಯಗಳು ಇರುವುದನ್ನು ಕಾಣಬಹುದು. ಈ ಎಲ್ಲಾ ಹಿನ್ನೆಲೆಯಲ್ಲಿ ಚಕ್ರಬಾವಿಯಲ್ಲಿ ವೈಷ್ಣವ ಧರ್ಮ ಅಸ್ತಿತ್ವದಲ್ಲಿತ್ತೆನ್ನಬಹುದು.

ಶೈವಧರ್ಮ :

ಭಾರತದಲ್ಲಿ ಶೈವಧರ್ಮ ಅಸ್ಥಿತ್ವದಲ್ಲಿದ್ದ ಹೊತ್ತಿನಲ್ಲಿ ಕರ್ನಾಟಕದಲ್ಲಿ ಹನ್ನೊಂದನೇ ಶತಮಾನದ ಹೊತ್ತಿಗೆ ಜೈನ ಹಾಗೂ ವೈಷ್ಣವ ಧರ್ಮಗಳ ಪ್ರಾಬಲ್ಯವು ಕುಂಠಿತವಾಗಿದೆ. ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ 'ವೀರಶೈವ' ವೆಂಬ ಇನ್ನೊಂದು ಭಕ್ತಿ ಪಂಥ ಹುಟ್ಟಿತು. ಇದನ್ನು ಪಂಥ ಎನ್ನುವುದಕ್ಕಿಂತ ಧಾರ್ಮಿಕ ಮತ್ತು ವೈಚಾರಿಕತೆಯ ಸಮನ್ವಯವನ್ನು ಸಾಧಿಸಿದ ಶರಣರ ಒಂದು ಚಳುವಳೀ ಅಥವಾ ಆಂದೋಲನ ಎನ್ನಬಹುದು. ಯಜ್ಞ–ಯಾಗಾದಿಗಳ ಹಾಗೂ ದೇವಾಲಯಗಳ ಮೂಲಕ ಮೇಲುಜಾತಿಯವರು

ಕೆಳಜಾತಿಯವರನ್ನು ವ್ಯವಸ್ಥಿತ ಶೋಷಣೆಗೆ ಒಳಪಡಿಸಿ, ಹಿಂದೂ ಧರ್ಮದಲ್ಲಿ ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಗಟ್ಟಿ ಮಾಡಿದ್ದ ಕಾಲದಲ್ಲಿ ಬಸವಣ್ಣ ಜಾತಿ ವ್ಯವಸ್ಥೆಯ ವಿರುದ್ಧ ಬಂಡೆದ್ದು ವೀರಶೈವ ಅಥವಾ ಲಿಂಗಾಯತ ಧರ್ಮವನ್ನು ಸ್ಥಾಪಿಸಿದ. ಬ್ರಾಹ್ಮಣರಿಂದ ಹಿಂದೂ ಚಮ್ಮಾರದವರೆಗೆ ಶ್ರೇಣೀಕೃತವಾಗಿದ್ದ ಎಷ್ಟೋ ಜಾತಿಗಳವರನ್ನು ಹೊಸಧರ್ಮ ಸೇರಲು ಆಹ್ವಾನಿಸಿದ್ದು ಮತ್ತು ಪ್ರೇರೇಪಿಸಿದ್ದು ಅತ್ಯಂತ ಮಹತ್ವದ ಸುಧಾರಣೆಯಾಯಿತು. ಜೊತೆಗೆ ದೇವಾಲಯ ಸಂಸ್ಕೃತಿಯಲ್ಲಿ ರೂಢಿಯಲ್ಲಿದ್ದ ಅರ್ಚಕಶಾಹಿಯನ್ನು ತಪ್ಪಿಸಿ ಜನರಿಗೆ ಸುಲಭವಾಗಿ ಸಾಧ್ಯವಾಗುವ ಇಷ್ಟ ಲಿಂಗಾರ್ಚನೆಯ ಮಹತ್ವವನ್ನು ಬೋಧಿಸಲಾಯಿತು. ದುಡಿವ ವರ್ಗದಿಂದ ಬಂದ ವಚನಕಾರರು ಸಾಮಾಜಿಕ ಸಮಸ್ಯೆಗಳನ್ನು ಎತ್ತಿಕೊಂಡು ಚರ್ಚಿಸಿದ್ದು, ಧಾರ್ಮಿಕ, ಸಾಮಾಜಿಕ, ರಾಜಕೀಯ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಅಸ್ಪೃಶ್ಯಳಾಗಿದ್ದ ಮಹಿಳೆಗೆ ಸಮಾನತೆಯ ಅವಕಾಶ ಕಲ್ಪಿಸಿದ್ದು ವೀರಶೈವಧರ್ಮ ಎನ್ನುವುದು ಹೆಮ್ಮೆಯ ಸಂಗತಿ.

ಒಟ್ಟಿನಲ್ಲಿ ರಾಜಪರ ಮೌಲ್ಯಗಳನ್ನು ಧಿಕ್ಕರಿಸಿದ್ದು, ಧರ್ಮಪರ ಮೌಲ್ಯಗಳನ್ನು ಬೆಳೆಸಿದ್ದು, ಜನಪರ ಮೌಲ್ಯಗಳಿಗಾಗಿ ಹೋರಾಡಿದ್ದು ಹೀಗೆ ಎಲ್ಲಕ್ಕೂ ವೀರಶೈವ ಧರ್ಮವೇ ಕಾರಣ. ಒಟ್ಟಿನಲ್ಲಿ ಜನತೆಗೆ ಬೆಳಕು ನೀಡಿ ಮತ್ತು ನೀಡುತ್ತಾ ಈ ಧರ್ಮ ಇಂದಿಗೂ ಹಸಿರಾಗಿದೆ.

ಕರ್ನಾಟಕದಲ್ಲಿದ್ದಂತೆ ಚಕ್ರಬಾವಿ ಗ್ರಾಮದಲ್ಲಿ ಶೈವಧರ್ಮ ಪ್ರಬಲವಾಗಿತ್ತೆಂದು ಹಲವು ಶಾಸನಗಳು, ಶಿಲ್ಪಗಳು, ದೇವಾಲಯಗಳಿಂದ ತಿಳಿದು ಬರುತ್ತದೆ. ಯಲಹಂಕ ನಾಡಪ್ರಭು 3ನೇ ಕೆಂಪೇಗೌಡನು ದಕ್ಷಿಣ ಕಾಶಿಯಲ್ಲಿ (ಶಿವಗಂಗೆ) ಒಂದು ಮಠವನ್ನು ಕಟ್ಟಿಸಿ ಅಲ್ಲಿ ಒಂದು ಶಿವಲಿಂಗವನ್ನು ಪ್ರತಿಷ್ಠಾಪಿಸಿ ಈ ಮಠಕ್ಕೆ ಅಳಲುಕುಪ್ಪೆಯನ್ನು ದಾನ ನೀಡಿರುವುದು ಅಳಲುಕುಪ್ಪೆ ಶಾಸನದಿಂದ ತಿಳಿದುಬರುತ್ತದೆ.[24] ಅಳಲು ಕುಪ್ಪೆಯು ಚಕ್ರಬಾವಿಗೆ ಹೊಂದಿಕೊಂಡ ಗ್ರಾಮವಾಗಿದ್ದ ಇಲ್ಲಿ ಶೈವ ಧರ್ಮವಿರುವುದಕ್ಕೆ ಪ್ರಮುಖ ಆಧಾರವಾಗಿದೆ.

ಮುಮ್ಮಡಿ ಕೆಂಪ ವೀರಪ್ಪಗೌಡ ಶಾಸನವೊಂದರಲ್ಲಿ[25] ತನ್ನ ತಂದೆ–ತಾಯಿಗಳಿಗೆ ಪುಣ್ಯವಾಗಲೆಂದು ಚಕ್ರಬಾವಿ ಹೋಬಳಿಗೆ ಸೇರಿದ ಕೆಂಪನಹಳ್ಳಿ (ಶ್ರೀನಿವಾಸಪುರ)ನ್ನು ಶಿವಾರ್ಪಿತವಾಗಿ ದಾನಕೊಟ್ಟನೆಂದು ಸಹಿ ಸಮೇತ ಹೇಳಿಕೊಂಡಿದ್ದಾರೆ. ಈ ಶಾಸನದಲ್ಲಿ ಶೈವ ಶ್ಲೋಕವಾದ 'ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯನಗರಾರಂಭ ಮೂಲ ಸ್ಥಂಭಾಯ ಶಂಭವೇ' ಎಂಬ ಶಿವಸ್ತುತಿಯ ಪದ್ಯವನ್ನು ಕಾಣಬಹುದು. ಇದೇ

---

[24] EC - I X. ಮಾಗಡಿ – 35, ಸಾತನೂರು ಹೋಬಳಿ, ಪು. 113.

[25] ಡಾ. ಎಂ.ಜಿ. ಮಂಜುನಾಥ (ಸಂ) ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶಾಸನ ಸಂಖ್ಯೆ–76, ಪುಟ–154.

ಶಾಸನದಲ್ಲಿ 3ನೇ ದೊಡ್ಡ ವೀರಪ್ಪಗೌಡನು ಸೀಗೆಕುಪ್ಪೆ ಗ್ರಾಮವನ್ನು ಶೃಂಗೇರಿ ಮಠಕ್ಕೆ ದಾನ ನೀಡಿದ ವಿವರವಿದೆ.

ಚಕ್ರಬಾವಿಯ ಲಕ್ಷ್ಮಿದೇವಿ ದೇವಾಲಯ ಮುಂದೆ ಒಂದು ಲಿಂಗ ಮುದ್ರೆ ಕಲ್ಲಿದ್ದು ಈ ಕಲ್ಲಿನ ಮೇಲೆ ಶಿವಲಿಂಗ, ಸೂರ್ಯ, ಚಂದ್ರರ ಚಿತ್ರಗಳಿರುವುದನ್ನು ನೋಡಬಹುದು. ಈ ಕಲ್ಲಿನಿಂದ ಚಕ್ರಬಾವಿಯಲ್ಲಿ ಶೈವಧರ್ಮ ಇದ್ದುದರ ಕುರುಹನ್ನು ಕಾಣಬಹುದು. ಕೆಂಪೇಗೌಡ ವಂಶಸ್ಥರು ಶೈವ ಧರ್ಮವಾಲಂಬಿಗಳಾಗಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಅವರ ಎಲ್ಲಾ ಶಾಸನಗಳ ಪ್ರಾರಂಭದಲ್ಲಿ ಶಿವನ ಸ್ತುತಿ ಇರುವುದನ್ನು ಕಾಣಬಹುದು. ಕೆಂಪೇಗೌಡನ ವಂಶಸ್ಥರು ಶಿವಗಂಗೆಗೆ ಹಲವಾರು ಬಾರಿ ದಾನ ನೀಡಿದ್ದಾರೆ. ಎಲ್ಲ ರಾಜರು ಚಕ್ರಬಾವಿಯನ್ನು ತಮ್ಮ ಆಳ್ವಿಕೆಗೆ ಸೇರಿಸಿಕೊಂಡಿದ್ದರು. ಈ ಆಧಾರದಿಂದ ಚಕ್ರಭಾವಿಯಲ್ಲಿ ಶೈವಧರ್ಮ ಪ್ರಬಲವಾಗಿತ್ತೆಂದು ತಿಳಿಯಬಹುದು.

ಚಕ್ರಬಾವಿಯ ಯಲಗದಹಳ್ಳಿ ಶಾಸನದಲ್ಲಿ[26] ಚಕ್ರಬಾವಿಯ ಸಿಂಹಾಸನದ ಪಟ್ಟದ ಮರಳದೇವನು ಮತ್ತು ಚಿಕ್ಕಪ್ಪ ಒಡೆಯರು ಹೆರೂರು ಗವಿಮಠದ ಸಿದ್ದವೀರಣ್ಣ ದೇವರಿಗೆ ಭೂಮಿಯನ್ನು ದಾನ ನೀಡಿದನು. ಈ ಶಾಸನದಿಂದ ಚಕ್ರಬಾವಿಯಲ್ಲಿ ಶೈವಧರ್ಮ ಇತ್ತೆಂದು ತಿಳಿಯಬಹುದು. ಮರುಳದೇವರು ಮತ್ತು ಚಿಕ್ಕಪ್ಪ ವಡೆಯರು ಮರುಳಸಿದ್ದೇಶ್ವರ ಮತ್ತು ಚಿಕ್ಕಣ್ಣಸ್ವಾಮಿ ದೇವಾಲಯಗಳನ್ನು ಚಕ್ರಬಾವಿಯಲ್ಲಿ ಕಟ್ಟಿಸಿದ್ದನ್ನು ಕಾಣಬಹುದಾಗಿದೆ.

ಅಳಲುಕುಪ್ಪೆಯ ಶಾಸನವೊಂದರಲ್ಲಿ[27] ಕಾಶಿನಿವಾಸಿ (ಶಿವಗಂಗೆ) ವಿಶ್ವೇಶ್ವರನು ಅರಳುಕುಪ್ಪೆ ಗ್ರಾಮವನ್ನು ಪ್ರತಿಷ್ಠಾಪನೆ ಮಾಡಿದ್ದನ್ನು ನೋಡಬಹುದು.

ಚಕ್ರಬಾವಿಯಲ್ಲಿ ಜಂಗಮಮಠದ ಆವರಣದ ಮಠದಲ್ಲಿ ಒಂದು ವೀರಭದ್ರನ ದೇವಾಲಯವಿದೆ. ಆ ದೇವಾಲಯದ ಮೂಲ ವಿಗ್ರಹ 3ನೇ ಕೆಂಪವೀರಪ್ಪಗೌಡನ ಕಾಲದಲ್ಲಿ ರಚನೆಯಾಗಿದೆ ಎಂದು ತಿಳಿದುಬರುತ್ತದೆ.[28] ಅರಳೀಮರದ ಕೆಳಗೆ ಶೈವಧರ್ಮದ ಒಂದು ವೀರಮಾಸ್ತಿಕಲ್ಲಿದೆ. ಈ ಶಿಲ್ಪದ ಮೂರನೇ ಹಂತದಲ್ಲಿ ಸ್ತ್ರೀಯು ಕೈಲಾಸ ಸೇರಿದ್ದು, ಕೈಲಾಸ ಕಲ್ಪನೆಯಾದ ಶಿವಲಿಂಗ, ನಂದಿಯ ಶಿಲ್ಪಗಳನ್ನು ಚಿತ್ರಿಸಲಾಗಿದೆ. ಆದ್ದರಿಂದ ಇದೊಂದು ಶೈವ ಸಂಪ್ರದಾಯದ ಕಲ್ಲಾಗಿದ್ದು, ಚಕ್ರಬಾವಿಯಲ್ಲಿ ಶೈವಧರ್ಮವಿತ್ತೆಂದು ಈ ಶಾಸನದಿಂದ ತಿಳಿಯಬಹುದು. ಇಷ್ಟೇ ಅಲ್ಲದೆ ಚಕ್ರಬಾವಿಯ ಊರ ಹೊರಗೆ ಕೆರೆಯ ಹತ್ತಿರ ಪ್ರಾಚೀನ

---

[26] EC - I X, ಮಾಗಡಿ–33 ಸಾತನೂರು ಹೋಬಳಿ, ಪು–112

[27] EC - I X, ಮಾಗಡಿ–34 ಸಾತನೂರು ಹೋಬಳಿ, ಪು–12.

[28] ಕರ್ನಾಟಕ ಪರಂಪರೆ, ಸಂಪುಟ–2, ಪು–187.

ಕಾಲದ ಕೋಡಿ ಬಸವಣ್ಣ ದೇವಾಲಯ ಮತ್ತು ಚಿಕ್ಕಣ್ಣ ಸ್ವಾಮಿ ದೇವಾಲಯಗಳು ಶೈವಧರ್ಮದ ಸಂಕೇತಗಳಾಗಿವೆ.

ಚಕ್ರಬಾವಿಯ ಗ್ರಾಮದಲ್ಲಿ ಹಿಂದೂ ಸಂಪ್ರದಾಯದಂತೆ ವಿಷ್ಣು ದೇವಾಲಯವು (ವೇಣು ಗೋಪಾಲಸ್ವಾಮಿ) ಊರ ಮಧ್ಯೆ ಇದ್ದು, ಶೈವ ದೇವಾಲಯಗಳು (ಕೋಡಿ ಬಸವಣ್ಣ, ಚಿಕ್ಕಣ್ಣಸ್ವಾಮಿ, ಮರುಳ ಸಿದ್ದೇಶ್ವರ) ಹೊರ ಹೊರಗೆ ಇರುವುದನ್ನು ಕಾಣಬಹುದು. ಚಕ್ರಬಾವಿಯಲ್ಲಿ ಪ್ರಾಚೀನ ಕಾಲದಿಂದಲೂ ಶೈವ, ವೈಷ್ಣವ ಧರ್ಮಗಳು ಸಮನಾಗಿದ್ದು ಗ್ರಾಮದ ಶ್ರೇಯೋಭಿವೃದ್ಧಿಗೆ ಪೂರಕವಾಗಿ ನಿಂತಿದೆ.

ಅಧ್ಯಾಯ – 4

ಚಕ್ರಬಾವಿ ಗ್ರಾಮದ ಸಾಮಾಜಿಕ ಮತ್ತು ಆರ್ಥಿಕ ಜೀವನ

ಅಧ್ಯಾಯ – ನಾಲ್ಕು

ಚಕ್ರಬಾವಿ ಗ್ರಾಮದ ಸಾಮಾಜಿಕ ಮತ್ತು ಆರ್ಥಿಕ ಜೀವನ

ಮಾನವ ಸಮಾಜಜೀವಿ. ಅವರ ಪ್ರಕಾರ ಬೇಡಿಕೆಗಳನ್ನು ಸಮಾಜ ಚೌಕಟ್ಟಿನಲ್ಲಿ ಮಾತ್ರವೇ ಪೂರೈಸಿಕೊಳ್ಳಲು ಸಾಧ್ಯ. ಅಂತೆಯೇ ಮಾನವ ಸುಖಸಂತೋಷದಿಂದ ಬಾಳಲು 'ಸಮಾಜ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾನೆ. ಸಾಮಾಜಿಕ ಸಂಬಂಧಗಳು ಮಾನವನ ಒಟ್ಟಾರೆ ಜೀವನಕ್ಕೆ ಸಂಬಂಧಿಸಿರುತ್ತವೆ. ಅವು ಅವನ ಆರ್ಥಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ ಮೊದಲಾದ ಜೀವನದ ಎಲ್ಲ ಕ್ಷೇತ್ರಗಳಿಗೂ ಸಂಬಂಧಪಟ್ಟಿರಬಹುದಾಗಿದೆ. ವ್ಯಾಪಾರಿ–ಗಿರಾಕಿ, ಪ್ರಭು–ಪ್ರಜೆ, ಮಠಾಧಿಪತಿ–ಭಕ್ತ, ಹೀಗೆ ಇವರುಗಳ ನಡುವಿನ ಸಂಬಂಧಗಳು ಸಾಮಾಜಿಕ ಸಂಬಂಧಗಳೆನಿಸುತ್ತವೆ. ಹುಟ್ಟಿದ ಮಗುವಿನ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಸಮಾಜದಲ್ಲಿ ಆಗುತ್ತದೆ. ಅದರ ನಡೆ–ನುಡಿ, ಆಚಾರ–ವಿಚಾರ, ಆಹಾರ–ವಿಹಾರ, ಸಂಸ್ಕೃತಿ ಜೀವನ, ಎಲ್ಲವನ್ನು ಸಮಾಜ ಒದಗಿಸಿಕೊಡುತ್ತದೆ. ಮಗುವು ಮಾನವ ಸಮಾಜದಲ್ಲಿ ಬೆಳೆದಾಗಲೇ ಮಾನವೀಯ ಗುಣಗಳನ್ನು ಹೊಂದಿ ನಿಜಮಾನವನಾಗಿ ರೂಪುಗೊಳ್ಳಲು ಸಾಧ್ಯ. ಒಟ್ಟಾರೆ ಮಾನವನ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಉತ್ತಮ ಸಮಾಜದ ಪಾತ್ರ ಅತ್ಯಂತ ಪ್ರಮುಖದ್ದಾಗಿದೆ.

ಸಮಾಜದ ಮಧ್ಯೆ ಬದುಕುತ್ತಿರುವ ಮಾನವನಿಗೆ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳಲು ಆರ್ಥಿಕ ವ್ಯವಸ್ಥೆಯೂ ಅತ್ಯಂತ ಪ್ರಧಾನ ಪಾತ್ರವಹಿಸುತ್ತದೆ. ಆದ್ದರಿಂದ ಮನುಷ್ಯ ವಿವಿಧ ಕೆಲಸಗಳಲ್ಲಿ ತೊಡಗಿರುವುದನ್ನು ನಾವು ಕಾಣುತ್ತೇವೆ. ರೈತ ಹೊಲದಲ್ಲಿ ದುಡಿಯುತ್ತಾರೆ. ಶಿಕ್ಷಕರು ಶಾಲಾ–ಕಾಲೇಜುಗಳಲ್ಲಿ ಪಾಠ ಹೇಳಿಕೊಡುತ್ತಾರೆ, ಗುಮಾಸ್ತರು ಕಛೇರಿಯಲ್ಲಿ ಕೆಲಸ ಮಾಡುತ್ತಿರುತ್ತಾರೆ, ಕಾರ್ಮಿಕರು ಕಾರ್ಖಾನೆಗಳಲ್ಲಿ ದುಡಿಯುತ್ತಾರೆ. ವೈದ್ಯರು ರೋಗಿಗಳ ಶುಶ್ರೂಷೆಯಲ್ಲಿ ಮಗ್ನರಾಗಿರುತ್ತಾರೆ. ವಕೀಲರು ನ್ಯಾಯಾಲಯಗಳಲ್ಲಿ ತಮ್ಮ ಪಕ್ಷಕಾರರ ಪರವಾಗಿ ವಾದಿಸುತ್ತಿದ್ದಾರೆ. ಹೀಗೆ ರೈತರು, ಶಿಕ್ಷಕರು, ವ್ಯಾಪಾರಸ್ಥರು, ಗುಮಾಸ್ತರು, ಕೂಲಿಕಾರರು, ವೈದ್ಯರು, ವಕೀಲರು ವಿವಿಧ ಉದ್ಯೋಗಗಳಲ್ಲಿ ಮಗ್ನರಾಗಿ ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಮಾನವನಿಗೆ ಸಾಮಾಜಿಕ ವ್ಯವಸ್ಥೆ ಎಷ್ಟು ಮುಖ್ಯವೋ ಅದೇ ರೀತಿ ಆರ್ಥಿಕ ವ್ಯವಸ್ಥೆಯೂ ಅತ್ಯಂತ ಮುಖ್ಯವಾಗಿರುತ್ತದೆ.

ಅದೇರೀತಿ ಒಂದು ಆದರ್ಶ ಗ್ರಾಮವಾಗಬೇಕಾದರೆ ಅಲ್ಲಿನ ಸಮಾಜ ಮತ್ತು ಅವರ ಆರ್ಥಿಕ ಮಟ್ಟ ಉತ್ತಮ ಸ್ಥಿತಿಯಲ್ಲಿರಬೇಕು. ಚಕ್ರಬಾವಿ ಗ್ರಾಮದ ಸಾಮಾಜಿಕ ಮತ್ತು ಆರ್ಥಿಕ

ಜೀವನ ಉತ್ತಮ ಸ್ಥಿತಿಯಲ್ಲಿತ್ತೆಂದು ಕೆಲವು ಶಾಸನಗಳಿಂದ ಮತ್ತು ಪ್ರಸ್ತುತ ಅಸ್ಥಿತ್ವದಲ್ಲಿರುವ ಕೆಲವು ಹಬ್ಬ-ಹರಿದಿನಗಳ ಆಚರಣೆಯಿಂದ ತಿಳಿದುಬರುತ್ತದೆ. ಅಂತಹ ಕೆಲವು ಮಹತ್ವದ ವಿಷಯಗಳನ್ನು ಆಧಾರ ಸಮೇತ ವಿವರಿಸಲು ಪ್ರಯತ್ನಿಸಿದ್ದೇನೆ. ಚಕ್ರಬಾವಿಯ ಸಾಮಾಜಿಕ ಮತ್ತು ಆರ್ಥಿಕ ಜೀವನದ ವಿವರಣೆಯನ್ನು ಜೊತೆ ಜೊತೆಯಲ್ಲಿಯೇ ನೀಡಿದ್ದೇನೆ.

ಡಾ. ಬಿ.ಆರ್. ಅಂಬೇಡ್ಕರ್ ಹೇಳುವಂತೆ 'ಭಾರತದಲ್ಲಿ ಮನುಷ್ಯ ಮಾಡುವ ವೃತ್ತಿಯಿಂದ ಜಾತಿ-ಸೃಷ್ಟಿಯಾಯಿತು' ಎನ್ನುವ ಮಾತಿನಂತೆ, ಮನುಷ್ಯ ಅವನು ಮಾಡುವ ಕಸುಬುಗಳಿಂದ ಜನರು ಕೆಲಸಗಳನ್ನು ಹಂಚಿಕೊಂಡು ಒಬ್ಬೊಬ್ಬರು ಒಂದೊಂದು ಕೆಲಸವನ್ನು ನಿರ್ವಹಿಸುತ್ತಾ ಅವನ ಪರಂಪರೆ ಹಾಗೆಯೇ ಮುಂದುವರೆದು ಈಗ ನೂರಾರು ಜಾತಿ-ಉಪಜಾತಿಗಳಾಗಿ ಬೆಳೆದು ನಿಂತಿವೆ. ಇಂದು ಜಾತಿ ವ್ಯವಸ್ಥೆ ಪ್ರಬಲವಾದ ಪಿಡುಗಾಗಿ ಬೆಳೆದು ನಿಂತಿದೆ. ಸಮಾಜದಲ್ಲಿ ಎಷ್ಟೇ ಜಾತಿ-ಉಪಜಾತಿಗಳು ಎಷ್ಟೇ ಪ್ರಮಾಣದಲ್ಲಿ ಬೆಳೆದರೂ ಆರೋಗ್ಯಕರ ಸಮಾಜ ಮುಖ್ಯ ಮತ್ತು ಜನರ ಸೌಹಾರ್ದತೆ ಪ್ರಮುಖ ಪಾತ್ರವಹಿಸುತ್ತದೆ.

ಪ್ರಾಚೀನ ಕಾಲದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಜಾತಿಗಳಿದ್ದವು. ಬ್ರಾಹ್ಮಣರು ಸಮಾಜದ ಏಳಿಗೆಗಾಗಿ ದೇವರನ್ನು ಪೂಜಿಸುತ್ತಿದ್ದರು. ಕ್ಷತ್ರಿಯರು ಯುದ್ಧ ಮಾಡಿ ಶತೃಗಳ ವಕ್ರದೃಷ್ಟಿ ಸಮಾಜದ ಮೇಲೆ ಬೀಳದಂತೆ ಎಚ್ಚರ ವಹಿಸುತ್ತಿದ್ದರು. ವೈಶ್ಯರು ಜನರಿಗೆ ಬೇಕಾದ ಅಗತ್ಯ ವಸ್ತುಗಳನ್ನು ಮಾರುತ್ತಿದ್ದರು. ಉಳಿದ ಕೆಲಸಗಳನ್ನು ಶೂದ್ರರು ನಿರ್ವಹಿಸುತ್ತಿದ್ದರು. ಈಗ ನಾಲ್ಕು ಜಾತಿಗಳು ಬೆಳೆದು ಇಷ್ಟೊಂದು ಉಪಜಾತಿಗಳಾಗ ಮಾರ್ಪಟ್ಟಿವೆ.

ಕರ್ನಾಟಕದಲ್ಲಿ ಸಾವಿರಾರು ಜಾತಿಯ ಜನಾಂಗಗಳಿವೆ. ಮಾಗಡಿ ಸೀಮೆಯಲ್ಲೂ ಬ್ರಾಹ್ಮಣ, ಲಿಂಗಾಯಿತ, ಕುರುಬ, ಬೋವಿ, ಮಡಿವಾಳ, ನಾಯಿಂದ, ಹೊಲೆಯ, ಮಾದಿಗ, ಬಡಗಿ, ಕಮ್ಮಾರ, ವಿಶ್ವಕರ್ಮ, ಗೊಲ್ಲ, ಗಾಣಿಗ, ಕೋಮಟಿ, ಬಣಜಿಗ, ಜಾಂಬವ, ದೇವಾಂಗ, ತಿಗಳ, ಬೇಡ, ಉಪ್ಪಾರ, ಬೆಸ್ತ, ಪದ್ಮಶಾಲಿ, ಬಡಿಗ, ಚಮ್ಮಾರ, ಇಲಿಗರು, ಲಂಬಾಣಿ, ಕೊರಚರು, ಮೇದರು, ಕೊರಮರು, ಕಂಚುಗಾರ ಮುಂತಾದ ಜಾತಿಗಳು ಅಸ್ತಿತ್ವದಲ್ಲಿದ್ದವೆಂದು ಹಲವಾರು ಶಾಸನಗಳಿಂದ ತಿಳಿದುಬರುತ್ತದೆ.

ಚಕ್ರಬಾವಿಯಲ್ಲಿ ಬ್ರಾಹ್ಮಣರು, ಒಕ್ಕಲಿಗರು, ಲಿಂಗಾಯಿತ, ಮಡಿವಾಳ, ನಾಯಿಂದ, ವಿಶ್ವಕರ್ಮ, ಪರಿಶಿಷ್ಟಜಾತಿ, ಶೆಟ್ಟರು, ಕುಂಬಾರಶೆಟ್ಟಿ, ಗಾಣಿಗಶೆಟ್ಟಿ, ಮುಂತಾದ ಜಾತಿಗಳಿದ್ದವೆಂದು ತಿಳಿದುಬರುತ್ತದೆ. ಈ ಮಾಹಿತಿ ಅಳಲುಕುಪ್ಪೆ, ಉಡುವೆಗೆರೆ ಶಾಸನ, ಯಲಗದಹಳ್ಳಿ, ಹುಲಿಕಟ್ಟೆ, ದೊಡ್ಡವೀರಪ್ಪ ಗೌಡನ ಶಾಸನಗಳಿಂದ ತಿಳಿದು ಬರುತ್ತದೆ.

ಬ್ರಾಹ್ಮಣರಲ್ಲಿ ಸ್ಮಾರ್ತ, ಶ್ರೀವೈಷ್ಣವ, ಮಾಧ್ವರೆಂಬ ಪಂಗಡಗಳಿವೆ. ಶಂಕರಾಚಾರ್ಯರ ಅನುಯಾಯಿಗಳು ಸ್ಮಾರ್ತರಾದರು. ರಾಮಾನುಜಾಚಾರ್ಯ, ಅನುಯಾಯಿಗಳು ಶ್ರೀ ವೈಷ್ಣವರಾದರು. ಮಧ್ವಾಚಾರ್ಯರ ಅನುಯಾಯಿಗಳು ಮಾಧ್ವರಾದರು. ಈ ಮೂರು ಪಂಗಡಗಳು ಅನೇಕ ಉಪಜಾತಿ ಕುಲಗೋತ್ರಗಳಾಗಿ ವಿಭಜನೆಗೊಂಡಿರುವುದನ್ನು ಶಾಸನಗಳಿಂದ ತಿಳಿಯುತ್ತದೆ. ಶ್ರೀವತ್ಸ ವಶಿಷ್ಠ, ಭಾರದ್ವಜ, ವಿಶ್ವಾಮಿತ್ರ, ಕೌಶಿಕ, ವಾದೂಲಾಸ, ಕಾಶ್ಯಪ, ಹರಿಸತ, ಮೌನಬಾರ್ಗವ, ಉಪಮನ್ವ, ಕೌಂಡಿನ್ಯ, ಅಪಸ್ತಂಭ ಅಶ್ವಲಾಯ, ಚೋದಾಯ, ದ್ರಾಹ್ಯಯನ ಸಾಂಕಾಯನ ಮುಂತಾದ ಪಂಗಡಗಳಾಗಿ ಬೆಳೆದಿರುವುದನ್ನು ಚಕ್ರಬಾವಿ ಕೆಲವು ಶಾಸನಗಳಿಂದ ತಿಳಿಯಬಹುದು.[29] ಬ್ರಾಹ್ಮಣರು ಸಮಾಜದಲ್ಲಿ ಮೇಲ್ವರ್ಗದವರೆಂದು ಗುರುತಿಸಲಾಗಿದ್ದು, ಇವರು ಅಧ್ಯಾಪನ, ಪುರೋಹಿತ ಮುಂತಾದ ಕೆಲಸಗಳನ್ನು ಮಾಡುತ್ತಿದ್ದರು. ರಾಜರಿಗೆ ಸಮಾಜಕ್ಕೆ ಮಾರ್ಗದರ್ಶನ ನೀಡುವ ಕೆಲಸ ಮಾಡುತ್ತಿದ್ದರು. ಬುದ್ಧಿವಂತಿಕೆಯೇ ಇವರ ಬಂಡವಾಳವಾಗಿ ಮಾಡಿಕೊಂಡು ಸಮಾಜ ಸುಧಾರಕರಾಗಿ ಕೆಲಸ ಮಾಡುತ್ತಿದ್ದರು.

ರಾಜರುಗಳಿಂದ ಅನೇಕ ಭೂಮಿಗಳನ್ನು ದಾನಪಡೆದಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಅದರ ಒಂದು ಉದಾಹರಣೆ ಈ ರೀತಿಯಿದೆ. ಮುಮ್ಮಡಿ ಕೆಂಪ ವೀರಪ್ಪ ಗೌಡನು ಚಕ್ರಬಾವಿ ಹೋಬಳಿಯ ಕೆಂಪನಹಳ್ಳಿಯನ್ನು ಬ್ರಾಹ್ಮಣರಾದ ವೆಂಕಪ್ಪಯ್ಯನಿಗೆ ದಾನ ನೀಡಿದ ಉಲ್ಲೇಖವಿದೆ.[30] ಶ್ರೀ ವೇಣುಗೋಪಾಲ ಸ್ವಾಮಿಯು ಚಕ್ರಬಾವಿಯ ಬ್ರಾಹ್ಮಣರಿಗೆ ಆರಾಧ್ಯ ದೈವವಾಗಿತ್ತು.

ಭೂಮಿಯನ್ನು ಒಕ್ಕಲು ಮಾಡುತ್ತಿದ್ದವರೇ ಒಕ್ಕಲಿಗ, ಇವರ ಬಗ್ಗೆಯೂ ಅನೇಕ ಶಾಸನಗಳಲ್ಲಿ ಮಾಹಿತಿಯಿದೆ. ಒಕ್ಕಲು ಎಂದರೆ ಭೂಮಿಯನ್ನು ಉಳುವವನು, ಒಕ್ಕು ಎಂದರೆ ಬೆಳೆದ ಫಸಲನ್ನು ಕಣದಲ್ಲಿ ದನ ಕರುಗಳಿಂದ ಕಾಳುಗಳನ್ನು ಬೇರ್ಪಡಿಸು ಶಬ್ದವನ್ನು ಬಳಸುತ್ತಾರೆ. ಇವರಲ್ಲೂ ಅನೇಕ ಉಪಜಾತಿಗಳಿವೆ. ಗಂಗಟಕಾರ, ಪಟ್ಟಿಗೆ, ಬಿಜ್ಜಣಿಗೆ, ಕೈಸೂರೆ ಬುಡ, ದಾಸಒಕ್ಕಲಿಗರು, ಆನೆಕುಲ, ಬೆಳ್ಳಿಕುಲ ಎಂಬ ಮುಂತಾದ ಉಪಜಾತಿ-ಒಳಪಂಗಡಗಳಿವೆ. ಕೆಂಪೇಗೌಡನ ವಶಂಸ್ಥರು ಮೊರಸು ಒಕ್ಕಲಿಗರೆಂದು ಶಾಸನಗಳಿಂದ ತಿಳಿದುಬಂದಿದೆ. ಚಕ್ರಬಾವಿಯ ಕೆಲವು ಶಾಸನಗಳ ಆಧಾರದಿಂದ ಒಕ್ಕಲಿಗರು ವ್ಯವಸಾಯ

---

[29] EC-IX, ಮಾಗಡಿ–8, 16, ಅನುಬಂಧ – 83, 84, 85, 86.

[30] ಡಾ. ಎಂ.ಜಿ. ಮಂಜುನಾಥ (ಸಂ) ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶಾಸನ ಸಂಖ್ಯೆ–76, ಪುಟ–154.

ಮಾಡುತ್ತಿದ್ದರೆಂದು ತಿಳಿಯುತ್ತದೆ. ದನ, ಎಮ್ಮೆ, ಕೋಳಿ, ಕುರಿ ಮುಂತಾದವರನ್ನು ಸಾಕುತ್ತಿದ್ದು, ವ್ಯವಸಾಯ ಇವರ ಕುಲ ಕಸುಬಾಗಿತ್ತು.

ಲಿಂಗಾಯಿತರು ಶಿವನ ಅನುಯಾಯಿಗಳಾಗಿದ್ದು, ಶಿವನೇ ಆರಾಧ್ಯದೈವ, ಇವರನ್ನು ಲಿಂಗಾಂಗಿಗಳು, ಶಿವಭಕ್ತರು, ವೀರಶೈವರು, ಶಿವಾಚರರೆಂದು ಕರೆಯಲಾಗುತ್ತಿತ್ತು. ಬೆಳ್ಳಿಯ ಕರಡಿಗೆಯಲ್ಲಿ ಇಷ್ಟಲಿಂಗವನ್ನು ಕೊರಳಿಗೆ ನೇತುಹಾಕಿಕೊಂಡು ಶಿವನನ್ನು ಪೂಜಿಸುತ್ತಾರೆ. ಇವರಲ್ಲಿ ಆರಾಧ್ಯ ಜಂಗಮ, ನೊಣಬ, ಗೌಡ ಲಿಂಗಾಯಿತ, ಸಾಧರು, ಬಣಜಿಗ ಲಿಂಗಾಯಿತ ಪಂಚಮುಖಿ, ಶೀಲವಂತ, ಕಾವಾಡಿಗ, ಮಂದ ಎಂಬ ಒಳಪ್ರಭೇದಗಳಿವೆ. ಲಿಂಗಾಯಿತರು ಒಕ್ಕಲು ಮಾಡುವುದರ ಜೊತೆಗೆ ಯುದ್ಧವನ್ನು ಮಾಡುತ್ತಿದ್ದರೆಂದು ಶಾಸನಗಳಿಂದ ತಿಳಿದು ಬರುತ್ತದೆ. ಚಕ್ರಬಾವಿಯ ಅರಳೀಮರದ ಕೆಳಗೆ ಇರುವ ವೀರಶೈವ ಸಂಪ್ರದಾಯದ ವೀರಮಾಸ್ತಿಗಲ್ಲು ಉತ್ತಮ ನಿದರ್ಶನವಾಗಿದೆ.

ಚಕ್ರಬಾವಿಯಲ್ಲಿರುವ ಜಂಗಮ ಮಠ, ಮರಳಸಿದ್ದೇಶ್ವರ ಕೋಡಿ ಬಸವಣ್ಣ, ವೀರಭದ್ರ, ಚಿಕ್ಕಣ್ಣಸ್ವಾಮಿ ಮುಂತಾದ ದೇವರುಗಳು ಲಿಂಗಾಯಿತರ ಆರಾಧ್ಯದೈವವಾಗಿದೆ. ಮುಮ್ಮಡಿ ಕೆಂಪೇಗೌಡರನ್ನು ಶಿವಗಂಗೆಯಲ್ಲಿ ಒಂದು ಮಠವನ್ನು ಕಟ್ಟಿಸಿ ಅಲ್ಲಿ ಒಂದು ಶಿವಲಿಂಗವನ್ನು ಪ್ರತಿಷ್ಠಾಪಿಸಿ, ಅಳಲು ಕುಪ್ಪೆ ಗ್ರಾಮವನ್ನು ದಾನ ನೀಡಿದ ಶಾಸನವಿದೆ.[31] ಪರಿಶಿಷ್ಟ ಜಾತಿಯವರು ತಮಟೆ ಬಡಿಯುವ ಕಾಯಕದಲ್ಲಿ ತೊಡಗಿದ್ದು, ಊರಿನಲ್ಲಿ ಉತ್ಸವವಾದರೆ, ಊರಿನಲ್ಲಿ ಯಾರಾದರು ಸತ್ತಾಗ ಇವರ ಅವಶ್ಯಕತೆ ಇರುತ್ತಿತ್ತು. ನಾಯಿಂದರು ಕ್ಷೌರಿಕ ವೃತ್ತಿ ಮಾಡುವುದರ ಜೊತೆಗೆ ಮದುವೆ ಮತ್ತಿತರ ಶುಭ ಕಾರ್ಯಗಳಲ್ಲಿ ವಾದ್ಯಗಳನ್ನು ಬಾರಿಸುತ್ತಿದ್ದರು. ಮಡಿವಾಳರು ಬಟ್ಟೆ ಒಗೆಯುವ ಮತ್ತು ಗ್ರಾಮ ದೇವತೆಯನ್ನು ಪೂಜೆಮಾಡುವ ಕಾರ್ಯದಲ್ಲಿದ್ದರು.

ವಿಶ್ವಕರ್ಮರು ರೈತರ ವ್ಯವಸಾಯದ ಆಯುಧಗಳಾದ ನೇಗಿಲು, ಆರೆ, ಪಿಕಾಸಿ, ಕುಂಟೆ, ಗುದ್ದಲಿ ಮುಂತಾದವುಗಳನ್ನು ಸಿದ್ಧಪಡಿಸಿಕೊಡುತ್ತಿದ್ದರು. ಜೊತೆಗೆ ಊರಿನ ಜನರ ಆಭರಣಗಳನ್ನು ಮಾಡಿ ಕೊಡುತ್ತಿದ್ದರು. ಕುಂಬಾರರು ಮಡಿಕೆ, ಕುಡಿಕೆ, ಅಡುಗೆ ಸಲಕರಣೆ ಮುಂತಾದ ವಸ್ತುಗಳನ್ನು ಮಾಡಿಕೊಟ್ಟು ಗ್ರಾಮದ ಏಳಿಗೆಗೆ ದುಡಿಯುತ್ತಿದ್ದರು.

ಗಾಣಿಗ ಶೆಟ್ಟರು ಎಣ್ಣೆ ತೆಗೆಯುವ ಕೆಲಸ ಮಾಡುತ್ತಿದ್ದರು. ಈ ರೀತಿ ಚಕ್ರಬಾವಿಯಲ್ಲಿ ವಿವಿಧ ಜಾತಿಯ ಜನರು ಗ್ರಾಮದ ಅಭಿವೃದ್ಧಿಗೆ ಪರಸ್ಪರ ಪರಾವಲಂಭಿಗಳಾಗಿ ಕೆಲಸ ಮಾಡುತ್ತಿದ್ದರು.

---

[31] EC-IX, ಮಾಗಡಿ – 35 ಸಾತನೂರು ಹೋಬಳಿ, ಪು.113.

ಚಕ್ರಬಾವಿಯ ಅಂದಿನ ಸಮಾಜದಲ್ಲಿ ತಂದೆ-ತಾಯಿ ಗುರುಹಿರಿಯರಲ್ಲಿ ಗೌರವ ಸಲ್ಲಿಸುವ ಪದ್ಧತಿ ಇತ್ತೆಂದು ಮುಮ್ಮಡಿ ಕೆಂಪೇಗೌಡನ ಶಾಸನದಿಂದ ತಿಳಿಯುತ್ತದೆ.[32] ಈ ಶಾಸನದಲ್ಲಿ ಮುಮ್ಮಡಿ ಕೆಂಪವೀರಪ್ಪ ಗೌಡರು ತಮ್ಮ ತಂದೆ-ತಾಯಿಗಳಿಗೆ ಪುಣ್ಯವಾಗಲಿಯೆಂದು ತಮ್ಮ ಆಳ್ವಿಕೆಗೆ ಸೇರಿದ ಚಕ್ರಬಾವಿ ಹೋಬಳಿಯ ಕೆಂಪನಹಳ್ಳಿಯನ್ನು ದಾನ ನೀಡಿದನು. ಭಾರತ ದೇಶದಲ್ಲಿದ್ದ ಸತಿಸಹಗಮನ ಪದ್ಧತಿಯು ಚಕ್ರಬಾವಿಯಲ್ಲೂ ಅಸ್ತಿತ್ವದಲ್ಲಿತ್ತೆಂದು ಹೇಳುವುದಕ್ಕೆ ಹಲವಾರ ವೀರಮಾಸ್ತಿಗಳು ಸಾಕ್ಷಿಯಾಗಿವೆ. ಆ ಕಾಲದಲ್ಲಿ ದಂಡು ಸೇರುವುದು ಕಡ್ಡಾಯವಾಗಿತ್ತು. ಪ್ರತಿ ಮನೆಯಿಂದ ಜಾತಿಯ ಹಂಗಿಲ್ಲದೆ ಸೈನ್ಯ ಸೇರುತ್ತಿದ್ದರು. ಆ ಯುದ್ಧಗಳಲ್ಲಿ ಗಂಡ ಸತ್ತರೆ ಹೆಂಡತಿಯೂ ಸಹಗಮನ ಮಾಡಿಕೊಳ್ಳುತ್ತಿದ್ದಳು. ಇದಕ್ಕೆ ಅರಳೀ ಮರದ ಕೆಳಗೆ ಬಿದ್ದಿರುವ ಶೈವ ಮತ್ತು ವೈಷ್ಣವ ಧರ್ಮದ ವೀರಮಾಸ್ತಿಗಲ್ಲು ಸಾಕ್ಷಿಯಾಗಿದೆ. ಇಂತಹ ಕಾಳಗ-ಯುದ್ಧರಲ್ಲಿ ಯೋಧಸತ್ತಾಗ ಅವನ ಕುಟುಂಬಕ್ಕೆ ಪರಿಹಾರವಾಗಿ ಹೊಲ, ಗದ್ದೆ ಭೂಮಿಯನ್ನು ಕೊಡುವ ಪದ್ಧತಿ ಚಕ್ರಬಾವಿಯಲ್ಲಿತ್ತು. ಈ ದಾನವನ್ನು ದೇವರ ಸನ್ನಿಧಾನದಲ್ಲಿ ನೀಡುವುದರ ಜೊತೆಗೆ ರಾಜ ಸಹಿಯನ್ನು ಹಾಕುತ್ತಿದ್ದನು. ಇದಕ್ಕೆ ಹುಲಿಕಟ್ಟೆ ಮತ್ತು ಮುಮ್ಮಡಿ ಕೆಂಪವೀರಗೌಡನ ಶಾಸನಗಳು ಸಾಕ್ಷಿಯಾಗಿವೆ.

ಚಕ್ರಬಾವಿಯಲ್ಲಿ ಪ್ರಾಚೀನ ಕಾಲದಿಂದಲೂ ರಾಗಿ, ಭತ್ತ, ಜೋಳ, ನವಣೆ, ಅವರೆ, ತೊಗರಿ, ತಗಣಿ, ಉದ್ದು, ವಾಣಿಜ್ಯ ಬೆಳೆಗಳಾದ ಕಬ್ಬು, ತೆಂಗು, ಅಡಿಕೆ, ಬಾಳೆ, ಮಾವು, ಹಲಸು, ಹುಣಸೆ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದರು. ಕೆರೆ, ಕಟ್ಟೆ, ಕಾಲುವೆ, ಕಲ್ಯಾಣಿಗಳಿಂದ ವ್ಯವಸಾಯಕ್ಕೆ ನೀರನ್ನು ಬಳಸುತ್ತಿದ್ದರು. ಮುಮ್ಮಡಿ ಕೆಂಪವೀರಪ್ಪಗೌಡನು ಚಕ್ರಬಾವಿಯಲ್ಲಿ ಒಂದು ಸುಂದರವಾದ ಕೆರೆಯನ್ನು ಕಟ್ಟಿಸಿದ್ದನು. ಈಗಲೂ ಅದನ್ನು ನೋಡಬಹುದು. ಮರುಳದೇವ ಮತ್ತು ಚಿಕ್ಕಣ್ಣ ಒಡೆಯನು ಜನರ ಅನುಕೂಲಕ್ಕೋಸ್ಕರ ತಮ್ಮ ಹೆಸರಿನಲ್ಲಿ ಕಟ್ಟೆಗಳನ್ನು ನಿರ್ಮಿಸಿದ್ದು (ಮರುಳ ದೇವನ ಕಟ್ಟೆ ಮತ್ತು ಚಿಕ್ಕಣ್ಣ ವಡೆದೇವರ ಕಟ್ಟೆ) ಯಲಗಹಳ್ಳಿ ಶಾಸನದಿಂದ ತಿಳಿದುಬರುತ್ತದೆ.[33]

ಚಕ್ರಬಾವಿಯ ಜನರಿಗೆ ಮನೆಗೆ ಬಳಸಲು, ಕುಡಿಯಲು, ವ್ಯವಸಾಯಕ್ಕೆ ದೇವಸ್ಥಾನಗಳನ್ನು ಶುಚಿಗೊಳಿಸಲು ಹಲವಾರು ಬಾವಿ, ಕಲ್ಯಾಣಿಗಳನ್ನು ನಿರ್ಮಿಸಿದ್ದರು. ಜಾನುವಾರುಗಳಿಗೆ ಕೆರೆ, ಕಟ್ಟೆಗಳನ್ನು ನಿರ್ಮಿಸಿದ್ದರು. ಜೊತೆಗೆ ಚಕ್ರಬಾವಿಯ ನೀರನ್ನು ಮುಖ್ಯವಾಗಿ ಗದ್ದೆಗೆ ಹರಿಸಲಾಗುತ್ತಿತ್ತು. ನೀರನ್ನು ನೋಡಿಕೊಳ್ಳಲು ಒಬ್ಬ ನೀರುಗಂಟಿಯನ್ನು

---

[32] ಡಾ. ಎಂ.ಜಿ. ಮಂಜುನಾಥ (ಸಂ) ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶಾಸನ ಸಂಖ್ಯೆ-76, ಪು-154.

[33] EC-IX, ಮಾಗಡಿ-33, ಸಾತನೂರು ಹೋಬಳಿ, ಪು-112.

ನೇಮಿಸಿದ್ದರು. ಅವನು ಯಾರಿಗೆ ಯಾವಾಗ ನೀರು ಬೇಕು ಎಂಬುದನ್ನು ಮನಗಂಡು ನೀರನ್ನು ಹಾಯಿಸುತ್ತಿದ್ದನು. ಇವನಿಗೆ ಇದೇ ಕೆಲಸವಾಗಿದ್ದು ಇವನಿಗೆ ಜೀವನಾಂಶಕ್ಕೆ ಭೂಮಿಯನ್ನು ದಾನ ನೀಡಲಾಗುತ್ತಿತ್ತು.

ಚಕ್ರಬಾವಿಯಲ್ಲಿ ಈ ಕಾಲದಲ್ಲಿ ಹಣಕ್ಕೆ ಅಭಾವವಿದ್ದರೂ ಆಹಾರಕ್ಕೆ ಅಭಾವವಿರಲಿಲ್ಲ. ಜನರು ತಮ್ಮ ಮನೆಗೆ ಬೇಕಾದಷ್ಟನ್ನು ಬೆಳೆದು, ತಾವು ತಿಂದು ಮಿಕ್ಕಿದ್ದನ್ನು ಸಂತೆಯಲ್ಲಿ ಮಾರುತ್ತಿದ್ದರು. ಚಕ್ರಬಾವಿಯಲ್ಲಿ ಕೆರೆಯ ಅರಳೀಮರದ ಹತ್ತಿರ ಪ್ರತಿ ಗುರುವಾರ ಸಂತೆ ನಡೆಯುತ್ತಿತ್ತೆಂದು ಜನ ಈಗಲೂ ಹೇಳುತ್ತಾರೆ. ಮಾಗಡಿ ಸೀಮೆಯ ಮಾಗಡಿ, ಸಿಪ್ಪಸಂದ್ರ, ಕುದೂರು, ಚಕ್ರಬಾವಿ, ಕುಣಿಗಲ್ಲು, ಗುಡೇ ಮಾರನಹಳ್ಳಿ ಸಂತೆಪೇಟೆ, ಕೂಡ್ಲು ಇವುಗಳು ಸಂತೆ ನಡೆಯುತ್ತಿದ್ದ. ಸ್ಥಳಗಳಾಗಿದ್ದವು.[34]

ಮಾಗಡಿ ಸೀಮೆಯಲ್ಲಿ ನಡೆಯುತ್ತಿದ್ದ ಕೆಲವು ಸಂತೆಗಳಲ್ಲಿ ಚಕ್ರಬಾವಿಯೂ ಒಂದು, ಈ ಸಂತೆಗೆ ನಿಡಸಾಲೆ, ಹುಲಿಯೂರು ದುರ್ಗ, ಮಾಗಡಿ, ತಿಪ್ಪಸಂದ್ರ, ಕುಣಿಗಲ್ ಮುಂತಾದ ಕಡೆಗಳಿಂದ ಬರುತ್ತಿದ್ದರು. ಈ ಸಂತೆಯಲ್ಲಿ ಪ್ರತಿಯೊಬ್ಬರಿಗೂ ಪ್ರತಿಯೊಂದು ಸಾಮಾಗ್ರಿಗಳು ದೊರೆಯುತ್ತಿದ್ದವು. ರೈತರಿಗೆ, ಹೆಂಗಸರಿಗೆ, ಗಂಡಸರಿಗೆ, ಹೆಣ್ಣುಮಕ್ಕಳಿಗೆ ಮನೆ ಸಂಸಾರಕ್ಕೆ ಬೇಕಾದ ಪದಾರ್ಥಗಳು ದೊರೆಯುತ್ತಿತ್ತು. ಚಕ್ರಬಾವಿಯಲ್ಲಿ ಉತ್ತಮ ಆರ್ಥಿಕ ಪರಿಸ್ಥಿತಿ ಇತ್ತೆಂದು ಹೇಳಲು ಈ ಸಂತೆಯೇ ಸಾಕ್ಷಿ.

ಚಕ್ರಬಾವಿಯ ಲಕ್ಷ್ಮಿದೇವಿ ಗುಡಿ ಬಳಿ ಒಂದು ಲಿಂಗಮುದ್ರೆ ಕಲ್ಲಿದೆ. ಇದು ಊರಿನ ಗಡಿಯನ್ನು ಗುರುತಿಸುವ ಸಂಕೇತವಾಗಿದೆ. ಈ ಕಲ್ಲನ್ನು 'ಗಡಿಕಲ್ಲು' ಎಂದು ಕರೆಯುತ್ತಾರೆ. ಇದನ್ನು ಜಮೀನಿನಲ್ಲೂ ಬಳಸುತ್ತಿದ್ದರು. ಲಕ್ಷ್ಮಿದೇವಿ ಗುಡಿ ಹತ್ತಿರವಿರುವ ಗಡಿಕಲ್ಲು ಚಕ್ರಬಾವಿ–ಮರಳುದೇವಪುರದ ಗಡಿಯನ್ನು ತಿಳಿಸುವ ಕಲ್ಲಾಗಿರಬಹುದು, ಆ ಕಾಲದಲ್ಲಿ ಸೇರು, ಪಾವು, ಚಟಾಕು ಮುಂತಾದ ಮಾಪನಗಳಿದ್ದವು. ನಾಲ್ಕು ಸೇರಿಗೆ ಒಂದು ಬಳ್ಳ, ಎರಡು ಬಳ್ಳಕ್ಕೆ ಒಂದು ಇಬ್ಬಳಿಕೆ, ಎರಡು ಇಬ್ಬಳಿಕೆಗೆ ಒಂದು ಕೊಳಗ, ಹದಿನಾರು ಕೊಳಗಕ್ಕೆ ಒಂದು ಖಂಡುಗ, ಒಂದು ಖಂಡುಗಕ್ಕೆ 320 ಸೇರು ಎಂಬ ಅಳತೆಯ ಮಾಪನಗಳೂ ಅಸ್ತಿತ್ವದಲ್ಲಿದ್ದವು.

---

[34] ಡಾ. ಮುನಿರಾಜಪ್ಪ, ಮಾಗಡಿಸೀಮೆ ಇತಿಹಾಸ–ಸಂಸ್ಕೃತಿ, ಪು–147

ಅಧ್ಯಾಯ – 5

ಚಕ್ರಬಾವಿ ಗ್ರಾಮದ ದೇವಾಲಯಗಳು ಮತ್ತು ಶಿಲ್ಪಕಲೆಗಳು

ಅಧ್ಯಾಯ – ಐದು

ಚಕ್ರಬಾವಿ ಗ್ರಾಮದ ದೇವಾಲಯಗಳು ಮತ್ತು ಶಿಲ್ಪಕಲೆಗಳು

ಭಾರತೀಯ ಸಂಸ್ಕೃತಿ, ಹಿರಿಮೆಗೆ ಸಾಕ್ಷಿ ಎಂದರೆ ದೇವಾಲಯಗಳು. ದೇವಾಲಯಗಳು ಸದಾ ವಿದೇಶಿಯರನ್ನು ಭಾರತದೆಡೆಗೆ ಸೆಳೆಯುವ ತಾಣಗಳಾಗಿವೆ. ಅದರಲ್ಲೂ ದೇವಾಲಯಗಳು ಕರ್ನಾಟಕದ ಜನಜೀವನದ ಅವಿಭಾಜ್ಯ ಅಂಗವಾಗಿ ಕಾಣಿಸಿಕೊಳ್ಳುತ್ತವೆ. ಪ್ರಾಚೀನ ಕರ್ನಾಟಕದಲ್ಲಿ ಒಂದೊಂದು ದೇವಾಲಯಗಳು ಸುವ್ಯವಸ್ಥಿತವಾದ, ನಿಯಮಬದ್ಧವಾದ ಒಂದು ಸಂಸ್ಥೆಗಳಾಗಿದ್ದವು. ಅಲ್ಲದೇ ಜನರ ಭಕ್ತಿ ಮತ್ತು ನಿಷ್ಠೆಗಳ ಪ್ರತೀಕಗಳಾಗಿದ್ದವು. ದೇವಸ್ಥಾನಗಳ ನಿರ್ಮಾಣದಲ್ಲಿ ಹೆಚ್ಚು ಹುರುಪು, ಉತ್ಸಾಹಗಳನ್ನು ತೋರುತ್ತಿದ್ದುದ್ದು ಮಾತ್ರವಲ್ಲದೇ ಆ ದೇವಸ್ಥಾನವು ಊರ್ಜಿತಗೊಳ್ಳಲು ಅನೇಕ ಜನರು, ಹತ್ತಾರು ಶ್ರೇಣಿಗಳು, ಒಮ್ಮೊಮ್ಮೆ ಹತ್ತಾರುಗ್ರಾಮಗಳು ಸೇರಿ ಅದಕ್ಕೆ ದತ್ತಿಯನ್ನು ಬಿಟ್ಟುಕೊಡುತ್ತಿದ್ದರು. ಉದಾಹರಣೆಗೆ ಆ ನಗರದ ಅಂಗಡಿಯವರು, ಚಿನ್ನಗೆಯಕದ ವ್ಯವಹಾರಿಗಳು, ಸ್ಥಳದ ಗವಜಿಗಳು, ನಾನಾದೇಶಿ ಗವಜಿಗಳು, ದೂಸಿಗ (ವಸ್ತ್ರ) ವ್ಯಾಪಾರಿಗಳು, ತಮ್ಮ ತಮ್ಮ ಆದಾಯಗಳಲ್ಲಿ ಒಂದು ಭಾಗವನ್ನು ಬಿಟ್ಟುಕೊಡುತ್ತಿದ್ದರು. ಹೆಜ್ಜಂಕ ಮತ್ತು ವಡ್ಡಾರಾವುಗಳನ್ನು ನೋಡಿಕೊಳ್ಳುವ ದಂಡನಾಯಕರು ಹತ್ತರಲ್ಲಿ ಒಂದು ಹೇರಿನ ಸುಂಕವನ್ನು ಬಿಟ್ಟುಕೊಡುತ್ತಿದ್ದರು. ಮಾಲೆಗಾರರು ಪ್ರತ್ಯೇಕವಾಗಿ ಒಂದು ಹೂವಿನ ಸರವನ್ನು, ತಂಬುಲಿಗರು ಚೈತ್ರಪವಿತ್ರದ ಹಬ್ಬಕ್ಕೆ ಒಕ್ಕಲಿಗೆ ಒಂದು ಸಾವಿರ ಎಲೆಯನ್ನು, ತೆಲ್ಲಿಗರು (ತೈಲಿಗರು) ಒಕ್ಕಲಿಗೆ ಒಂದು ಸೊಂಟಿಗೆ ಎಣ್ಣೆಯನ್ನು ಹೀಗೆ ಮುಂತಾದ ಸಮಾಜದ ವಿವಿಧ ಸ್ತರದ ವರ್ಗಗಳು ತಮ್ಮ ಕೈಲಾದ ದತ್ತಿಗಳನ್ನು ನೀಡುವುದರ ಮೂಲಕ ದೇವಸ್ಥಾನ ಊರ್ಜಿತಗೊಳ್ಳಲು ಸಹಕಾರಿಯಾಗುತ್ತಿದ್ದರು.[35]

ಇಷ್ಟೇ ಅಲ್ಲದೇ ದೇವಸ್ಥಾನವು ಮುನಿಗಳ ವಾಸಸ್ಥಾನವಾಗಿದ್ದುವು ಮಾತ್ರವಲ್ಲದೇ ದೊಡ್ಡ ವಿದ್ಯಾಕೇಂದ್ರವೂ ಆಗಿದ್ದವು. ಯತಿಗಳ ವಾಸಸ್ಥಾನವನ್ನು ಮೂಲಾರ್ಥದಲ್ಲಿ 'ಮಠ' ಎಂದು ಕರೆಯುತ್ತಿದ್ದರು. ಈಗಲೂ ಹಳ್ಳಿಗಳಲ್ಲಿ ಪಾಠಶಾಲೆಗಳನ್ನು 'ಮಠ' 'ಸಾಲೆಮಠ' ಎಂದು ಬಹುಮಟ್ಟಿಗೆ ಕರೆಯಲು ಪ್ರಾಚೀನ ದೇವಸ್ಥಾನಗಳೇ ಕಾರಣವಾಗಿವೆ. (ಇತ್ತೀಚಿನವರೆಗೂ ಹಳ್ಳಿಗಳಲ್ಲಿ ಪಾಠ ಪ್ರವಚನಗಳು ದೇವಸ್ಥಾನಗಳಲ್ಲಿ ನಡೆಯುತ್ತಿದ್ದವುಗಳನ್ನು ಇಲ್ಲಿ ನೆನೆಯಬಹುದಾಗಿದೆ.) ಉದಾಹರಣೆಗೆ ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯವು ಪ್ರಮುಖ ವಿದ್ಯಾಕೇಂದ್ರವಾಗಿದ್ದು ಇದನ್ನು 'ಕೋಡಿಯ ಮಠ' ಎಂಬುದಾಗಿ ಕರೆಯಲಾಗುತ್ತಿದೆ. ಅಂತೆಯೇ

---

[35] ಡಾ. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.450–1150)

ದೇವಸ್ಥಾನವು ಒಂದು ರೀತಿಯಲ್ಲಿ ನ್ಯಾಯಾಲಯವೂ ಹೌದು. ಇದನ್ನು ಎರಡು ದೃಷ್ಟಿಗಳಿಂದ ನೋಡಬಹುದು. ಒಂದು ದೇವಸ್ಥಾನಗಳಲ್ಲಿ ಒಮ್ಮೆ ವಚನವನ್ನು ಕೊಟ್ಟುಬಿಟ್ಟರೆ ತೀರಿತು, ಅದನ್ನು ಪರಿಪಾಲಿಸಿಯೇ ತೀರಬೇಕು ಎಂಬ ನಿರ್ಬಂಧವಿರುತ್ತಿತ್ತು. ಮತ್ತೊಂದು, ಯಾವುದೋ ಸಂದರ್ಭದಲ್ಲಿ ಅಪರಾಧಿಯೆಂದು ಜನರು ಭಾವಿಸಿರುವ ವ್ಯಕ್ತಿಯ ಅಪರಾಧ ನಿರ್ಣಯವಾಗದಿದ್ದಾಗ ಅವನು ಅಪರಾಧಿಯೋ, ನಿರಪರಾಧಿಯೋ ಎಂಬುದರ ತೀರ್ಮಾನವು ದೇವಸ್ಥಾನದಲ್ಲಿ ನಡೆಯುತ್ತಿದ್ದಿತು. ಹೀಗೆ ದೇವಸ್ಥಾನವು ಆಡಳಿತದ ಕೇಂದ್ರಬಿಂದು, ವಿದ್ಯಾಕೇಂದ್ರ ನ್ಯಾಯಾಲಯವಾಗಿ ಕಾರ್ಯನಿರ್ವಹಿಸುತ್ತಿದ್ದುದ್ದು ಮಾತ್ರವಲ್ಲದೇ ಹಬ್ಬ-ಹರಿದಿನ ಉತ್ಸವಗಳ ಕೇಂದ್ರವೂ ಆಗಿ ಕಾರ್ಯನಿರ್ವಹಿಸುತ್ತಿತ್ತು.

ಒಟ್ಟಾರೆ ಹೇಳುವುದಾದರೆ, ಕರ್ನಾಟಕದ ದೇವಾಲಯಗಳು ನಮ್ಮ ಸಂಸ್ಕೃತಿಯ ಪ್ರತೀಕಗಳಾಗಿವೆ. ಪ್ರಾಚೀನ ಕಾಲದ ದೇವಾಲಯದ ಶಿಲ್ಪಕಲೆಗಳ ಮೂಲಕ ಮನುಷ್ಯನನ್ನು ಸಂಸ್ಕೃತಿವಂತನನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿವೆ. ಕರ್ನಾಟಕದಲ್ಲಿ ಬೇಲೂರು, ಹಳೇಬೀಡು, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಹಂಪಿ, ಶ್ರವಣಬೆಳಗೊಳ ಮುಂತಾದ ಕಡೆಗಳಲ್ಲಿ ಪ್ರಾಚೀನ ದೇವಾಲಯಗಳನ್ನು ಕಾಣಬಹುದು. ಐಹೊಳೆಯನ್ನು ಭಾರತದ ವಾಸ್ತುಶಿಲ್ಪಕಲೆ ಮತ್ತು ದೇವಾಲಯಗಳ ತೊಟ್ಟಿಲು ಎಂದು ವಿದ್ವಾಂಸರು ಕರೆಯುವಷ್ಟರಮಟ್ಟಿಗೆ ಕರ್ನಾಟಕದ ದೇವಾಲಯಗಳು ಪ್ರಸಿದ್ಧಿ ಪಡೆದಿವೆ. ಅಂದರೆ ಭಾರತ ದೇಶದ ವಾಸ್ತುಶಿಲ್ಪವು ಕರ್ನಾಟಕದಲ್ಲಿ ಹುಟ್ಟಿತ್ತೆಂದರೆ ಆಶ್ಚರ್ಯವಲ್ಲವೇ?

ಅಂತೆಯೇ ಕರ್ನಾಟಕದ ಪ್ರತಿ ಹಳ್ಳಿಗಳಲ್ಲೂ ಮನುಷ್ಯನನ್ನು ಸುಸಂಸ್ಕೃತನನ್ನಾಗಿ ಮಾಡಲು ಮತ್ತು ಸನ್ನಡತೆ ಕಲಿಸುವಲ್ಲಿ ದೇವಾಲಯಗಳು ಪ್ರಮುಖ ಪಾತ್ರವಹಿಸಿವೆ. ನಮ್ಮ ಚಕ್ರಬಾವಿ ಗ್ರಾಮದಲ್ಲೂ ಹಲವಾರು ಪ್ರಾಚೀನ ಕಾಲದ ದೇವಾಲಯಗಳಿವೆ. ಇವುಗಳಲ್ಲಿ ವೇಣುಗೋಪಾಲಸ್ವಾಮಿ ದೇವಾಲಯ, ಜಂಗಮಮಠದ ಮರಳಸಿದ್ದೇಶ್ವರ ದೇವಾಯ, ವೀರಭದ್ರ ದೇವಾಲಯ, ಲಕ್ಷ್ಮೀದೇವಿಗುಡಿ, ಕೋಡಿಬಸವಣ್ಣ, ಚಿಕ್ಕಣ್ಣಸ್ವಾಮಿ ಗುಡಿ, ಬೆಟ್ಟದ ಸಿದ್ದಪ್ಪ, ಮುತ್ತರಾಯಸ್ವಾಮಿಗುಡಿ. ಇಷ್ಟೇ ಅಲ್ಲದೆ ಇತ್ತೀಚಿನ ದೇವಾಲಯಗಳಾದ ಹುಲಿಯೂರಮ್ಮ, ನಾಡಮಾರಮ್ಮ, ಚೌಡಮ್ಮ, ಗವಿಮಠ ಹಾಗೂ ರಾಮಮಂದಿರ ಇತ್ಯಾದಿ ದೇವಾಲಯಗಳನ್ನು ನೋಡಬಹುದು. ಪ್ರತಿ ದೇವಾಲಯಗಳ ವಿವರಣೆ ಈ ರೀತಿಯಿದೆ.

ವೇಣು ಗೋಪಾಲಸ್ವಾಮಿ ದೇವಾಲಯ

ವೇಣು ಗೋಪಾಲಸ್ವಾಮಿ ದೇವಾಲಯವು ಪ್ರಾಚೀನ ಮತ್ತು ಮೊದಲು ನಿರ್ಮಾಣವಾದ ದೇವಾಲಯವಾಗಿದೆ. ಈ ದೇವಾಲಯವು ಸುಮಾರು 12-13ನೇ ಶತಮಾನದಲ್ಲಿ ಹೊಯ್ಸಳರ ಕಾಲದಲ್ಲಿ ನಿರ್ಮಾಣವಾಗಿದೆಯೆಂದು ದೇವಾಲಯದ ವಿಗ್ರಹದಿಂದ

ಹೇಳಬಹುದು. 12–13ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಹೊಯ್ಸಳರು ಆಳ್ವಿಕೆ ಮಾಡುತ್ತಿದ್ದು, ಚಕ್ರಬಾವಿಯಲ್ಲಿ ಹೊಯ್ಸಳ ವೀರಬಲ್ಲಾಳನ್ನು ಆಳ್ವಿಕೆ ಮಾಡುತ್ತಿದ್ದ ಎಂಬುದಕ್ಕೆ ಶಾಸನಾಧಾರವಿದೆ. ಹುಲಿಕಟ್ಟೆಯಲ್ಲಿನ ಹೊಯ್ಸಳರ ಕಾಲದ ವೀರಗಲ್ಲು ಇದಕ್ಕೆ ಪುಷ್ಟಿ ನೀಡುತ್ತದೆ. ಈ ದೇವಾಲಯದ ಮೂಲ ವಿಗ್ರಹ ಕೆರೆಯ ಅರಳೀ ಮರದ ಬಳಿ ಭಗ್ನಗೊಂಡು ಬಿದ್ದಿದೆ. ಬಹುಶಃ ವಿಗ್ರಹ ಭಿನ್ನವಾದಾಗ ಅದನ್ನು ಬದಲಿಸಿ ಈಗಿರುವ ವಿಗ್ರಹವನ್ನು ಪುನರ್ ಪ್ರತಿಷ್ಠಾಪನೆ ಮಾಡಿದ್ದಾರೆ. ದೇವಾಲಯದ ಗೋಡೆಯೆಲ್ಲವೂ ಇತ್ತೀಚಿನದ್ದಾಗಿದೆ. ಚಕ್ರಬಾವಿ ಮೂಲ ಗ್ರಾಮವು ಈಗಿನ ಮಠದ ಬಳಿ ಇತ್ತೆಂದು ಹೇಳಬಹುದು. ವೇಣುಗೋಪಾಲಸ್ವಾಮಿ ದೇವಾಲಯವು ಬಹುಶಃ ಅಲ್ಲೇ ಇತ್ತೆಂದು ತೋರುತ್ತದೆ. ನಂತರ ಕಾಲಘಟ್ಟದಲ್ಲಿ ಹೊಸ ವಿಗ್ರಹದೊಂದಿಗೆ ಊರ ಮಧ್ಯಭಾಗ ಈಗಿರುವ ಸ್ಥಳದಲ್ಲಿ ನಿರ್ಮಿಸಿದ್ದಾರೆ.

ಈಗಿರುವ ವಿಗ್ರಹವೂ ಸುಮಾರು 200–300 ವರ್ಷ ಹಳೆಯದ್ದಾಗಿದೆ. ಈ ದೇವಾಲಯವು ಕ್ರಮವಾಗಿ ಮೆಟ್ಟಿಲುಗಳು, ಮುಖಮಂಟಪ ಮತ್ತು ಗರ್ಭಗುಡಿಯನ್ನು ಹೊಂದಿದೆ. ದೇವಾಲಯವನ್ನು ಪೂರ್ವದ ಕಡೆಗೆ ಮುಖಮಾಡಿ ನಿರ್ಮಿಸಲಾಗಿದೆ. ಗರ್ಭಗುಡಿಯಲ್ಲಿ ಒಂದು ಅಡಿ ಪೀಠದ ಮೇಲೆ ಸುಮಾರು ಒಂದೂವರೆ ಅಡಿ ಎತ್ತರದ ವೇಣು ಗೋಪಾಲಸ್ವಾಮಿಯನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಕೈಯಲ್ಲಿ ಕೊಳಲು ಹಿಡಿದ ಗೋಪಾಲನ ಅಕ್ಕಪಕ್ಕದಲ್ಲಿ ಹೆಂಡತಿಯರಾದ ರುಕ್ಮಿಣಿ–ಸತ್ಯಭಾಮೆಯರು ನಿಂತಿದ್ದಾರೆ. (ಕೆರೆ ಹತ್ತಿರವಿರುವ ಭಗ್ನಗೊಂಡಿರುವ ಶಿಲ್ಪದಲ್ಲಿ ವೇಣುಗೋಪಾಲನ ಅಕ್ಕಪಕ್ಕದಲ್ಲಿ ಕೃಷ್ಣ–ರುಕ್ಮಿಣಿ ಮತ್ತು ಕೃಷ್ಣ–ರಾಧೆಯರ ಶಿಲ್ಪಗಳಿವೆ)

ಜಂಗಮ ಮಠದ ಮರುಳಸಿದ್ಧೇಶ್ವರ

ಮಠದ ಮರುಳ ಸಿದ್ದೇಶ್ವರಸ್ವಾಮಿ ದೇವಾಲಯವು ಸುಮಾರು 300 ವರ್ಷ ಪ್ರಾಚೀನವೆಂದು ಹೇಳಬಹುದು. ಈ ದೇವಾಲಯ ವನ್ನು ಚಕ್ರಬಾವಿಯ ಮರುಳ ದೇವನು ಕಟ್ಟಿಸಿದ್ದನೆಂದು ಶಾಸನದಿಂದ ತಿಳಿಯುತ್ತದೆ. ಮರುಳ ದೇವನು ರಾಜನಾಗಿರಬಹುದು ಅಥವ ಶೈವ ಯತಿಯಾಗಿರ ಬಹುದು. ದೇವಾಲಯವು ಜಂಗಮ ಮಠದ ಆವರಣದಲ್ಲಿದ್ದು ಕ್ರಮವಾಗಿ ರಂಗಮಂಟಪ, ಗರ್ಭಗುಡಿಯನ್ನು ಹೊಂದಿದೆ. ದೇವಾಲಯದ ಎದುರುಗಡೆ ನಂದಿ ಮಂಟಪವಿದೆ. ಗರ್ಭ ಗುಡಿಯ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರಿದ್ದಾರೆ. ಈ ದೇವಾಲಯದಲ್ಲಿ ಪೀಠಾಧ್ಯಕ್ಷರ ಗದ್ದುಗೆಗಳಿವೆ. ಗರ್ಭಗುಡಿಯಲ್ಲಿ ಮರುಳದೇವರ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ರಂಗಮಂಟಪದಲ್ಲಿ ಶಿವನ ಪಂಚಲೋಹದ ವಿಗ್ರಹ ಮತ್ತು ಕಂಬಗಳಿವೆ.

ಮರುಳ ಸಿದ್ದೇಶ್ವರ ದೇವಾಲಯದ ಮುಂದೆ ನಂದಿ ಮಂಟಪದಲ್ಲಿ ಪ್ರಾಚೀನ ಕಾಲದ ನಂದಿ ವಿಗ್ರಹ ಮತ್ತು ಒಂದು ಶಿವಲಿಂಗ ಇದೆ. ನಂದಿ ಮಂಟಪದ ಮೇಲೆ ಎತ್ತರವಾದ

ಗೋಪುರವಿದೆ. ನಂದಿ ಮಂಟಪದಲ್ಲಿರುವ ಶಿವಲಿಂಗವು ಮರುಳಸಿದ್ದೇಶ್ವರ ದೇವಾಲಯದ ಮೂಲ ವಿಗ್ರಹವಾಗಿದ್ದು, ಇದು ಭಗ್ನಗೊಂಡಾಗ ಈಗಿರುವ ಶಿಲ್ಪವನ್ನು ಪ್ರತಿಷ್ಠಾಪನೆ ಮಾಡಲಾಗಿದೆ.

ಚಿಕ್ಕಣ್ಣಸ್ವಾಮಿ ದೇವಾಲಯ

ಚಿಕ್ಕಣ್ಣಸ್ವಾಮಿ ದೇವಾಲಯವ ಚಕ್ರಬಾವಿ ಗ್ರಾಮದಿಂದ 1 ಕಿ.ಮೀ. ದೂರದಲ್ಲಿದೆ. ಈ ದೇವಾಲಯವು ಚಕ್ರಬಾವಿಗಿಂತ ಬೇರೆ ಊರುಗಳ ಒಕ್ಲು (ವಕ್ಕುಗಳು) ಹೆಚ್ಚಾಗಿದ್ದಾರೆ. ಈ ದೇವಾಲಯವನ್ನು ಚಕ್ರಬಾವಿಯ ಚಿಕ್ಕಪ್ಪ ವಡೆಯ ದೇವರು ಕಟ್ಟಿಸಿದನೆಂದು ಯಲಗದಹಳ್ಳಿ ಶಾಸನದಿಂದ ತಿಳಿದುಬರುತ್ತದೆ. ಈ ಚಿಕ್ಕಣ್ಣಸ್ವಾಮಿ ವಡೆಯ ಒಬ್ಬ ರಾಜನಾಗಿರಬಹುದು ಅಥವಾ ಶೈವ ಯತಿಯಾಗಿರುಬಹುದು. ಈ ದೇವಾಲಯಕ್ಕೆ ಸುಮಾರು 300 ವರ್ಷಗಳ ಇತಿಹಾಸವಿದೆ. ಇಲ್ಲಿಯ ಶಿವಲಿಂಗವು ಪ್ರಾಚೀನವಾಗಿದ್ದು, ದೇವಾಲಯವು ಕ್ರಮವಾಗಿ ಮುಖ ಮಂಟಪ, ರಂಗ ಮಂಟಪ, ಗರ್ಭಗುಡಿಗಳನ್ನು ಹೊಂದಿದೆ.

ಸ್ಥಳೀಯರು ಈ ದೇವಾಲಯವನ್ನು ಚಿಕ್ಕಣ್ಣಸ್ವಾಮಿ, ಚಿಕ್ಕಯ್ಯಸ್ವಾಮಿ, ಚಿಕ್ಕ ಬೀರೇಶ್ವರಸ್ವಾಮಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಪ್ರತಿ ಭಾನುವಾರ ದೇವಾಲಯಕ್ಕೆ ಪೂಜೆ ಇರುತ್ತದೆ. ಪ್ರತಿ ಶಿವರಾತ್ರಿಯಲ್ಲಿ ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ. ಈ ಭಾಗದ ಹೊಲಗಳಿಗೆ ಚಿಕ್ಕಣ್ಣಸ್ವಾಮಿಯೇ ಕಾವಲುಗಾರನೆಂದು ಚಕ್ರಬಾವಿಯ ಜನ ನಂಬಿದ್ದಾರೆ.

ವೀರಭದ್ರ ದೇವಾಲಯ

ಜಂಗಮಮಠದ ಪಕ್ಕದಲ್ಲಿ ವೀರಭದ್ರ ದೇವಾಲಯವನ್ನು ನಿರ್ಮಿಸಲಾಗಿದೆ. ದೇವಾಲಯ ಇತ್ತೀಚಿನದಾದರೂ ಒಳಗಿರುವ ಶಿಲ್ಪ ಪ್ರಾಚೀನ ಕಾಲದ್ದಾಗಿದೆ. ಈ ಶಿಲ್ಪವನ್ನು ಕೆಂಪೇಗೌಡರ ಕೊನೆಯ ರಾಜ ಮುಮ್ಮಡಿ ಕೆಂಪವೀರಪ್ಪಗೌಡ ನಿರ್ಮಿಸಿದನೆಂದು ತಿಳಿದುಬರುತ್ತದೆ. (ಶಿಲ್ಪದ ಸಂಪೂರ್ಣ ವಿವರವನ್ನು ಶಿಲ್ಪಕಲೆ ಅಧ್ಯಾಯದಲ್ಲಿ ಚರ್ಚಿಸುತ್ತೇನೆ) ಚಕ್ರಬಾವಿ ಯಲ್ಲಿ ವೀರಭದ್ರ ದೇವಾಲಯ ವನ್ನು ಮರಳಸಿದ್ದೇಶ್ವರ ಮಠದ ಪೀಠಾಧ್ಯಕ್ಷರಾದ ಶ್ರೀಸಿದ್ದಲಿಂಗಸ್ವಾಮಿಯವರು ನಿರ್ಮಿಸಿದ್ದಾರೆ. ಮುಖಮಂಟಪ ಮತ್ತು ಗರ್ಭಗುಡಿ ಇರುವ ದೇವಾಲಯದಲ್ಲಿ ಗರ್ಭಗುಡಿಯ ಸುತ್ತ ಪ್ರದಕ್ಷಿಣ ಪಥವಿದೆ. ವೀರಭದ್ರನು ಒಂದು ಕೈಯಲ್ಲಿ ಬಿಲ್ಲುಬಾಣ ಹಿಡಿದಿದ್ದರೆ, ಮತ್ತೊಂದು ಕೈಯಲ್ಲಿ ಕತ್ತಿ ಹಿಡಿದು ನಿಂತಿದ್ದಾನೆ. ಎಡಭಾಗದಲ್ಲಿ ಟಗರು ತಲೆಯ ಒಬ್ಬ ವ್ಯಕ್ತಿ ನಿಂತಿದ್ದಾನೆ. ಅವನು ದಾಕ್ಷಾಯಿಣಿ ತಂದೆಯಾದ ದಕ್ಷಬ್ರಹ್ಮನ ಶಿಲ್ಪವಾಗಿದೆ. ದಕ್ಷಬ್ರಹ್ಮನು ಕೈ ಮುಗಿದು ನಿಂತಿದ್ದಾನೆ.

ಪುರಾಣ ಕತೆಯ ಪ್ರಕಾರ ದಕ್ಷಬ್ರಹ್ಮನ ಸಂಹಾರಕ್ಕೆಂದೇ ವೀರಭದ್ರ ಅವತರಿಸಿದ್ದಾನೆ. ದೇವಾಲಯದ ಮುಖ ಮಂಟಪದಲ್ಲಿ ಒಂದು ಕಡೆ ದಕ್ಷಬ್ರಹ್ಮನ ಶಿಲ್ಪವನ್ನು ಕೆತ್ತಲಾಗಿದ್ದು,

ಇನ್ನೊಂದು ಕಡೆ ದೇವಿಯ ವಿಗ್ರಹವನ್ನು ಕೆತ್ತಲಾಗಿದೆ. ಚಕ್ರಬಾವಿಯಲ್ಲಿ ಹಿಂದೆ ವೀರಭದ್ರನ ಆರಾಧನೆಯಿದ್ದು ಇವನ ಆರಾಧನೆಗೋಸ್ಕರ ಒಂದು ದೇವಾಲಯವಿತ್ತೆಂದು ಹೇಳಬಹುದು. ಆದರೆ ಈ ಮೂಲ ದೇವಾಲಯ ಎಲ್ಲಿತ್ತು ಎಂದು ಹೇಳುವುದು ಕಷ್ಟ.

ಲಕ್ಷ್ಮಿದೇವಿ ಗುಡಿ

ಚಕ್ರಬಾವಿಯ ಕೆರೆ ಪಕ್ಕದಲ್ಲಿ ಲಕ್ಷ್ಮಿದೇವಿಯ ಗುಡಿಯಿದೆ. ಈ ದೇವಾಲಯದ ಮೂಲ ವಿಗ್ರಹ ಈ ಜಂಗಮ ಮಠದ ಆವರಣದಲ್ಲಿದೆ. ಸ್ವಲ್ಪ ಭಿನ್ನವಾಗಿದೆ. ಇನ್ನೊಂದು ವಿಗ್ರಹ ಪ್ರತಿಷ್ಠಾಪನೆಗೆ ಸಿದ್ಧವಾಗಿ ನಿಂತಿದೆ. (ದೇವಾಲಯದ ಕೆಲಸ ನಡೆಯುತ್ತಿದ್ದರಿಂದ ಹೊಸ ವಿಗ್ರಹವನ್ನು ಸದ್ಯಕ್ಕೆ ಇಲ್ಲಿ ಇಟ್ಟಿದ್ದಾರೆ) ಈ ದೇವಾಲಯದ ಬಳಿ ಒಂದು ಲಿಂಗ, ಮುದ್ರೆ ಕಲ್ಲು, ವೀರಮಾಸ್ತಿಗಲ್ಲು, ಆಂಜನೇಯ ಶಿಲ್ಪಗಳಿವೆ. ಲಕ್ಷ್ಮಿದೇವಿಯು ಒಬ್ಬ ವೀರ ಮಹಿಳೆಯಾಗಿದ್ದು ಅವಳಿಗೋಸ್ಕರ ನಿರ್ಮಿಸಿದ ದೇವಾಲಯವಾಗಿದೆ. ಚಕ್ರಬಾವಿಯ ಹೆಣ್ಣು ಮಕ್ಕಳಿಗೆ ಯಾವುದೇ ಸಮಸ್ಯೆಯಿದ್ದರೂ ಇವಳ ಬಳಿ ಬಂದು ಬೇಡಿ ಕೊಳ್ಳುತ್ತಿದ್ದರು. ಮಕ್ಕಳಿಲ್ಲದ ಕೆಲವು ಹೆಣ್ಣುಮಕ್ಕಳು ಇವಳ ಬಳಿ ಬಂದು ಬೇಡಿಕೊಳ್ಳುತ್ತಿದ್ದರು ಮತ್ತು ಇದಕ್ಕೆ ಪೂರಕವೆಂಬತೆ ದೇವಾಲಯದ ಆವರಣ ದಲ್ಲಿರುವ ಲಜ್ಜಾಗೌರಿ ಶಿಲ್ಪವಿದೆ. ಮಕ್ಕಳಿಲ್ಲದ ಯಾರೋ ಒಬ್ಬ ಹೆಣ್ಣು ಮಗಳು ಇಲ್ಲಿ ಬೇಡಿಕೊಂಡಿದ್ದರ ಕುರುಹಾಗಿ ಲಜ್ಜಾಗೌರಿ ಶಿಲ್ಪವನ್ನು ನಿರ್ಮಿಸಿದ್ದಾಳೆ. ಒಟ್ಟಾರೆ ಲಕ್ಷ್ಮಿದೇವಿಗುಡಿ ಚಕ್ರಬಾವಿಯು ಪ್ರಾಚೀನ ದೇವಾಲಯಗಳಲ್ಲಿ ಇದೂ ಒಂದಾಗಿದ್ದು, ಲಕ್ಷ್ಮಿದೇವಿ ಹೆಣ್ಣು ಮಗಳ ಕಷ್ಟಗಳನ್ನು ಪರಿಹರಿಸುತ್ತಿದ್ದಳು.

ಕೋಡಿ ಬಸವಣ್ಣನ ಗುಡಿ

ಬಸವಣ್ಣನ ದೇವಾಲಯವು ಚಕ್ರಬಾವಿ ಕೆರೆಯ ಬಳಿಯಿದ್ದು ಕೆರೆಕೋಡಿ ಬಳಿ ಇರುವುದರಿಂದ ಈ ದೇವಾಲಯವನ್ನು ಕೋಡಿ ಬಸವಣ್ಣನೆಂದು ಕರೆಯುತ್ತಾರೆ. ಈ ದೇವಾಲಯವು ಗರ್ಭಗುಡಿ ಮತ್ತು ಮುಖಮಂಟಪವನ್ನು ಹೊಂದಿದೆ. ಗರ್ಭಗುಡಿಯಲ್ಲಿರುವ ಬಸವಣ್ಣ ವಿಗ್ರಹವು ಪ್ರಾಚೀನವಾಗಿದೆ. ವೀರಶೈವರ ಆರಾಧ್ಯ ದೈವವಾಗಿದ್ದು, ಪ್ರತಿವರ್ಷ ಬಸವಣ್ಣನ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಪ್ರತಿವರ್ಷ ಯುಗಾದಿಗೆ ಒಂದು ವಾರ ಮುಂಚೆ ಸೋಮವಾರದಂದು ಕೊಂಡ ಸೇವೆಯನ್ನು ಬಸವಣ್ಣನಿಗೆ ಅರ್ಪಿಸುತ್ತಾರೆ.

ಚೌಡಮ್ಮ ಗುಡಿ

ಕೋಡಿ ಬಸವಣ್ಣ ಗುಡಿ ಮುಂಭಾಗ ಚೌಡಮ್ಮನ ಗುಡಿ ಇತ್ತು. ಚಕ್ರಬಾವಿಯಲ್ಲಿ ಶಕ್ತಿ ದೇವತೆಯಾದ ಚೌಡಮ್ಮನನ್ನು ಆರಾಧಿಸುತ್ತಿದ್ದರು. ಚೌಡಮ್ಮನ ಗುಡಿ ಮೊದಲು ಚಕ್ರಬಾವಿಯಲ್ಲಿ ಇತ್ತೆಂದು ಈಗ ಪ್ರಸ್ತುತ ಉಜ್ಜಯಿನಿಯಲ್ಲಿದೆ ಎಂದು ಇಲ್ಲಿನ ಸ್ಥಳೀಯರು ಹೇಳುತ್ತಾರೆ. ಆದರೆ

ವಿಗ್ರಹವಿರಲಿಲ್ಲ. ಸ್ಥಳೀಯರು ಹೇಳುವ ಪ್ರಕಾರ ವಿಗ್ರಹ ಬಹುಶಃ ಉಜ್ಜಯಿನಿಗೆ ಸ್ಥಳಾಂತರ ಗೊಂಡಿರಬಹುದು.

ಮುತ್ತರಾಯಸ್ವಾಮಿಗುಡಿ

ಬಸವಣ್ಣ ಗುಡಿಯಿಂದ ಏರಿ ಮೇಲೆ ಸಾಗಿ ನಡೆದುಹೋದರೆ ಕಡೆ ಹುಣಸೇಮರದ ಬಳಿ ಒಂದು ಪಾಳು ಮಂಟಪವಿದೆ. ಅದನ್ನು ಸ್ಥಳೀಯರು ಮುತ್ತರಾಯ ಸ್ವಾಮಿಯ ದೇವಸ್ಥಾನವೆಂದು ಕರೆಯುತ್ತಾರೆ. ಇಲ್ಲಿ ವಿಗ್ರಹವಿಲ್ಲ. 15–20 ವರ್ಷಗಳ ಹಿಂದೆ ಮುತ್ತುರಾಯಸ್ವಾಮಿ (ಆಂಜನೇಯ) ಆರಾಧನೆಯು ನಡೆಯುತ್ತಿತ್ತೆಂದು ಸ್ಥಳೀಯರು ಹೇಳುತ್ತಾರೆ. ಸಾಮಾನ್ಯವಾಗಿ ಪ್ರತೀ ಗ್ರಾಮದ ಹೆಬ್ಬಾಗಿಲಲ್ಲಿ ಆಂಜನೇಯಸ್ವಾಮಿ ದೇವಾಲಯವಿರುವುದು ಪ್ರಾಚೀನ ಗ್ರಾಮದ ಲಕ್ಷಣವಾಗಿದೆ. ಚಕ್ರಬಾವಿಯಲ್ಲಿ ಆಂಜನೇಯಸ್ವಾಮಿ ದೇವಾಲಯವು ಇಲ್ಲಿ ಇರುವುದನ್ನು ನೋಡಿದರೆ ಊರಿಗೆ ಇದೇ ಹೆಬ್ಬಾಗಿಲಾಗಿತ್ತೆಂದು ತಿಳಿದುಬರುತ್ತದೆ. ಕಾಲುನಡಿಗೆಯ ಕಾಲದಲ್ಲಿ ಜನರು ಬಹುಶಃ ಬೆಟ್ಟದ ಸಿದ್ದಪ್ಪನ ಗುಡ್ಡೆಯ ಹತ್ತಿರದಿಂದ ನಡೆದುಕೊಂಡು ಊರಿಗೆ ಸೇರುತ್ತಿದ್ದರೆಂದು ತಿಳಿಯುತ್ತದೆ. ಬೆಟ್ಟದ ಸಿದ್ದಪ್ಪಗುಡ್ಡೆಯಿಂದ ಗಟ್ಟಿಪುರ, ಮತ್ತಿಕೆರೆ ಮುಂತಾದ ಗ್ರಾಮಗಳಿಗೆ ಈಗಲೂ ಕಾಲುದಾರಿಗಳಿರುವುದನ್ನು ಗಮನಿಸಬಹುದು. ಆದ್ದರಿಂದ ಪ್ರಾಚೀನ ಕಾಲದ ಚಕ್ರಬಾವಿ ಗ್ರಾಮದ ಹೆಬ್ಬಾಗಿಲು ಈಗಿನ ಮುತ್ತುರಾಯಸ್ವಾಮಿ ಗುಡಿಯೇ ಆಗಿದೆ.

ಬೆಟ್ಟದ ಸಿದ್ದಪ್ಪನಗುಡ್ಡೆ

ಬೆಟ್ಟದ ಸಿದ್ದಪ್ಪನೂ ಚಕ್ರಬಾವಿಯ ಜನರ ಆರಾಧ್ಯದೈವನಾಗಿದ್ದನು. ಚಕ್ರಬಾವಿಯಿಂದ ಒಂದು ಕಿ.ಮೀ. ದೂರದಲ್ಲಿದೆ. ಬೆಟ್ಟದ ಪಕ್ಕದಿಂದ ಜನರು ಓಡಾಡುವ ದಾರಿಯಿದೆ. ಇಲ್ಲಿ ಜನರು ಸಿದ್ದಪ್ಪನ ಪಾದುಕೆ ಗಳನ್ನು ಕೆತ್ತಿ ಅವನನ್ನು ಪೂಜಿಸುತ್ತಾರೆ. ಮಳೆಬರದೆ ಇದ್ದಾಗ 'ಮಳೆ ಹೋಗಿ ಬೆಟ್ಟಕ್ಕೆ ಸೇರಿಕೊಂಡಿದೆ' ಎಂದು ಚಕ್ರಬಾವಿಯ ಜನರು ಅಲ್ಲೇ ಪರ ಮಾಡಿ ಸಿದ್ದಪ್ಪನಿಗೆ ಪೂಜೆ ಮಾಡಿ, ಊರಿನ ಜನಕ್ಕೆ ಅಲ್ಲೇ ಊಟ ಬಡಿಸುತ್ತಿದ್ದರು. ನಂತರ ಮಳೆ ಬರುತ್ತಿತ್ತು ಎಂದು ಸ್ಥಳೀಯರು ಹೇಳುತ್ತಾರೆ. ಬೆಟ್ಟದ ಸಿದ್ದಪ್ಪನ ಗುಡ್ಡೆ ಹತ್ತಿರ ಹಲವಾರು ಗುಹೆಗಳಿದ್ದು ಈಗ ಕರಡಿಗಳಿಗೆ ಆವಾಸಸ್ಥಾನ ವಾಗಿದೆ. ಈ ಗುಡ್ಡೆಯ ಇನ್ನೊಂದು ಮಹತ್ವವೆಂದರೆ ಇಲ್ಲಿ ಪ್ರಾಚೀನ ಕಾಲದ ಶಿಲಾಯುಗದ ಜನರು ವಾಸಿಸುತ್ತಿದ್ದ ಲಕ್ಷಣ ಕಂಡುಬರುತ್ತದೆ. ಚಕ್ರಬಾವಿಯ ಎಲ್ಲ ದೇವರುಗಳಂತೆ ಸಿದ್ದಪ್ಪನೂ ಒಬ್ಬ ಪ್ರಮುಖ ದೇವರಾಗಿದ್ದಾನೆ.

ಹುಲಿಯೂರಮ್ಮನ ದೇವಾಲಯ

ಹುಲಿಯೂರಮ್ಮ ದೇವಾಲಯವು ಸುಮಾರು 100-150 ಹಳೆಯ ದೇವಾಲಯವಾಗಿದೆ. ಪ್ರಸ್ತುತ ಈಗ ವಿಜೃಂಭಣೆಯಿಂದ ನಡೆಯುವ ಹಬ್ಬವೆಂದರೆ ಹುಲಿಯೂರಮ್ಮನ ಹಬ್ಬವಾಗಿದೆ. ಹುಲಿಯೂರಮ್ಮ ದೇವಿಯ ಮೂಲ ಹೆಸರು ಹುಲಿಯೇರಮ್ಮ ಎಂದಿದೆ. ಹುಲಿ ಮೇಲೆ ಕುಳಿತವಳು ಎಂದರ್ಥ. ಜನರ ಬಾಯಲ್ಲಿ ಹುಲಿಯೂರಮ್ಮ ಎಂದು ಪ್ರಚಲಿತವಾಗಿದೆ. ಪ್ರತಿ ವರ್ಷ ಯುಗಾದಿಗೆ ಒಂದು ವಾರ ಮುಂಚೆ ಹಬ್ಬ ನಡೆಯುತ್ತದೆ. ರೈತರು ಹೊನ್ನಾರು ಅಂದರೆ ನೇಗಿಲು ನೊಗವನ್ನು ಇಲ್ಲಿಂದ ಪೂಜಿಸಿ ಉಳುಮೆಗೆ ಹೊರಡುತ್ತಿದ್ದರು. ಈಕೆ ಶಕ್ತಿ ದೇವತೆಯಾಗಿದ್ದು, ಪ್ರಾಣಿಬಲಿ ಇಲ್ಲಿ ಮಾಡುವುದಿಲ್ಲವೆಂದು ಅರ್ಚಕರಾದ ಸಿ.ಎಲ್.ಬದರಿ ನಾರಾಯಣರು (ಬಾಬು) ಹೇಳುತ್ತಾರೆ. ಗರ್ಭಗುಡಿಯಲ್ಲಿ ಅದ್ಭುತವಾದ ಹುಲಿಯೂರಮ್ಮನ ವಿಗ್ರಹವಿದೆ.

ನಾಡಮಾರಮ್ಮ

ಚಕ್ರಬಾವಿಯ ಶಕ್ತಿ ದೇವತೆಯಾಗಿದ್ದು ಈಕೆ ಬಲಿ ಪ್ರಿಯೆ. ಇವಳಿಗೆ ಚಕ್ರಬಾವಿಯನ್ನು ಜನರು ಬಲಿ ಅರ್ಪಿಸಿ ಹಬ್ಬನ್ನು ಆಚರಿಸುತ್ತಾರೆ. ವಿಶೇಷ ಆರತಿಗಳನ್ನು ಮಾಡುತ್ತಾರೆ. ಈ ದೇವಾಲಯ ನಿರ್ಮಾಣವಾಗುವುದಕ್ಕೆ ಬದರಿ ನಾರಾಯಣರು ಕತೆಯಲ್ಲಿ ಹೇಳುತ್ತಾರೆ. ಸುಮಾರು 100-150 ವರ್ಷಗಳ ಹಿಂದೆ ಪಿಚಯ್ಯ ಎಂಬ ಮಡಿವಾಳ ಮೇಲೆ ದೇವತೆ ಮೈಮೇಲೆ ಬಂದು, ಪ್ರಸ್ತುತ ಈ ದೇವಾಲಯವಿರುವ ಜಾಗದಲ್ಲಿ ತನಗೆ ಒಂದು ಗುಡಿ ಕಟ್ಟಿಸುವಂತೆ ಆಜ್ಞೆ ಮಾಡುತ್ತಾಳೆ. ಅದರಂತೆ ಜನರು ಅವಳ ಹೆಸರಿನಲ್ಲಿ ದೇವಾಲಯವನ್ನು ಕಟ್ಟಿಸಿ ಪೂಜಿಸುತ್ತಾರೆ. ಪ್ರತಿ ಮಂಗಳವಾರ, ಶುಕ್ರವಾರ ಪೂಜೆ ನಡೆಯುತ್ತದೆ. ಈಗಲೂ ಈ ದೇವಾಲಯಕ್ಕೆ ಅರ್ಚಕರು ಮಡಿವಾಳರೇ ಆಗಿದ್ದಾರೆ. ಪ್ರಸ್ತುತ ಈಗ ಲಕ್ಷ್ಮಮ್ಮ ಮತ್ತು ತಿಮ್ಮಯ್ಯನ ಮನೆಯವರು ದೇವಿಯ ಪೂಜಾರಿಗಳಾಗಿದ್ದಾರೆ.

ಒಂದೇ ಗರ್ಭಗುಡಿಯ ದೇವಾಲಯದಲ್ಲಿ ಮೂರು ಕಲ್ಲುಗಳಿರುವ ವಿಗ್ರಹಗಳನ್ನು ಪೂಜಿಸುತ್ತಾರೆ. ಈ ಮೂರು ಕಲ್ಲುಗಳು ಸಾಮಾನ್ಯವಲ್ಲ. ಹಿಂದೆ ಪರ ಊರಿನ ಜನರು ಜಾತ್ರೆಗೆ ಹೋಗುವ ಸಂದರ್ಭದಲ್ಲಿ ರಾತ್ರಿಯಾದಾಗ ಚಕ್ರಬಾವಿಯಲ್ಲಿ ತಂಗುತ್ತಿದ್ದರು. ರಾತ್ರಿ ಊಟ ಕ್ಕೆಂದು ಮೂರು ಕಲ್ಲುಗಳನ್ನು ಜೋಡಿಸಿ ಅನ್ನವನ್ನು ಬೇಯಿಸುತ್ತಿದ್ದರು. ಪಾತ್ರೆಯಲ್ಲಿ ಅನ್ನ ಕುದಿಯುವ ಬದಲು, ರಕ್ತ ಕುದಿಯುತ್ತಿತ್ತಂತೆ. ಈ ಕಲ್ಲುಗಳು ಸಾಮಾನ್ಯ ಕಲ್ಲುಗಳಲ್ಲ. ಇವುಗಳಿಗೆ ಅದ್ಭುತ ಶಕ್ತಿಯಿದೆ ಎಂದು ತಿಳಿದು ಪೂಜಿಸಲಾರಂಭಿಸಿದಂತೆ. ಒಂದೊಂದು ಕಲ್ಲಿಗೂ ಒಂದೊಂದು ಹೆಸರು ಮತ್ತು ವಿಶೇಷತೆಗಳಿವೆ. ಮದ್ಯ ಕಲ್ಲು ದೊಡ್ಡಮ್ಮ ಎಂದು ಊರಿನ ಜನಗಳನ್ನು, ಗ್ರಾಮವನ್ನು ಕಾಪಾಡುತ್ತಾಳೆ. ಎಡಗಡೆಯ ಚಿಕ್ಕಮ್ಮನ ಕಲ್ಲು ಮಕ್ಕಳಿಗೆ ಸಿಡುಬು,

ಜ್ವರ, ಅಮ್ಮ ಬರದಂತೆ ಕಾಯುತ್ತಾಳೆ. ಬಲಗಡೆಯ ಕಲ್ಲು ಜಾನುವಾರು (ದನ-ಎಮ್ಮೆ)ಗಳಿಗೆ ಕಾಯಿಲೆ ಬರದಂತೆ ನೋಡಿಕೊಳ್ಳುತ್ತಾರೆ ಎಂದು ಸ್ಥಳೀಯರು ಹೇಳುತ್ತಾರೆ.

ಗವಿಮಠ

ಚಕ್ರಬಾವಿಯ ಚಿಕ್ಕಯ್ಯನ ಗುಡಿ ದೇವಾಲಯದಿಂದ ಒಂದು ಕಿ.ಮೀ. ದೂರದಲ್ಲಿ ಒಂದು ಪಾಳುಮಂಟಪವಿದೆ. ಈ ಪ್ರದೇಶವನ್ನು 'ಗವಿಮಠದ ಬಯಲು' ಎಂದು ಕರೆಯುತ್ತಾರೆ. ಈ ಮಂಟಪದಲ್ಲಿ ಒಂದು ಶಿವಲಿಂಗ ವಿದೆ. ಇಲ್ಲಿ ಋಷಿಗಳ ಸಂಚಾರವಿದೆ ಯೆಂದು ಕೆಲವು ಹೇಳುತ್ತಾರೆ. ಇನ್ನೂ ಕೆಲವರು ಇಲ್ಲಿ ಹಿಂದೆ ಶೈವ ಯತಿಗಳು ಇದ್ದರೆಂದು ಮತ್ತೆ ಕೆಲವರು ಇದೊಂದು ಮನೆಯಾಗಿತ್ತು ಎಂದು ಹೇಳುತ್ತಾರೆ. ಇಲ್ಲಿ ಪ್ರತಿ ವರ್ಷ ಕಾರ್ತಿಕ ಮಾಸದಲ್ಲಿ ಪೂಜೆ ನಡೆಯುತ್ತದೆ.

ಇದೇ ರೀತಿ ಚಕ್ರಬಾವಿಯಲ್ಲಿ ಮೂರು ರಾಮ ಮಂದಿರಗಳಿದ್ದು, ಈ ರಾಮಮಂದಿರಗಳಲ್ಲಿ ಭಜನೆ, ನಾಟಕ ಅಭಿನಯ, ಗಣೇಶ ಉತ್ಸವ ಮುಂತಾದ ದೈವಿಕ ಆಚರಣೆಗಳು ನಡೆಯುತ್ತವೆ. ಈ ರೀತಿಯಾಗಿ ಚಕ್ರಬಾವಿಯಲ್ಲಿ ಪ್ರಾಚೀನ ಕಾಲದಿಂದಲೂ ಸರ್ವ ದೇವರುಗಳ ನೆಲೆಯಾಗಿದ್ದರ ಜೊತೆಗೆ ಮುಸಲ್ಮಾನರಿಗೆ ಮಸೀದಿ ಇದ್ದು ಬಾಬಾನ ಆರಾಧನೆ ನಡೆಯುತ್ತದೆ.

ಹುಲಿಕಟ್ಟೆ ಮಹದೇವಮ್ಮನ ಗುಡಿ

ಚಕ್ರಬಾವಿ ಗ್ರಾಮಕ್ಕೆ ಹೊಂದಿಕೆಯಾಗಿರುವ ಹುಲಿಕಟ್ಟೆ ಗ್ರಾಮದಲ್ಲಿ ಪ್ರಸಿದ್ಧ ಮಹದೇವಮ್ಮನ ಗುಡಿಯಿದ್ದು ಈ ದೇವಾಲಯವು ಕ್ರಮವಾಗಿ ಮೆಟ್ಟಿಲುಗಳು, ಮುಖಮಂಟಪ ಮತ್ತು ಗರ್ಭಗುಡಿ, ಗರ್ಭಗುಡಿಯ ಸುತ್ತ ಪ್ರದಕ್ಷಣಾ ಪಥವನ್ನು ಹೊಂದಿದೆ. ಹಿಂದೆ ಹಳ್ಳಿಯಲ್ಲಿ ಯಾವುದಾದರೂ ವ್ಯಾಜ್ಯವಾದಾಗ ಈ ದೇವಾಲಯದ ಮುಂದೆ ಕುಳಿತು ನ್ಯಾಯ ತೀರ್ಮಾನಮಾಡುತ್ತಿದ್ದರಂತೆ. ಹಿಂದೆ ಇದನ್ನು ಮಹದೇವಮ್ಮನ ಗುಡಿ ತೋಪು ಎಂದು ಕರೆಯುತ್ತಿದ್ದರಂತೆ. ಪ್ರಸ್ತುತ ಈ ಸ್ಥಳದಲ್ಲಿ ಈಗ ಗುಡಿಯ ಜೊತೆಗೆ ಶಾಲಾ-ಕಾಲೇಜುಗಳಿದ್ದು ವಿದ್ಯಾರ್ಥಿಗಳ ಪಾಲಿಗೆ ಮಹದೇವಮ್ಮ ಆರಾಧ್ಯದೈವವಾಗಿದ್ದಾಳೆ.

ಮಹದೇಶ್ವರ ಗುಡಿ

ಈ ದೇವಾಲಯವು ಚಕ್ರಬಾವಿಯ ಯಲಗದಹಳ್ಳಿ ಬಯಲಿನಲ್ಲಿದ್ದು, ಈಗ ಪಾಳುಬಿದ್ದಿದೆ. ಇದೂ ಕೂಡ ಚಕ್ರಬಾವಿ ಗ್ರಾಮದ ಆರಾಧ್ಯದೈವವಾಗಿದ್ದು, ಪ್ರಸ್ತುತ ಈ ದೇವಾಲಯವು ಕಲ್ಲುದೇವನಹಳ್ಳಿಗೆ ಸ್ಥಳಾಂತರವಾಗಿದೆ ಎಂದು ಚಕ್ರಬಾವಿಯ ಜನ ಹೇಳುತ್ತಾರೆ.

ಬೆಟ್ಟದ ಸಿದ್ದಪ್ಪ

ಶಿಲಾಯುಗದ ಜನರು ಕಲ್ಲಾಸರೆ, ಬಂಡೆಮೇಲೆ, ಬೆಟ್ಟದ ತಪ್ಪಲು ಗುಹೆಗಳಲ್ಲಿ ಬದುಕುತ್ತಿದ್ದರು. ಬೆಟ್ಟದ ಸಿದ್ದಪ್ಪನಗುಡ್ಡೆಯ ಕಲ್ಲಾಸರೆ, ಪೊಟರೆ, ಗುಹೆಗಳಲ್ಲಿ ಶಿಲಾಯುಗದ ಜನರು ವಾಸಿಸುತ್ತಿದ್ದರು. ಬೆಟ್ಟದ ಮೇಲೆ ಸಮತಟ್ಟಾದ ಸ್ಥಳವಿದ್ದು, ಆದಿ ಮಾವನ ಇಲ್ಲಿ ನೆಮ್ಮದಿಯಿಂದ ಜೀವಿಸುತ್ತಿದ್ದರು. ನೀರಿನ ಆಸರೆಗಾಗಿ ಇಲ್ಲಿ ಒಂದು ನೀರಿನ ಚಿಲುಮೆಯಿದೆ. ಪ್ರಾಣಿಗಳನ್ನು ಬೇಟೆಯಾಡಲು ಕಲ್ಲಿನ ಆಯುಧಗಳನ್ನು ಬಳಸುತ್ತಿದ್ದರು. ಇದಕ್ಕೆ ಆಧಾರವೆಂದರೆ ನೀರಿನ ಚಿಲುಮೆಯ ಪಕ್ಕದಲ್ಲಿ ಪುರಾತನ ಶಿಲಾಯುಗದ ಜನರು ಆಯುಧಗಳನ್ನು ಚೂಪು ಮಾಡಿಕೊಳ್ಳುತ್ತಿದ್ದ ಗುರುತುಗಳಿವೆ. ಬೆಟ್ಟದ ಮೇಲೆ ಪುರಾತನ ಕಾಲದ ಕಲ್ಲು ಬಂಡೆಗಳಿದ್ದು, ಕೆಲವು ಕಡೆ ವೃತ್ತಾಕಾರದ ಘೋರಿಗಳಿವೆ. ಪುರಾತನ ಕಾಲದಲ್ಲಿ ಚಕ್ರಬಾವಿಯ ಸಿದ್ದಪ್ಪನ ಗುಡ್ಡೆಯಿಂದ ಅರಳುಕುಪ್ಪೆ ಬೆಟ್ಟಕ್ಕೆ ನೇರವಾದ ದಾರಿಯಿದ್ದು, ಇವೆರಡೂ ಬೆಟ್ಟಕ್ಕೂ ಒಂದು ಕಿ.ಮೀ ದೂರದ ಅಂತರವಿದೆ.

ಶಿಲ್ಪಕಲೆ

ಚಕ್ರಬಾವಿಯಲ್ಲಿ ವೇಣುಗೋಪಾಲಸ್ವಾಮಿ ವಿಗ್ರಹ, ಲಕ್ಷ್ಮೀದೇವಿ ವಿಗ್ರಹ, ವೀರಭದ್ರ ಶಿಲ್ಪ, ಹಲವು ಶಿವಲಿಂಗಗಳು, ನಂದಿ ಶಿಲ್ಪಗಳು ಹೀಗೆ ಇವೇ ಮುಂತಾದ ವಿಶಿಷ್ಟ ರೀತಿಯ ಶಿಲ್ಪಗಳಿರುವುದನ್ನು ಗಮನಿಸಬಹುದಾಗಿದೆ. ಮೊದಲಿಗೆ –

ವೇಣುಗೋಪಾಲ ಸ್ವಾಮಿ ವಿಗ್ರಹ

ಚಕ್ರಬಾವಿಯ ಕೆರೆಯ ಅರಳಿಮರದ ಕೆಳಗೆ ಭಿನ್ನಗೊಂಡು ಒಂದು ಶಿಲ್ಪ ಬಿದ್ದಿದೆ. ಇದರ ಮೂಲ ಮೂರ್ತಿಯು ಮುರಿದು ಎಲ್ಲೋ ಬಿದ್ದಿರಬಹುದು. ಆ ಮೂರ್ತಿಯ ಸುಳಿವಿಲ್ಲ. ಭಿನ್ನಗೊಂಡ ಕಲ್ಲಿನಲ್ಲಿ ಎರಡು ದಂಪತಿಯ ಶಿಲ್ಪಗಳಿವೆ. ಒಂದು ಶ್ರೀಕೃಷ್ಣ–ರುಕ್ಮಿಣಿಯರದಾದರೆ ಇನ್ನೊಂದು ಶ್ರೀಕೃಷ್ಣ ರಾಧೆಯ ಶಿಲ್ಪವಾಗಿದೆ. ಒಂದು ಶಿಲ್ಪದಲ್ಲಿ ಶ್ರೀಕೃಷ್ಣನು ಕೊಳಲನ್ನು ಹಿಡಿದಿದ್ದರೆ ಇನ್ನೊಂದು ಶಿಲ್ಪದಲ್ಲಿ ಮೊಸರು ಕಡೆಯುವ ಮಂತನ್ನು ಹಿಡುದು ತನ್ನ ಹೆಂಡತಿಯರ ಜೊತೆ ನಿಂತಿದ್ದಾನೆ. ಈ ಶಿಲ್ಪಗಳ ಸಹಾಯದಿಂದ ಮುರಿದು ಹೋದ ವಿಗ್ರಹ ವೇಣುಗೋಪಾಲಸ್ವಾಮಿಯದೆಂದು ಹೇಳಬಹುದು.

ಮುರಿದು ಹೋದ ವೇಣುಗೋಪಾಲಸ್ವಾಮಿಯ ಮೂಲ ವಿಗ್ರಹವು ಬಹುಶಃ ಕೆರೆಯಲ್ಲಿ ಬಿದ್ದಿರಬಹುದು ಹಾಗೂ ಇದು ವೇಣುಗೋಪಾಲಸ್ವಾಮಿಯ ವಿಗ್ರಹವೆನ್ನುವುದಕ್ಕೆ ಸಾಕ್ಷಿಯೆಂದರೆ ಈಗ ಚಕ್ರಬಾವಿ ಗ್ರಾಮದಲ್ಲಿರುವ ವೇಣುಗೋಪಾಲಸ್ವಾಮಿ ದೇವಾಲಯ. ಮೂಲ ವಿಗ್ರಹ ಭಿನ್ನಗೊಂಡಾಗ ಈಗ ದೇವಾಲಯದಲ್ಲಿರುವ ವಿಗ್ರಹವನ್ನು ಪುನರ್ ಪ್ರತಿಷ್ಠಾಪನೆ ಮಾಡಲಾಗಿದೆ.

ಈ ಶಿಲ್ಪದ ಇನ್ನೊಂದು ಮಹತ್ವವೆಂದರೆ ಈ ಶಿಲ್ಪವು ಕರ್ನಾಟಕವನ್ನು 12ನೇ ಶತಮಾನದಲ್ಲಿ ಆಳಿದ ಹೊಯ್ಸಳದ ಕಾಲದ್ದು, ಹೊಯ್ಸಳರ ಕಾಲದಲ್ಲಿ ಮಾತ್ರ ಈ ರೀತಿಯ ಬಳಪದ ಕಲ್ಲನ್ನು ಶಿಲ್ಪಕಲೆಗೆ ಬಳಸುತ್ತಿದ್ದರು. ಸಾತನೂರು ಗ್ರಾಮದಲ್ಲಿರುವ ಹೊಯ್ಸಳರ ಕಾಲದ ಪುಂಡಲೀಕ ವಿಗ್ರಹದ ಕಲ್ಲಿಗೂ ಈ ಕಲ್ಲಿಗೂ ಸಾಮ್ಯತೆಯಿದೆ. ಇಂತಹ ಒಳಪದ ಕಲ್ಲಿನಲ್ಲಿ ಹೊಯ್ಸಳ ಕಾಲದ ಬೇಲೂರು, ಹಳೇಬೀಡು, ಸೋಮನಾಥಪುರ ದೇವಾಲಯಗಳನ್ನು ನಿರ್ಮಿಸಿದ್ದಾರೆ. 12ನೇ ಶತಮಾನದಲ್ಲಿ ಹೊಯ್ಸಳರು ಚಕ್ರಬಾವಿಯಲ್ಲಿ ಈ ವೇಣುಗೋಪಾಲಸ್ವಾಮಿಯನ್ನು ಪ್ರತಿಷ್ಠಾಪಿಸಿ ಅನಂತರ ಮೂಲ ವಿಗ್ರಹವು ಭಿನ್ನಗೊಂಡಾಗ ಈಗಿರುವ ವಿಗ್ರಹವನ್ನು ಪುನರ್ ಪ್ರತಿಷ್ಠಾಪನೆ ಮಾಡಲಾಗಿದೆ. ಈ ಶಿಲ್ಪದಿಂದ ಚಕ್ರಬಾವಿಗೆ ಸುಮಾರು 800 ವರ್ಷಗಳ ಇತಿಹಾಸವಿದೆಯೆಂದು ಹೇಳಬಹುದು. ಚಕ್ರಬಾವಿಯಲ್ಲಿ ಹೊಯ್ಸಳರ ಆಳ್ವಿಕೆ ಇದ್ದು ಹುಲಿಕಟ್ಟೆಯಲ್ಲಿ ದೊರೆಯುತ್ತಿರುವ ಹೊಯ್ಸಳರ ಕಾಲ ತುರುಗೊಳ್ ಶಾಸನವು ಇದಕ್ಕೆ ಪುಷ್ಠಿ ನೀಡುತ್ತದೆ.

ಲಕ್ಷ್ಮಿ ದೇವಿ

ಜಂಗಮ ಮಠದ ಮರುಳಸಿದ್ದೇಶ್ವರ ದೇವಾಲಯದ ಆವರಣದಲ್ಲಿ ಒಂದು ಲಕ್ಷ್ಮಿದೇವಿ ವಿಗ್ರಹವಿದೆ. ಇದರ ಪಕ್ಕದಲ್ಲಿ ಪ್ರತಿಷ್ಠಾಪನೆಗೆ ಸಿದ್ಧವಾಗಿರುವ ನೂತನ ಲಕ್ಷ್ಮಿದೇವಿ ವಿಗ್ರಹವೂ ಇದೆ. ಸುಮಾರು ಎರಡು ಎತ್ತರದ ವಿಗ್ರಹವಾಗಿದೆ.

ವೀರಭದ್ರ

ಚಕ್ರಬಾವಿಯಲ್ಲಿರುವ ಈ ವೀರಭದ್ರನ ಶಿಲ್ಪವನ್ನು ಮುಮ್ಮಡಿ ಕೆಂಪವೀರಪ್ಪಗೌಡ ನಿರ್ಮಿಸಿದನೆಂದು ತಿಳಿದುಬರುತ್ತದೆ. ಈತನು ಏಕಾಂಬರ ದೀಕ್ಷಿತ ಕವಿಯಿಂದ 'ವೀರಭದ್ರ ವಿಜಯ' ಕೃತಿಯನ್ನು ಬರೆಸಿದ್ದನು. ಮಾಗಡಿ ಸೀಮೆಯ ಸುತ್ತಮುತ್ತಲ ಗ್ರಾಮಗಳಲ್ಲಿ ವೀರಭದ್ರನ ಶಿಲ್ಪಗಳನ್ನು ಕೆತ್ತಿಸಿ, ದೇವಾಲಯಗಳನ್ನು ನಿರ್ಮಿಸಿದನು. ಮಾಗಡಿ ಸೀಮೆಯ ಹಲವು ವೀರಭದ್ರ ದೇವಾಲಯಗಳಲ್ಲಿ ಚಕ್ರಬಾವಿಯ ದೇವಾಲಯದಲ್ಲಿ ಒಂದು.

ವೀರಭದ್ರನ ಈ ಶಿಲ್ಪವು ಸುಮಾರು ಎರಡು ಅಡಿ ಎತ್ತರವಿದೆ. ಗ್ರಾನೈಟ್ ಕಲ್ಲಿನಿಂದ ನಿರ್ಮಿಸಿದ್ದು, ಕೈಗಳಲ್ಲಿ ಬಿಲ್ಲು-ಬಾಣ ಮತ್ತು ಕತ್ತಿ ಹಿಡಿದು ರೌದ್ರಾವತಾರದಲ್ಲಿ ನಿಂತಿದ್ದಾನೆ. ಬಲಗಡೆ ಟಗರು ತಲೆಯ ದಕ್ಷಬ್ರಹ್ಮನು ಕೈಮುಗಿದು ನಿಂತಿದ್ದಾನೆ.

ಗಣೇಶ

ಚಕ್ರಬಾವಿ ಜಂಗಮ ಮಠದಲ್ಲಿ ಒಂದು ಪ್ರಾಚೀನ ಕಾಲದ ಗಣಪತಿ ವಿಗ್ರಹವಿದೆ. ಇದು ಸುಮಾರು ಒಂದು ಅಡಿ ಎತ್ತರವಿದೆ. ಮರುಳ ಸಿದ್ದೇಶ್ವರ ದೇವಾಲಯವನ್ನು ಪ್ರತಿಷ್ಠಾಪಿಸಿದಾಗ

ಶಿವನ ಪರಿವಾರವಾದ ಪಾರ್ವತಿ, ನಂದಿ, ಗಣೇಶ ಮುಂತಾದ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ಶಿಲ್ಪವನ್ನು ಮರುಳದೇವನು ಕಟ್ಟಿಸಿದನೆಂದು ಶಾಸನದಿಂದ ತಿಳಿದುಬರುತ್ತದೆ.

ಶಿವಲಿಂಗ

ಜಂಗಮ ಮಠದ ಮರುಳಸಿದ್ದೇಶ್ವರ ದೇವಾಲಯದ ಎದುರು ಒಂದು ನಂದಿಮಂಟಪದ ಒಳಗಡೆ ಶಿವಲಿಂಗ ಇದ್ದು, ಇದು ಬಹುಶಃ ಮರುಳ ಸಿದ್ದೇಶ್ವರ ಮೂಲ ವಿಗ್ರಹವಾಗಿರಬಹುದು. ಅದು ಭಿನ್ನವಾದಾಗ ಈಗಿನ ಶಿಲ್ಪವನ್ನು ಪ್ರತಿಷ್ಠಾಪಿಸಿರಬಹುದು.

ನಂದಿ

ನಂದಿ ವಿಗ್ರಹವು ಮರುಳ ಸಿದ್ದೇಶ್ವರ ದೇವಾಲಯದ ಎದುರುಗಡೆ ನಂದಿ ಮಂಟಪದಲ್ಲಿದೆ. ಶಿವನ ಮುಂದೆ ನಂದಿ ಇರುವುದು ಸಹಜ. ಈ ದೃಷ್ಟಿಯಿಂದ ನಂದಿಯ ಪ್ರತಿಷ್ಠಾಪನೆ ಮಾಡಲಾಗಿದೆ.

ಪಾರ್ವತಿ

ಇದೂ ಮರುಳ ಸಿದ್ದೇಶ್ವರ ದೇವಾಲಯದ ಆವರಣದಲ್ಲಿದೆ. ವಿಗ್ರಹ ಭಿನ್ನವಾಗಿದೆ. ಸಾಮಾನ್ಯವಾಗಿ ಶಿವ ದೇವಾಲಯದಲ್ಲಿ ಆತನ ಪರಿವಾರವಾದ ಪಾರ್ವತಿ, ಗಣೇಶ, ನಂದಿ, ಸುಬ್ರಹ್ಮಣ್ಯ ಮುಂತಾದವರ ಶಿಲ್ಪಗಳನ್ನು ನಿರ್ಮಿಸುವುದು ಸಾಮಾನ್ಯವಾಗಿತ್ತು. ಇಲ್ಲಿಯೂ ಮರುಳಸಿದ್ದೇಶ್ವರನಾದ ಶಿವನನ್ನು ಪ್ರತಿಷ್ಠಾಪಿಸುವುದರ ಜೊತೆಗೆ ಅವನ ಪರಿವಾರವನ್ನು ನಿರ್ಮಿಸಲಾಗಿದೆ.

ಅಧ್ಯಾಯ – 6

ಚಕ್ರಬಾವಿ ಗ್ರಾಮದ ಸ್ಮಾರಕ ಶಿಲೆಗಳು

ಅಧ್ಯಾಯ – ಆರು

ಚಕ್ರಬಾವಿ ಗ್ರಾಮದ ಸ್ಮಾರಕ ಶಿಲೆಗಳು

ಭಾರತೀಯ ಸಂಸ್ಕೃತಿಯನ್ನು ಸಾರುವ ಅನೇಕ ಸ್ಮಾರಕ ಶಿಲೆಗಳು ಭಾರತದಾದ್ಯಂತ ಕಾಣಸಿಗುತ್ತವೆ. ಅದರಂತೆ ಕರ್ನಾಟಕದಲ್ಲಿಯೇ ಅನೇಕ ಸ್ಮಾರಕ ಶಿಲೆಗಳು ತನ್ನ ಗತಕಾಲದ ವೈಭವವನ್ನು ಬಿಂಬಿಸುತ್ತವೆ.

ಚಕ್ರಬಾವಿ ಗ್ರಾಮದಲ್ಲಿ ಹಲವಾರು ಸ್ಮಾರಕ ಶಿಲೆಗಳಿವೆ. ಈ ಶಿಲೆಗಳಿಂದ ಚಕ್ರಬಾವಿಯು ಸಂಸ್ಕೃತಿಗಳ ಆಗರವೆಂದು ಕರೆಯಬಹುದು. ವೀರಗಲ್ಲು, ವೀರಮಾಸ್ತಿಗಲ್ಲು, ತುರುಗೊಳ್ ಶಾಸನ, ಮಿಥುನಶಿಲ್ಪ, ಲಜ್ಜಗೌರಿ ಶಿಲ್ಪ, ಕೋಟೆ, ಪ್ರಾಚೀನ ಕೆರೆ, ಕಟ್ಟೆ, ಬಾವಿ, ಶಾಲೆ, ಪ್ರಾಚೀನಕಾಲದ ಕೆಲವು ವಿಶಿಷ್ಟ ಶಿಲ್ಪಗಳು, ಬೃಹತ್ ಶಿಲಾಯುಗದ ಸಮಾಧಿಗಳು ಮುಂತಾದ ಸ್ಮಾರಕಗಳನ್ನು ಕಾಣಬಹುದು. ಈ ಅಧ್ಯಾಯದಲ್ಲಿ ಚಕ್ರಬಾವಿಯಲ್ಲಿರುವ ಪ್ರತಿಯೊಂದು ಸ್ಮಾರಕ ಶಿಲೆಗಳ ಬಗ್ಗೆ ಪ್ರತ್ಯೇಕವಾಗಿ ಚರ್ಚಿಸಿದ್ದೇನೆ. ಮೊದಲಿಗೆ ವಿಶಿಷ್ಟ ರೀತಿಯ ಲಜ್ಜಾಗೌರಿ–ಮಿಥುನ ಶಿಲ್ಪದ ವಿವರಣೆಯನ್ನು ನೋಡಬಹುದು.

ಲಜ್ಜಗೌರಿ ಶಿಲ್ಪ ಮತ್ತು ಮಿಥುನ ಶಿಲ್ಪ

ಚಕ್ರಬಾವಿ ಗ್ರಾಮದ ಕೆರೆಯ ಪಕ್ಕದಲ್ಲಿ ಲಕ್ಷ್ಮಿದೇವಿ ದೇವಾಲಯ ಹೊರಗಡೆ ಒಂದು ವಿಶಿಷ್ಟವಾದ ಶಿಲ್ಪವಿದೆ. ಈ ಶಿಲ್ಪದಲ್ಲಿ ಎರಡು ಜೋಡಿ ದಂಪತಿಗಳ ಚಿತ್ರವಿದೆ. ಸುಮಾರು ಒಂದು ಅಡಿ ಎತ್ತರ, ನಾಲ್ಕು ಅಡಿ ಅಗಲವಿದೆ. ಚಿತ್ರದಲ್ಲಿ ಇಬ್ಬರು ಹೆಂಗಸರು ನಗ್ನರಾಗಿ ನಿಂತಿರುವ ಶಿಲ್ಪಗಳಿವೆ ಮತ್ತು ಆ ಕಡೆ–ಈ ಕಡೆ ಗಂಡಿನ ಶಿಲ್ಪಗಳಿವೆ. ಇದನ್ನು ಶಾಸನದ ಪರಿಭಾಷೆಯಲ್ಲಿ ಲಜ್ಜಗೌರಿ ಶಿಲ್ಪವೆಂದು ಕರೆಯಲಾಗುತ್ತದೆ. ಈ ಶಿಲ್ಪಗಳು ಕರ್ನಾಟಕದಲ್ಲಿ ತುಂಬಾ ಅಪರೂಪವೆಂದು ಹೇಳಬಹುದು.

ಕರ್ನಾಟಕದಲ್ಲಿ ಲಜ್ಜಗೌರಿ ಸಂಪ್ರದಾಯ ಕ್ರಿ.ಶ.2ನೇ ಶತಮಾನದಿಂದ ಆರಂಭವಾಯಿತೆಂದು ವಿದ್ವಾಂಸರು ಹೇಳುತ್ತಾರೆ. ಇದು ಹೆಚ್ಚಾಗಿ ಬಾಗಲಕೋಟೆಯ ಜಿಲ್ಲೆಯ ಐಹೊಳೆ, ಸಿದ್ದನಕೊಳ ಮುಂತಾದ ಕಡೆ ಕಾಣಬಹುದು. ಲಜ್ಜಗೌರಿ ಸಂಪ್ರದಾಯವು ಮಕ್ಕಳಿಲ್ಲದವರು ಈ ರೀತಿ ಶಿಲ್ಪ ನಿರ್ಮಿಸಿದರೆ ಮಕ್ಕಳಾಗುತ್ತವೆ ಎಂಬ ನಂಬಿಕೆ ಇತ್ತು.

ಲಜ್ಜಾಗೌರಿ ಶಿಲ್ಪಗಳು ನಗ್ನವಾಗಿರುತ್ತವೆ. ಚಕ್ರಬಾವಿಯ ಶಾಸನ ಶಿಲ್ಪದಲ್ಲೂ ಇಬ್ಬರು ಹೆಣ್ಣುಮಕ್ಕಳು ನಗ್ನವಾಗಿ ನಿಂತಿರುವುದನ್ನು ಕಾಣಬಹುದು.

ಲಜ್ಜಾಗೌರಿ ಸಂಪ್ರದಾಯವು ಶಾಸನ ಶಾಸ್ತ್ರದ ಮತ್ತು ಜನಪದ ಪರಿಮಿತಿಯಲ್ಲಿ ಇಲ್ಲ. ಇದು ಸ್ವತಂತ್ರ ಸಂಪ್ರದಾಯದೊಂದಿಗೆ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ವಿಶಿಷ್ಟ ಆಚರಣೆಯಾಗಿದೆ. ಬಹುಶಃ ಈ ಶಿಲ್ಪದಲ್ಲಿ ಹೆಣ್ಣು ನಗ್ನವಾಗಿದ್ದ ಚಿತ್ರವಿರುವುದರಿಂದ ಮುಜುಗರಕ್ಕೆ ಒಳಗಾಗಿ ಯಾವ ಸಂಪ್ರದಾಯಕ್ಕೂ ಸೇರಿಲ್ಲವಾಗಿರಬಹುದು. ಇಲ್ಲಿ ಹೆಣ್ಣು ನಗ್ನವಾಗಿರುವ ಉದ್ದೇಶ ಮಗು ತಾಯಿಯ ಗರ್ಭದಿಂದ ಹೊರಬರುವ ಸಂದರ್ಭ, ಮೈಥುನಕ್ಕೆ ಆಹ್ವಾನವೆನಿಸುವ ರೀತಿ ಇತ್ಯಾದಿ ಕಾರಣವಿರಬಹುದು.

ಒಟ್ಟಾರೆ ಇದು ಮಕ್ಕಳಿಲ್ಲದವರು ಈ ರೀತಿ ಶಿಲ್ಪಗಳನ್ನು ನಿರ್ಮಿಸುವ ಸಂಪ್ರದಾಯ ಪ್ರಾಚೀನ ಕಾಲದಲ್ಲಿ ಅಸಿತ್ವದಲ್ಲಿತ್ತು. ಮಕ್ಕಳಿಲ್ಲದವರು ಬೇರೆಯವರಿಂದ ಮಕ್ಕಳನ್ನು ಪಡೆಯುವ ಸಾಹಸಕ್ಕೂ ಕೈ ಹಾಕುತ್ತಿದ್ದರು. ಹಿಂದೆ ಇಂತಹ ವ್ಯವಸ್ಥೆ ಜನಪದ ಸಂಪ್ರದಾಯದಲ್ಲಿತ್ತೆಂದು ಹೇಳಬಹುದು. ಡಾ. ಚಂದ್ರಶೇಖರ ಕಂಬಾರರು ಬರೆದಿರುವ ಜನಪದ ಹಿನ್ನಲೆಯ ಕಾದಂಬರಿಯಾದ 'ಸಿಂಗಾರವ್ವ ಮತ್ತು ಅರಮನೆ' ಕೃತಿಯು ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಲಕ್ಷ್ಮಿದೇವಿ ದೇವಾಲಯದ ಹೊರಗಡೆ ಇರುವ ಈ ಶಾಸನ ಶಿಲ್ಪದಲ್ಲಿ ಇಬ್ಬರು ದಂಪತಿಗಳಿಗೆ ಮಕ್ಕಳಲ್ಲದಿರುವುದರಿಂದ ಈ ಶಿಲ್ಪವನ್ನು ನಿರ್ಮಿಸಿರಬಹುದು. ಈ ಶಾಸನ ಶಿಲ್ಪವನ್ನು ಮಿಥುನ ಶಿಲ್ಪವೆಂದೂ ಕರೆಯಬಹುದು. ಕರ್ನಾಟಕದ ಅನೇಕ ದೇವಾಲಯದ ಹೊರ ಅಧಿಷ್ಠಾನದಲ್ಲಿ ಮಿಥುನ ಶಿಲ್ಪಗಳನ್ನು ನಿರ್ಮಿಸಿ, ಇದೂ ನಮ್ಮ ಸಂಸ್ಕೃತಿಯ ಒಂದು ಭಾಗ ಎಂಬುದನ್ನು ಸಮಾಜಕ್ಕೆ ಸಾರುತ್ತಿದ್ದರು. ಮಿಥುನ ಶಿಲ್ಪದಲ್ಲಿ ಗಂಡ–ಹೆಂಡತಿ ವಿವಿಧ ಭಂಗಿಯಲ್ಲಿ ನಿಂತಿರುವ, ಮಲಗಿರುವ ಶಿಲ್ಪಗಳನ್ನು ಕಾಣಬಹುದು. ಲಜ್ಜಾಗೌರಿ ಶಿಲ್ಪಗಳಲ್ಲಿ ನಗ್ನ ಹೆಣ್ಣಿನ ಶಿಲ್ಪ ಮಾತ್ರವಿರುತ್ತದೆ. ಆದರೆ ಈ ಶಿಲ್ಪದಲ್ಲಿ ಹೆಣ್ಣು–ಗಂಡು ಒಟ್ಟಿಗೆ ಜೊತೆಯಲ್ಲಿಯಿರುವುದರಿಂದ ಇದು ಲಜ್ಜಾಗೌರಿ ಶಿಲ್ಪವೂ ಹೌದು ಮಿಥುನ ಶಿಲ್ಪವೂ ಹೌದು ಎನ್ನಬಹುದು.

ಲಜ್ಜಾಗೌರಿ ಎಂದು ಹೆಸರು ಬರಲು ಕಾರಣವಾದ ಕಥೆ

'ಲಜ್ಜಾಗೌರಿ' ಎಂಬುದು ಒಂದು ಸುಶೋಭಿತ ಸಂಸ್ಕೃತೀಕರಣದ ರೂಪ ಎನ್ನಬಹುದು. ಈ ದೇವಿಗಿರುವ ಲಜ್ಜಾಗೌರಿಯೆಂಬ ಹೆಸರು ಅವಳ ನಗ್ನ ಸ್ವರೂಪ ಮತ್ತು ಶಿರರಹಿತತೆಯ ಬಗ್ಗೆಯೂ ಸ್ಪಷ್ಟನೆ ನೀಡುಂತಹ ಅನೇಕ ಕತೆಗಳು ಜನತೆಯಲ್ಲಿ ಪ್ರಚಲಿತವಾಗಿವೆ. ಮಹಾಕೂಟದ ಮೂರ್ತಿಯ ಸಂದರ್ಭದಲ್ಲಿ ದೇವೀಕೋಶಕಾರರಲ್ಲಿ ಬರುವ ಒಂದು ಕಥೆಯು ಇಂತಿದೆ.

"ಒಮ್ಮೆ ಶಂಕರ ಮತ್ತು ಪಾರ್ವತಿಯರು ಒಂದು ಕೊಳದಲ್ಲಿ ಜಲಕ್ರೀಡೆಯಾಡುತ್ತಿರುವಾಗ ಶಂಕರ ದರ್ಶನ ಪಡೆಯಲೆಂದು ಒಬ್ಬ ಭಕ್ತನು ಅಲ್ಲಿಗೇ ಬಂದುಬಿಟ್ಟನು. ಅವನನ್ನು ಕಂಡ ಕೂಡಲೇ ಅವರಿಬ್ಬರು ನಾಚಿ ನೀರಾದರು. ಶಂಕರನು ಅಲ್ಲಿದ್ದ ಒಂದು ಮಂದಿರಕ್ಕೆ ಓಡಿ ಹೋಗಿ ಶಿವಲಿಂಗದಲ್ಲಿ ಲೀನನಾಗಿಬಿಟ್ಟರೆ, ಪಾರ್ವತಿಯಾದರೊ ಆ ನೀರಿನಲ್ಲಿಯೇ ಮುಳುಗಿ ಮರೆಯಾದಳು. ಆಗ್ಗೆ ಅತಿಶಯ ಲಜ್ಜೆಗೊಂಡುದರ ಪರಿಣಾಮವೇ ಪಾರ್ವತಿಗೆ 'ಲಜ್ಜಾಗೌರಿ' ಎಂಬ ಹೆಸರು ಪ್ರಾಪ್ತವಾಯಿತು."

'ತೀರ್ಥಯಾತ್ರಾ ಪ್ರಬಂಧ' ಕರ್ತೃ ಶ್ರೀ ಲೇಲೇ ಶಾಸ್ತ್ರೀಯವರು ಮಹಾಕೂಟದಲ್ಲಿನ ಲಜ್ಜಾಗೌರಿಯ ಚರಿತ್ರೆಗೆ ಸಂಬಂಧಿಸಿರುವಂತೆ ವಿವರಣೆ ನೀಡಿದ್ದಾರೆ. "ಅಲ್ಲಿನ ಜನರು ಹೇಳುವ ಕತೆ ಇಂತಿದೆ; ಒಮ್ಮೆ ಶಿವನು ವಿನೋದವಾಗಿ ತನ್ನ ಹೆಂಡತಿ ಪಾರ್ವತಿಯ ಸತ್ಯವನ್ನು ಪರೀಕ್ಷಿಸುವ ಉದ್ದೇಶದಿಂದ ತನ್ನ ಕೌದಿಯೊಂದನ್ನು ಜೋಪಾನವಾಗಿಡಬೇಕೆಂದು ಹೇಳಿ ಆಕೆಯ ಕೈಗೆಕೊಟ್ಟನು. ಅನಂತರ ತಾನೇ ಇಲಿಯ ರೂಪವನ್ನು ಧರಿಸಿ ಅದರಲ್ಲಿ ಮೂವತ್ತು ರಂಧ್ರಗಳನ್ನು ಮಾಡಿದನು. ಪಾರ್ವತಿಯು ಇಲಿಯು ಕತ್ತರಿಸಿರುವ ಆ ಕೌದಿಯನ್ನು ನೋಡಿದೊಡನೆ ಶಿವನ ಕೋಪದ ನೆನಪಾಗಿ ಹೆದರಿಬಿಟ್ಟಳು. ಆಗ್ಗೆ ಶಿವನು ಸಿಂಪಿಗ (ದರ್ಜಿ)ನ ವೇಶದಲ್ಲಿ ಅಲ್ಲಿಗೆ ಬಂದನು. ಪಾರ್ವತಿಯು ತನ್ನ ಕೌದಿಯನ್ನು ಹೊಲಿದುಕೊಡಬೇಕೆಂದು ಅವನಲ್ಲಿ ಕೇಳಿಕೊಂಡಳು. ಸಿಂಪಿಗನಾದರೋ 'ನಾನು ನಿನ್ನೊಂದಿಗೆ ರಮಿಸಲು ಅನುವು ಮಾಡಿಕೊಡುವುದಾದರೆ ಮಾತ್ರ ಈ ಕೌದಿಯನ್ನು ಮುನ್ನಿನ ಹಾಗೆ ಮಾಡಿಕೊಡುವುದಾಗಿ ಹೇಳಿದನು. ಶಿವನ ಉಗ್ರಕೋಪಕ್ಕೆ ಹೆದರಿದ್ದ ಪಾರ್ವತಿಯು ಅವನ ಇಚ್ಛೆಗೆ ಸಮ್ಮತಿಸಿದಳು. ಕೌದಿಯನ್ನು ಹೊಲಿದುಕೊಟ್ಟಾದ ಮೇಲೆ ಈರ್ವರೂ ಸಂಭೋಗ ಕ್ರಿಯೆಯಲ್ಲಿ ನಿರತರಾಗಿದ್ದಾಗ ಶಿವನು ಸಿಂಪಿಗ ರೂಪವನ್ನು ಬಿಟ್ಟು ನಿಜರೂಪದಲ್ಲಿ ಪ್ರತ್ಯಕ್ಷನಾದನು. ಅವನನ್ನು ಕಂಡೊಡನೆ ಪಾರ್ವತಿಯು ಅತ್ಯಂತ ನಾಚಿಕೆಯಿಂದ ಕುಗ್ಗಿ ಹೋದಳು. ತತ್ಪರಿಣಾಮವಾಗಿ ಅವಳ ಮಸ್ತಕವು (ರುಂಡ) ತತ್ಕಾಲಕ್ಕೆ ಸಂಪೂರ್ಣವಾಗಿ ಕರಗಿಬಿಟ್ಟಿತು. ಶರೀರ ಮಾತ್ರ ಆಗ ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿ ಉಳಿದುಬಿಟ್ಟಿತು." ಇವುಗಳಲ್ಲಿ ಮೊದಲನೆಯ ಕಥೆಯು ನಗ್ನತೆ ಮತ್ತು ಲಜ್ಜಾಗೌರಿ ಹೆಸರು ಇವುಗಳ ಸ್ಪಷ್ಟೀಕರಣದಾಗಿದ್ದು, ಎರಡನೆಯ ಕಥೆಯು ಮೇಲಿನವುಗಳೊಂದಿಗೆ ಅವಳ ಶಿರೋವಿಹೀನ ಸ್ವರೂಪದ ಬಗೆಗಿನ ಸ್ಪಷ್ಟೀಕರಣ ನೀಡುವ ಪ್ರಯತ್ನದವುಗಳಾಗಿವೆ.[36]

ಶಿರಸಹಿತವಾದ ಲಜ್ಜಾಗೌರಿ ಶಿಲ್ಪವನ್ನು ಮಹಾರಾಷ್ಟ್ರದ ಪೇಡಗಾಂ, ವೇರಳದಲ್ಲಿಯೂ, ಉತ್ತರ–ಪೂರ್ವ ಭಾರತದಲ್ಲಿಯೂ ಇನ್ನು ಮುಂತಾದ ಕಡೆಗಳಲ್ಲಿಯೂ ಕಾಣಬಹುದು.

---

[36] ಲಜ್ಜಾಗೌರಿ, ಕನ್ನಡಕ್ಕೆ ಅನುವಾದಿಸಿದವರು ಡಾ.ವಿಠಲರಾವ್ ಗಾಯಕ್ವಾಡ್, ಪು.15

ಅದರಂತೆ ಶಿರರಹಿತವಾದ ಲಜ್ಜಾಗೌರಿ ಶಿಲ್ಪಗಳನ್ನು ಮಹಾರಾಷ್ಟ್ರದ ತೇರ, ನೇವಾಸೆ, ಮಾಹೂರಝುರಿಯಲ್ಲಿಯೂ, ಆಂಧ್ರಪ್ರದೇಶದ ಆಲಂಪುರ, ನಾಗಾರ್ಜುನಕೊಂಡಗಳಲ್ಲಿಯೂ ಕಾಣಬಹುದು. ಅದರಂತೆ ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಮಹಾಕೂಟದಲ್ಲಿಯೂ ಇಂತಹ ಲಜ್ಜಾಗೌರಿ ಶಿಲ್ಪಗಳನ್ನು ಕಾಣಬಹುದು.

ಅದರಂತೆಯೇ ಮಾಗಡಿ ತಾಲೂಕಿನ ಚಕ್ರಬಾವಿಯಲ್ಲಿಯೂ ಗಂಡು-ಹೆಣ್ಣು ಒಟ್ಟಿಗೆ ಜೊತೆಯಲ್ಲಿರುವ ಲಜ್ಜಾಗೌರಿ ಶಿಲ್ಪಗಳನ್ನು ಕಾಣಬಹುದಾಗಿದೆ.

ವೀರಗಲ್ಲುಗಳು

ವೀರನೊಬ್ಬನ ಸ್ಮಾರಕವಾಗಿ ನಿಲ್ಲಿಸಿದ ಶಿಲೆಯೇ ವೀರ ಶಾಸನ ಅಥವಾ ವೀರಗಲ್ಲು. ವೀರಗಲ್ಲುಗಳನ್ನು ಗುರುತಿಸುವುದು ಬಹಳ ಸುಲಭವಾಗಿದ್ದು ಸಾಮಾನ್ಯವಾಗಿ ವೀರಗಲ್ಲುಗಳ ಮೇಲೆ ಮೂರು ಹಂತಗಳ ಚಿತ್ರಗಳಿದ್ದು ಕೆಳಗಿನ ಹಂತದಲ್ಲಿ ವೀರ ತನ್ನ ಶತ್ರುಗಳೊಡನೆ ಹೋರಾಡುತ್ತಿರುವಂತೆಯೂ, ಮಧ್ಯದ ಹಂತದಲ್ಲಿ ಯುದ್ಧದಲ್ಲಿ ಮಡಿದ ಅವನನ್ನು ದೇವತಾಸ್ತ್ರೀಯರು ವೀರಸ್ವರ್ಗಕ್ಕೆ ಕೊಂಡೊಯ್ಯುತ್ತಿರುವಂತೆಯೂ, ಮೇಲಿನ ಹಂತದಲ್ಲಿ ಅವನು ಭಗವಂತನ ಸಾನಿಧ್ಯದಲ್ಲಿ ಇರುವಂತೆಯೂ ಕೆತ್ತಲಾಗುತ್ತದೆ. ಐದು, ಆರು ಹಂತಗಳೂ ಇರುತ್ತವೆ. ಕೆಲವು ವೀರಗಲ್ಲುಗಳ ಮೇಲೆ ಹೇಳಿರುವಂತೆ ಬೇರೆ ಬೇರೆ ಹಂತಗಳಿರದೆ, ಕುದುರೆ ಸವಾರಿ ಮಾಡುತ್ತಿರುವ ಅಥವಾ ಯುದ್ಧ ಮಾಡುತ್ತಿರುವ ಬರಿಯ ವೀರನ ಚಿತ್ರವೋ ಅಥವಾ ಬಿಲ್ಲನ್ನೋ, ಖಡ್ಗವನ್ನೋ ಹಿಡಿದು ನಿಂತಿರುವ ಅಂತಹ ವೀರನ ಚಿತ್ರವೋ ರಣರಂಗದ ಚಿತ್ರವೋ ಇರುವುದುಂಟು. ಇನ್ನೂ ಕೆಲವು ಕಡೆ ಒಂದೇ ಹಂತದಲ್ಲಿ ವೀರನ ಚಿತ್ರವೂ, ಪಕ್ಕದಲ್ಲಿ ದೇವತಾ ಸ್ತ್ರೀಯರು ಕೊಂಡೊಯ್ಯುತ್ತಿರುವ ಚಿತ್ರವೂ ಇರುತ್ತದೆ. ಇನ್ನೂ ಕೆಲವೆಡೆ ವೀರನ ವಿಷಯವನ್ನು ಉಲ್ಲೇಖ ಮಾಡಿ ಅವನ ಶೌರ್ಯದ ಗುಣಗಾನವನ್ನು ಮಾಡಿರುತ್ತದೆ. ಅಂದರೆ ವೀರಗಲ್ಲಿನ ಮೇಲೆ ಬರಹ ಇರಬಹುದು, ಇಲ್ಲದಿರಬಹುದು. ಇನ್ನೂ ಕೆಲವು ಕಡೆ, ವೀರನ ಚಿತ್ರವನ್ನೇ ಕೊರೆಯದೆ ಅವನ ಶೌರ್ಯವನ್ನು ಮಾತ್ರ ಕೆತ್ತಿಗುತ್ತದೆ. ಇವೂ ಸಹ ವೀರಗಲ್ಲುಗಳೆನಿಸಿಕೊಳ್ಳುತ್ತವೆ.

ವೀರರ ಬಗ್ಗೆ ಶಾಸನಗಳನ್ನು ಬರೆಯಿಸಲು ಎರಡು ಉದ್ದೇಶಗಳಿದ್ದವು. ಸತ್ತ ವೀರನ ಹೆಸರು ಶಾಶ್ವತವಾಗಿರಲೆಂದು ಜನ ಅವನ ಹೆಸರಿನಲ್ಲಿ ಸ್ಮಾರಕ ಶಿಲೆಯನ್ನು ನಡಿಸುತ್ತಿದ್ದರು. ಇದು ಒಂದು ಉದ್ದೇಶವಾಗಿದ್ದರೆ, ಇನ್ನೊಂದು ಉದ್ದೇಶ ವೀರನೊಬ್ಬ ತನ್ನ ಪ್ರಾಣವನ್ನು ಲೆಕ್ಕಿಸದೆ ರಾಜನ ಪರವಾಗಿ ಹೋರಾಡಿ ಮಡಿದಿರಬಹುದು; ಊರನ್ನು ಕಳ್ಳರಿಂದ ರಕ್ಷಿಸಲು ಹೋಗಿ ಪ್ರಾಣವನ್ನು ಕಳೆದುಕೊಂಡಿರಬಹುದು, ವ್ಯಾಪಾರಕ್ಕಾಗಿ ಹೋಗಿ ದಾರಿಗಳ್ಳರನ್ನು

ಎದುರಿಸಿ ಮಡಿದವರು, ಭೇಟೆಯಲ್ಲಿ ಮಡಿದ ವೀರರು, ರಾಜಕೀಯ ಉದ್ದೇಶದಿಂದ ನಡೆದ ತುರುಗಾಳಗಗಳಲ್ಲಿ ಮಡಿದ ವೀರರು, ತುರುಗಳನ್ನು ಅಪಹರಿಸಲು ಹೋಗಿ ಮಡಿದವರು. ಹೀಗೆ ಕಾರಣಗಳಿಂದ ಮಡಿದವರ ಹೆಸರಿನಲ್ಲಿ ವೀರಗಲ್ಲುಗಳನ್ನು ಹಾಕಿಸುತ್ತಿದ್ದರು. ಮಾತ್ರವಲ್ಲದೇ, ಅವನು ಸತ್ತದ್ದರಿಂದ ಅವನ ವೃದ್ಧ ತಾಯಿ–ತಂದೆಯರು, ಹೆಂಡತಿ–ಮಕ್ಕಳು ಅನಾಥರಾಗಿರಬಹುದು. ಅವರನ್ನು ಸಾಕುವ ಹೊಣೆಯನ್ನು ರಾಜನೋ, ಸಮಾಜವೋ ವಹಿಸಿಕೊಳ್ಳುತ್ತಿದ್ದಿತು. ವೀರನ ಸ್ಮಾರಕವಾಗಿ ದಾನಗಳನ್ನು ಮಾಡಿ ಅದನ್ನು ಅವನ ಸಂಸಾರಕ್ಕೆ ಕೊಡುತ್ತಿದ್ದರು. ಹಾಗೆ ಕೊಟ್ಟ ಜಮೀನನ್ನು ವೀರನ ಮನೆಯವರು ತಲೆತಲಾಂತರವಾಗಿ ಅನುಭವಿಸಿಕೊಂಡು ಬರಬೇಕಾದ ಆ ದಾನದ ಸಂಗತಿ ಕಲ್ಲಿನ ಮೇಲೆ ಲಿಖಿತವಾಗುವುದು ಅಗತ್ಯವಾಗುತ್ತದೆ. ಹೀಗೆ ವೀರಗಲ್ಲುಗಳು ಒಂದು ರೀತಿಯಲ್ಲಿ ದಾನ ಶಾಸನಗಳೂ ಆಗಿರುತ್ತವೆ. ಇವೇ ಅಲ್ಲದೇ ಗೆದ್ದು ಬಂದ ವೀರನ ಕೆಂಪಾದ ಕತ್ತಿಯನ್ನು ರಾಜ ತಾನೇ ಕೈಯಾರೆ ತೊಳೆದು ದಾನಕೊಟ್ಟರೆ, ಅಂತಹ ದಾನವನ್ನು 'ಬಾಳ್ಗಳ್ಚು' ಎಂದೂ ಕರೆಯುತ್ತಿದ್ದರು.

ಇತ್ತೀಚೆಗೆ ಚಕ್ರಬಾವಿಯಲ್ಲಿ 'ಅಶ್ವಮೇಧ ಬಿಂಬಿಸುವ ಶಿಲೆ' ಪತ್ತೆಯಾಗಿದೆ ಎಂದೂ ಈ ಶಿಲೆಯು ಗ್ರಾಮಸ್ಥರಲ್ಲಿ ಹಲವು ಕುತೂಹಲ ಮೂಡಿಸಿದ್ದು, ಸಾಕಷ್ಟು ಚರ್ಚೆಗಳೂ ನಡೆದವು. ಈ ಶಿಲ್ಪವನ್ನು ಶಾಸನ ಶಾಸ್ತ್ರದಲ್ಲಿ 'ವೀರಗಲ್ಲು' ಎಂದು ಕರೆಯುತ್ತೇವೆ. ಈ ವೀರಗಲ್ಲು ಯುದ್ಧದಲ್ಲಿ ಹೋರಾಡಿದ ನೆನಪಿನಲ್ಲಿ ನಿರ್ಮಿಸುತ್ತಿದ್ದ ಸ್ಮಾರಕ. ಪ್ರಾಚೀನ ಕಾಲದಲ್ಲಿ ದಂಡು ಅಂದರೆ ಸೈನ್ಯಕ್ಕೆ ಸೇರುವುದು ಕಡ್ಡಾಯವಾಗಿತ್ತು. ಪ್ರತಿಯೊಂದು ಮನೆಯಲ್ಲಿ ಒಬ್ಬರು ಸೈನ್ಯಕ್ಕೆ ಹೋಗುತ್ತಿದ್ದರು. ಸೈನ್ಯಕ್ಕೆ ಸೇರಿದ ಮೇಲೆ ಶತ್ರು ರಾಜರ ವಿರುದ್ಧ ಯುದ್ಧ ಅನಿವಾರ್ಯವಾಗಿತ್ತು. ಇಂತಹ ಯುದ್ಧದಲ್ಲಿ 'ಸತ್ತರೆ ಸ್ವರ್ಗ, ಬದುಕಿದರೆ ರಾಜ್ಯ' ಎನ್ನುವ ದೃಢ ನಿರ್ಧಾರದಿಂದ ಸೈನಿಕರು ರಾಜನ ಪರವಾಗಿ ಶತೃಗಳ ವಿರುದ್ಧ ಯುದ್ಧಭೂಮಿಯಲ್ಲಿ ಹೋರಾಡುತ್ತಿದ್ದರು. ಯುದ್ಧದಲ್ಲಿ ಸತ್ತರೆ ಸತ್ತವನ ಕುಟುಂಬಕ್ಕೆ ರಾಜನು ಕೃತಜ್ಞತೆಯಿಂದ ಹೊಲ, ಗದ್ದೆ ಅಥವಾ ಚಿನ್ನವನ್ನೋ ದಾನ ಕೊಡುತ್ತಿದ್ದನು. (ಈಗ ಸರ್ಕಾರಿ ಕೆಲಸದಲ್ಲಿ ಅಥವಾ ಮಿಲ್ಟ್ರಿಯಲ್ಲಿ ಸತ್ತರೆ ಸರ್ಕಾರದಿಂದ ಹಣವನ್ನು ನೀಡುತ್ತಾರೆ) ಯುದ್ಧದಲ್ಲಿ ಬದುಕಿ ಬಂದವರಿಗೂ ರಾಜ ಮರ್ಯಾದೆ ಇತ್ತು ಹಾಗೂ ಇವರಿಗೆ ಭೂಮಿಯನ್ನು ನೀಡುತ್ತಿದ್ದರು. ಆದರೆ ಯುದ್ಧದಲ್ಲಿ ಬದುಕಿ ಬಂದವರಿಗೆ ಈ ರೀತಿ ಚಿತ್ರವನ್ನು ಬರೆಯುತ್ತಿರಲಿಲ್ಲ. ಸತ್ತವರಿಗೆ ಮಾತ್ರ ಚಿತ್ರ ಬಿಡಿಸುತ್ತಿದ್ದರು.

ಈಗ ಚಕ್ರಬಾವಿಯ ಕೆರೆಯ ಹಿಂಭಾಗ ಬೆಟ್ಟಸ್ವಾಮಯ್ಯನ ಗದ್ದೆಯಲ್ಲಿ ದೊರೆಯುತ್ತಿರುವ ಶಾಸನವು ಒಂದು ಮಹತ್ವದ ವೀರಗಲ್ಲಾಗಿದೆ. ಈ ಶಾಸನ ಶಿಲ್ಪದಲ್ಲಿ ಒಬ್ಬ ವೀರ ಖಡ್ಗವನ್ನು ಹಿಡಿದು ಯುದ್ಧದಲ್ಲಿ ಹೋರಾಡುತ್ತಿದ್ದಾನೆ. ಪಕ್ಕದಲ್ಲಿ ಸೈನಿಕರು ಯುದ್ಧದಲ್ಲಿ ಹೋರಾಡುತ್ತಿರುವ ದೃಶ್ಯವಿದೆ ಹಾಗೂ ಇನ್ನೊಂದು ಬದಿಯಲ್ಲಿ ಕುದುರೆಯ ಚಿತ್ರಗಳಿವೆ.

ಈ ಶಿಲ್ಪದಲ್ಲಿರುವ ವ್ಯಕ್ತಿಯು ಯಾವುದೋ ಒಂದು ಯುದ್ಧದಲ್ಲಿ ಹೋರಾಡಿ ಸತ್ತಿದ್ದಾನೆ. ಅವನ ನೆನಪಿಗೋಸ್ಕರ ಈ ಶಾಸನ ಕಲ್ಲನ್ನು ಕೆತ್ತಿದ್ದಾರೆ. ಯುದ್ಧಭೂಮಿ ಎಂದರೆ ಆನೆ, ಕುದುರೆ, ಸೈನಿಕರು ಇದ್ದೇ ಇರುತ್ತಾರೆ. ಯುದ್ಧ ಭೂಮಿಯಲ್ಲಿ ಈ ವ್ಯಕ್ತಿ ಹೋರಾಡಿ ಸತ್ತಿದ್ದಾನೆ ಎನ್ನುವುದನ್ನು ಬಿಂಬಿಸಲು ಶಾಸನ ಕವಿ ಈ ಚಿತ್ರದಲ್ಲಿ ಕುದುರೆ, ಸೈನಿಕ, ವೀರನನ್ನು ಹಾಗೂ ಯುದ್ಧಭೂಮಿಯ ಚಿತ್ರಣವನ್ನು ಕೆತ್ತಿದ್ದಾನೆ.

ಚಕ್ರಬಾವಿಯು ಮುಮ್ಮಡಿ ಕೆಂಪವೀರಪ್ಪಗೌಡನ ಕಾಲದಲ್ಲಿ ಹೋಬಳಿ ಕೇಂದ್ರವಾಗಿದ್ದರಿಂದ ಖಂಡಿತ ಇಲ್ಲಿ ಕೆಂಪೇಗೌಡನ ದೊಡ್ಡ ಸೈನ್ಯದ ತುಕ್ಕಡಿ (ಗುಂಪು) ಇತ್ತು. ಚಿಕ್ಕಯ್ಯನ ಗುಡಿ ಮುಂದೆ ಮತ್ತು ಕೆರೆಯ ಅರಳಿಮರದ ಕೆಳಗೆ ಹಲವಾರು ವೀರಗಲ್ಲುಗಳಿರುವುದರಿಂದ ಚಕ್ರಬಾವಿಯಲ್ಲಿ ಯುದ್ಧಗಳು ಆಗಾಗ್ಗೆ ನಡೆಯುತ್ತಿದ್ದವೆಂದು ಹೇಳಬಹುದು. ನೂರಾರು ವೀರವ್ಯಕ್ತಿಗಳು ಯುದ್ಧದಲ್ಲಿ ಮಡಿದಿದ್ದಾರೆ. ಆದ್ದರಿಂದ ಈ ಚಿತ್ರದಲ್ಲಿರುವ ವ್ಯಕ್ತಿಯು ಒಂದು ದೊಡ್ಡ ಯುದ್ಧದಲ್ಲಿ ಹೋರಾಡಿ ಸತ್ತಿದ್ದಾನೆ. ಈ ಶಾಸನವು ಗದ್ದೆಯಲ್ಲಿ ದೊರೆತಿರುವುದರಿಂದ ಯುದ್ಧದಲ್ಲಿ ಗೆದ್ದ ವೀರನಿಗೆ ಗದ್ದೆಯ ಸ್ವಲ್ಪ ಭಾಗವನ್ನು ರಾಜನು ದಾನವಾಗಿ ನೀಡಿರಬಹುದು. ಈ ಶಾಸನದಲ್ಲಿ ಲಿಪಿ ಇಲ್ಲದ ಕಾರಣ ಈ ವ್ಯಕ್ತಿಯ ಹೆಸರು ತಿಳಿದು ಬಂದಿಲ್ಲ. ಈ ವೀರನ ವಂಶಸ್ಥರು ಚಕ್ರಬಾವಿಯಲ್ಲಿ ಖಂಡಿತವಾಗಿಯೂ ಇದ್ದಾರೆ. ಇದು ಸುಮಾರು 17–18ನೇ ಶತಮಾನದ ಕಾಲದ್ದಾಗಿರಬಹುದು.

ಭಾರತದಲ್ಲಿ 1928ನೇ ಇಸವಿಯವರೆಗೂ ಸತಿ ಸಹಗಮನ ಪದ್ಧತಿ ಆಚರಣೆಯಲ್ಲಿತ್ತು. ಸತಿ ಸಹಗಮನವೆಂದರೆ ಗಂಡ ಯುದ್ಧದಲ್ಲೋ ಮತ್ತಾವುದೋ ಕಾರಣದಿಂದ ಸತ್ತರೆ ಹೆಂಡತಿಯೂ ಗಂಡನ ಶವದೊಂದಿಗೆ ಸಹಗಮನ ಮಾಡಿಕೊಳ್ಳುತ್ತಿದ್ದಳು, ಅಂದರೆ ಸಾಯುತ್ತಿದ್ದಳು. ಯುದ್ಧದಲ್ಲಿ ಹೋರಾಡಿ ಗಂಡ ಸತ್ತರೆ ಹೆಂಡತಿ ಅವನ ಜೊತೆ ಸಹಗಮನ ಮಾಡಿಕೊಳ್ಳುತ್ತಿದ್ದಳು. ಇಂತಹ ಹೆಣ್ಣನ್ನು ಭಾರತದಲ್ಲಿ ಮಹಾಸತಿ ಎನ್ನುತ್ತಿದ್ದರು. ಇದರ ತದ್ಭವರೂಪವೇ ಮಾಸ್ತಿಗಲ್ಲು. ಇವಳು ಮಹಾಸತಿಯಾಗಿದ್ದರಿಂದ ಇವಳು ಸಮಾಜಕ್ಕೆ ಆದರ್ಶಪ್ರಾಯಳು, ದೇವತೆಗೆ ಸಮನಾಗಿರುತ್ತಿದ್ದಳು. ಇವಳ ಹೆಸರಿನಲ್ಲಿ ನಿರ್ಮಿಸುತ್ತಿದ್ದ ಶಾಸನಗಳನ್ನು ಮಾಸ್ತಿಗಲ್ಲುಗಳೆಂದು ಕರೆಯುತ್ತಿದ್ದರು. ಶಾಸನಗಳಲ್ಲಿ ವೀರನೊಬ್ಬನೆ ಖಡ್ಗ ಹಿಡಿದಿದ್ದರೆ ವೀರಗಲ್ಲು ಎಂದು, ವೀರ ಮತ್ತು ಅವನ ಹೆಂಡತಿ ಜೊತೆಯಲ್ಲಿದ್ದರೆ ವೀರಮಾಸ್ತಿಗಲ್ಲು ಎಂದು ಕರೆಯುತ್ತೇವೆ. ವೀರ ಮಾಸ್ತಿಗಲ್ಲುಗಳಲ್ಲಿ ಹೆಣ್ಣೇ ಕೇಂದ್ರ ಪಾತ್ರ, ಅವಳಿಗೋಸ್ಕರವೇ ನಿರ್ಮಿಸಿದೆಂದು ಹೇಳಬಹುದು.

ಚಕ್ರಬಾವಿಯಲ್ಲಿ ಗಂಡು ಹೆಣ್ಣಿನ ಚಿತ್ರವಿರುವ ಪ್ರಾಚೀನ ಕಾಲದ 30-40 ಶಾಸನಗಳಿವೆ. ಆದ್ದರಿಂದ ಇವುಗಳನ್ನು ವೀರಮಾಸ್ತಿಗಲ್ಲುಗಳೆಂದು ಕರೆಯಬಹುದು. ಚಕ್ರಬಾವಿ ಕೆರೆ ಬಳಿ ಇರುವ ಅರಳಿಮರದ ಕೆಳಗೆ, ಚಿಕ್ಕಯ್ಯನ ಗುಡಿ ಮುಂಭಾಗದಲ್ಲಿ ಹಲವಾರು ಶಾಸನಗಳನ್ನು ಗಮನಿಸಿದಾಗ ಕೆಲವು ಮಹತ್ವದ ವಿಷಯಗಳು ಹೊರಬಂದಿವೆ. ಕೆಲವು ಶಿಲ್ಪಗಳಲ್ಲಿ ಒಂದು ಗಂಡಿನ ಜೊತೆ ಒಂದು ಹೆಣ್ಣಿದ್ದರೆ, ಮತ್ತೊಂದರಲ್ಲಿ ಒಂದು ಗಂಡಿನ ಜೊತೆ ಎರಡು-ಮೂರು ಹೆಣ್ಣಿನ ಚಿತ್ರಗಳಿವೆ. ಇನ್ನೊಂದು ಶಿಲ್ಪದಲ್ಲಿ ಒಂದು ಗಂಡನ ಜೊತೆ ನಾಲ್ಕು ಹೆಣ್ಣಿನ ಶಿಲ್ಪಗಳು ಅಂದರೆ ಆ ವ್ಯಕ್ತಿಗೆ ಅಷ್ಟು ಜನ ಹೆಂಡತಿಯರಿದ್ದು, ಅವನು ಸತ್ತಾಗ ಅವರೆಲ್ಲರೂ ಅವನೊಂದಿಗೆ ಸಹಗಮನ ಮಾಡಿದ್ದಾರೆನ್ನಬಹುದು.

ವೈಷ್ಣವ ಸಂಪ್ರದಾಯದ ವೀರಮಾಸ್ತಿಗಲ್ಲು

ಇದು ಸುಮಾರು 300 ವರ್ಷಗಳ ಇತಿಹಾಸವನ್ನು ಹೇಳುವ ವೀರಮಾಸ್ತಿ ಕಲ್ಲಾಗಿದೆ. ಇದನ್ನು ಶಾಸನದ ಪರಿಭಾಷೆಯಲ್ಲಿ 'ವೀರಮಾಸ್ತಿಗಲ್ಲು' ಎಂದು ಕರೆಯುತ್ತೇವೆ.

ಪ್ರಾಚೀನ ಕಾಲದಲ್ಲಿ ಭಾರತದಲ್ಲಿ ಸತಿಸಹಗಮನ ಪದ್ಧತಿ ಆಚರಣೆ ಯಲ್ಲಿತ್ತು. ಗಂಡ ಮಡಿದರೆ ಹೆಂಡತಿ ಯೂ ಗಂಡನ ಶವದೊಂದಿಗೆ ಸಾಯುತ್ತಿದ್ದಳು. ಸಹಗಮನ ಮಾಡಿ ಕೊಂಡ ಹೆಣ್ಣನ್ನು ಮಹಾಸತಿ ಎಂದು ಕರೆಯುತ್ತಿದ್ದರು. ಅವಳಿಗೆ ಸಮಾಜದಲ್ಲಿ ಪೂಜನೀಯ ಸ್ಥಾನವಿತ್ತು. ಗಂಡನ ಜೊತೆ ಸಹಗಮನ ಮಾಡಿಕೊಂಡ ಹೆಂಡತಿಯ ನೆನಪಿನಲ್ಲಿ ನಿರ್ಮಿಸುತ್ತಿದ್ದ ಸ್ಮಾರಕವನ್ನು ಮಾಸ್ತಿಗಲ್ಲು (ಮಹಾ ಸತಿಕಲ್ಲು) ಎಂದು ಕರೆಯುತ್ತಿದ್ದರು.

ಈ ಶಿಲ್ಪದಲ್ಲಿರುವ ವ್ಯಕ್ತಿಯು ಯುದ್ಧದಲ್ಲಿ ಸತ್ತಿದ್ದಾರೆ ಆತನಿಗೆ ನಾಲ್ಕು ಜನ ಪತ್ನಿಯರಿದ್ದು, ಆತ ಸತ್ತಾಗ ಆ ನಾಲ್ಕು ಜನ ಹೆಂಡತಿಯರು ಗಂಡನ ಶವದೊಂದಿಗೆ ಚಿತೆಗೆ ಹಾರಿರುವುದನ್ನು ಕಾಣಬಹುದು. ಈ ಶಾಸನದ ಕೆಳಭಾಗದಲ್ಲಿ ಗೆರೆಗಳಿದ್ದು, ಆ ಗೆರೆಗಳು ಬೆಂಕಿಯ ಜ್ವಾಲೆಯನ್ನು ಬಿಂಬಿಸುತ್ತವೆ. ಶಿಲ್ಪದ ಮಧ್ಯಭಾಗದಲ್ಲಿ ಒಬ್ಬ ಗಂಡನ ಎಡ-ಬಲದಲ್ಲಿ ಒಟ್ಟು ನಾಲ್ಕು ಜನ ಪತ್ನಿಯ ಶಿಲ್ಪವನ್ನು ಕೆತ್ತಲಾಗಿದೆ ಶಾಸನದ ಮೇಲೆ ಸೂರ್ಯ-ಚಂದ್ರರ ಶಿಲ್ಪಗಳಿದ್ದು, ಇವರ ಕೀರ್ತಿ ಸೂರ್ಯ-ಚಂದ್ರರು ಭೂಮಿಯ ಮೇಲಿರುವವರೆಗೂ ಬೆಳಗಲಿ, ಶಾಶ್ವತವಾಗಿರಲಿ ಎಂಬುದನ್ನು ಸೂಚಿಸುತ್ತದೆ. ಶಾಸನದ ಮೇಲ್ಭಾಗದಲ್ಲಿ ಸ್ವರ್ಗಲೋಕದ ಕಲ್ಪನೆ ಇದೆ. ಅಂದರೆ ಈ ರೀತಿ ಸತ್ತ ವ್ಯಕ್ತಿಗಳು ಸ್ವರ್ಗದಲ್ಲಿ ಸುಖವಾಗಿರುತ್ತಾರೆಂಬ ಕಲ್ಪನೆ ಇತ್ತು. ಈ ಶಿಲ್ಪದ ಮೇಲ್ಭಾಗದಲ್ಲಿ ವೈಕುಂಠ, ಶಂಖ, ಚಕ್ರಗಳಿರುವುದರಿಂದ ಈ ವೀರ ಮಾಸ್ತಿಗಲ್ಲು ವೈಷ್ಣವ ಪರಂಪರೆಯದಾಗಿದ್ದು, ವೈಷ್ಣವ ಸಂಪ್ರದಾಯದಲ್ಲಿ ಶವವನ್ನು ಸುಡುತ್ತಿದ್ದರು. ಈ ಚಿತ್ರದಲ್ಲಿರುವ

ವ್ಯಕ್ತಿಗಳು ವೈಷ್ಣವ ಧರ್ಮಕ್ಕೆ ಸೇರಿದವರಾಗಿದ್ದಾರೆ. ಆದ್ದರಿಂದ ಇದನ್ನು ವೈಷ್ಣವ ಪರಂಪರೆಯ ವೀರ ಮಾಸ್ತಿಗಲ್ಲು ಎಂದು ಕರೆಯಬಹುದು.

ಕರ್ನಾಟಕದ ಎಲ್ಲಾ ಊರುಗಳಲ್ಲಿ ಒಂದೋ, ಎರಡೋ ಅಥವಾ ಇನ್ನೂ ಸ್ವಲ್ಪ ಹೆಚ್ಚಿನ ವೀರಗಲ್ಲು, ಮಾಸ್ತಿಗಲ್ಲು ಮುಂತಾದವು ದೊರೆಯುವುದು ಸಾಮಾನ್ಯವಾಗಿದೆ. ಈ ಗ್ರಾಮದಲ್ಲಿ ಒಂದೇ ಕಡೆ ಸುಮಾರು 40 ಬರೀ ವೀರ ಮಾಸ್ತಿಕಲ್ಲುಗಳು ದೊರೆಯುತ್ತಿರುವುದು ಆಶ್ಚರ್ಯವಾಗಿದೆ. ಇದಕ್ಕೆ ಕಾರಣ ಇಲ್ಲಿದೆ. ಕ್ರಿ.ಶ.1710ರ ಮಾಗಡಿ ತಾಮ್ರಶಾಸನದ ಪ್ರಕಾರ ಮುಮ್ಮಡಿ ಕೆಂಪವೀರಪ್ಪ ಗೌಡನ ಕಾಲದಲ್ಲಿ ಚಕ್ರಬಾವಿಯನ್ನು ಹೋಬಳಿ ಕೇಂದ್ರವನ್ನಾಗಿ ಮಾಡಿಕೊಂಡಿದ್ದನು. ಹೋಬಳಿ ಎಂದ ಮೇಲೆ ಇದೊಂದು ದೊಡ್ಡ ಊರಾಗಿದ್ದು, ಹೆಚ್ಚಿನ ಜನರು ಇಲ್ಲಿ ವಾಸಿಸುತ್ತಿದ್ದರು. ಅದೇ ರೀತಿ ಶತೃಗಳ ದಾಳಿಯೂ ಈ ಊರಿನ ಮೇಲೆ ನಡೆಯುತ್ತಿತ್ತು. ಕ್ರಿ.ಶ.1710ರ ನಂತರ ಈ ಊರಿನಲ್ಲಿ ದೊಡ್ಡ ಯುದ್ಧವಾಗಿದೆ. ಅನೇಕ ಸೈನಿಕರು ವೀರ ಮರಣವನ್ನಪ್ಪಿದ್ದಾರೆ. ಆ ವೀರರ ಜೊತೆ ಅವರ ಪತ್ನಿಯರೂ ಸಹಗಮನ ಮಾಡಿಕೊಂಡಿದ್ದಾರೆ. ಆದ್ದರಿಂದ ಇಲ್ಲಿ ಇಷ್ಟೊಂದು ಸಂಖ್ಯೆ ವೀರಮಾಸ್ತಿಗಲ್ಲುಗಳು ದೊರೆತಿವೆ.

ಶೈವ ಸಂಪ್ರದಾಯದ ವೀರಮಾಸ್ತಿಗಲ್ಲು

ಚಕ್ರಬಾವಿಯ ಇನ್ನೊಂದು ಶಿಲ್ಪದಲ್ಲಿ ಮೂರು ಹಂತಗಳಿವೆ. ಇದನ್ನೂ ಸಹ ವೀರಮಾಸ್ತಿಗಲ್ಲುಗಳೆಂದು ಕರೆಯುತ್ತೇವೆ. ಮೊದಲನೆಯ ಹಂತದಲ್ಲಿ ಗಂಡ-ಹೆಂಡತಿಯ ಶಿಲ್ಪಗಳಿವೆ. ಗಂಡನಿ ಗೋಸ್ಕರ ಹೆಂಡತಿ ಸತ್ತಿದ್ದಾಳೆಂಬುದು ಸ್ಪಷ್ಟವಾಗಿದೆ. ಎರಡನೆ ಹಂತದಲ್ಲಿ ಹೆಂಡತಿ ಕೈ ಮುಗಿದು ಚಿತೆಯ ಮೇಲೆ ಕುಳಿತಿದ್ದಾಳೆ. ಮೂರನೆ ಹಂತದಲ್ಲಿ ಆ ಹೆಣ್ಣಿನ ಚಿತ್ರ, ಶಿವಲಿಂಗ, ನಂದಿ, ಸೂರ್ಯ-ಚಂದ್ರರ ಶಿಲ್ಪಗಳಿವೆ. ಅಂದರೆ ಸಹಗಮನ ಮಾಡಿಕೊಂಡ ಹೆಂಡತಿ ಶಿವನ ಸಾನಿಧ್ಯ ಕೈಲಾಸದಲ್ಲಿ ಸುಖವಾಗಿದ್ದಾಳೆಂಬ ಕಲ್ಪನೆ ಇದೆ. ಇದೊಂದು ವೀರಶೈವರ ಶಾಸನವಾಗಿದ್ದು, ಇಲ್ಲಿ ಸಹಗಮನ ಮಾಡಿಕೊಂಡ ಹೆಣ್ಣು ಮಗಳು ವೀರಶೈವ (ಲಿಂಗಾಯಿತ) ಜನಾಂಗಕ್ಕೆ ಸೇರಿದವಳೆಂದು ತಿಳಿಯಬಹುದು. ಇದಕ್ಕೆ ಕುರುಹಾಗಿ ಚಕ್ರಬಾವಿಯಲ್ಲಿ ಹಲವಾರು ವೀರಶೈವ (ಲಿಂಗಾಯಿತ) ಕುಟುಂಬಗಳಿವೆ. ಈ ಹೆಣ್ಣಿನ ಕೀರ್ತಿಯು ಸೂರ್ಯ-ಚಂದ್ರರಿರುವವರೆಗೆ ಶಾಶ್ವತವಾಗಿರಲೆಂಬುದನ್ನು ತೋರಿಸಲು ಸೂರ್ಯ-ಚಂದ್ರರ ಶಿಲ್ಪಗಳನ್ನು ಕೆತ್ತಿದ್ದಾರೆ.

ಚಿಕ್ಕಯ್ಯನ ಗುಡಿ ಬಳಿಯ ಶಿಲ್ಪಗಳು

ಈ ಗುಡಿಯ ಮುಂಭಾಗ ಸುಮಾರು 40 ವೀರಮಾಸ್ತಿಗಲ್ಲುಗಳಿವೆ. ಇಲ್ಲಿಯೂ ಗಂಡಿನ ಜೊತೆ ಒಬ್ಬರು, ಇಬ್ಬರು, ಮೂರು ಜನ ಹೆಂಡತಿಯರಿರುವ ಶಿಲ್ಪಗಳಿವೆ. ಇವರೆಲ್ಲರೂ ಗಂಡ ಜೊತೆ ಸಹಗಮನ ಮಾಡಿಕೊಂಡಿದಕ್ಕೆ ಇದು ನಿದರ್ಶನ.

ಹುಲಿಕಟ್ಟೆಯಲ್ಲಿರುವ ವೀರಗಲ್ಲು

ಹುಲಿಕಟ್ಟೆ (ಚಕ್ರಬಾವಿ)ಯಲ್ಲಿ ಎರಡು ವಿಶೇಷವಾದ ವೀರಗಲ್ಲು ಶಾಸನಗಳು ಪತ್ತೆಯಾಗಿವೆ. ಶಾಸನ ಶಾಸ್ತ್ರದ ಪರಿಭಾಷೆಯಲ್ಲಿ ಇವುಗಳನ್ನು 'ತುರುಗೊಳ್ ವೀರಗಲ್ಲು ಶಾಸನ' ಗಳೆಂದು (ತುರು ಅಂದರೆ ಹಸುಗಳು) ಕರೆಯುತ್ತೇವೆ. ಇವೆರಡು ಶಾಸನಗಳಲ್ಲಿ ಅಕ್ಷರಗಳು ಅಸ್ಪಷ್ಟವಾಗಿದೆ. ಲಿಪಿದೃಷ್ಟಿಯಿಂದ ಈ ಶಾಸನಗಳು ಹೊಯ್ಸಳರ ಕಾಲದ್ದಾಗಿದ್ದು ಸುಮಾರು 12–13ನೇ ಶತಮಾನದ ಕಾಲದ್ದಾಗಿದೆ.

ಈ ಎರಡೂ ಶಾಸನ ಶಿಲ್ಪದಲ್ಲಿರುವ ವ್ಯಕ್ತಿ ಒಬ್ಬನೇ ಆಗಿದ್ದು, ಈ ವೀರನು ಹಸು ಕಳ್ಳರೊಡನೆ ಹೋರಾಡಿ ಆ ಯುದ್ಧಲ್ಲಿ ವೀರ ಮರಣವನ್ನಪ್ಪಿದ್ದಾನೆ. ಪ್ರಾಚೀನ ಕಾಲದಲ್ಲಿ ಹಸುಗಳು ಐಶ್ವರ್ಯದ ಸಂಕೇತವಾಗಿದ್ದವು. ಹಸುಗಳನ್ನು ಸಿರಿ–ಸಂಪತ್ತು ಎಂದು ಕರೆಯುತ್ತಿದ್ದರು. ಈ ಕಾಲದಲ್ಲಿ ಯಾರು ಹೆಚ್ಚು ಹಣ ಹೊಂದಿದ್ದರೆ ಶ್ರೀಮಂತರೆಂದು ಕರೆಯುತ್ತಾರೋ, ಆ ಕಾಲದಲ್ಲಿ ಹಸುಗಳನ್ನು ಹೆಚ್ಚು ಸಾಕುತ್ತಿದ್ದರೋ ಅವರನ್ನು ಶ್ರೀಮಂತರೆಂದು ಕರೆಯುತ್ತಿದ್ದರು. ಇಂತಹ ಐಶ್ವರ್ಯದ ಸಂಕೇತವಾದ ಹಸು ಸಂಪತ್ತನ್ನು ಕದಿಯಲು ಗುಂಪುಗುಂಪಾಗಿ ಬರುತ್ತಿದ್ದರು. ಆಗ ಊರಿನ ವೀರನೊಬ್ಬನು ಹಸುಗಳನ್ನು ಕದಿಯಲು ಬಂದ ಶತೃಗಳ ಜೊತೆ ತನ್ನ ಪ್ರಾಣವನ್ನು ಲೆಕ್ಕಿಸದೆ ಹೋರಾಡಿ ಯುದ್ಧದಲ್ಲಿ ಮರಣವನ್ನಪ್ಪುತ್ತಿದ್ದರು. ಶತೃಗಳು ಹಸುಗಳನ್ನು ಕೊಂಡೊಯ್ಯಲು ಸಾಧ್ಯವಾಗುತ್ತಿರಲಿಲ್ಲ. ಆ ಊರಿನ ವೀರನು 'ಸತ್ತರೆ ಸ್ವರ್ಗ, ಗೆದ್ದರೆ ಸಂಪತ್ತು' ಎಂಬ ದೃಢ ನಿರ್ಧಾರದಿಂದ ಯುದ್ಧ ಭೂಮಿಯಲ್ಲಿ ಹೋರಾಡುತ್ತಿದ್ದನು. ಈ ರೀತಿ ಹಸುವಿಗೋಸ್ಕರ ಯುದ್ಧದಲ್ಲಿ ಹೋರಾಡಿ ಸತ್ತವನ ಹೆಸರಿನಲ್ಲಿ ಸ್ಮಾರಕವನ್ನು ನಿರ್ಮಿಸುತ್ತಿದ್ದುದನ್ನು 'ತುರುಗೋಳ್ ಶಾಸನ' ವೆಂದು ಕರೆಯುತ್ತಿದ್ದರು.

ಹುಲಿಕಟ್ಟೆಯಲ್ಲಿ ದೊರೆಯುತ್ತಿರುವ ಈ ಎರಡು ತುರುಗೊಳ್ ಶಾಸನಗಳಲ್ಲಿ ವೀರನೊಬ್ಬ ಹಸುಗಳನ್ನು ಕದಿಯಲು ಬಂದ ಶತೃಗಳೊಡನೆ ಹೋರಾಡಿ ವೀರ ಮರಣವನ್ನಪ್ಪಿದ್ದಾನೆ. ಈ ಶಾಸನಗಳಲ್ಲಿ ಲಿಪಿಕಾರನು ಯುದ್ಧದಲ್ಲಿ ಹೋರಾಡುತ್ತಿರುವ ವೀರನ

ಶೌರ್ಯ ಸಾಹಸವನ್ನು ಕಣ್ಣಿಗೆ ಕಟ್ಟುವ ಹಾಗೆ ಚಿತ್ರಿಸಲಾಗಿದೆ. ಆದರೆ ಈ ವೀರನ ಹೆಸರು ಅಸ್ಪಷ್ಟವಾಗಿದೆ. ಈ ಶಾಸನ ಶಿಲ್ಪಗಳಲ್ಲಿ ಎರಡು ಹಂತದ ಚಿತ್ರಗಳನ್ನು ಚಿತ್ರಿಸಿದ್ದಾರೆ. ಮೊದಲನೆಯ ಹಂತದಲ್ಲಿ ವೀರನು ಬಿಲ್ಲುಬಾಣಗಳನ್ನು ಹಿಡಿದು ಯುದ್ಧಭೂಮಿಯಲ್ಲಿ ಹೋರಾಡುತ್ತಿರುವ ಚಿತ್ರಣವಿದೆ. ಪಕ್ಕದಲ್ಲಿ ಹಸುಗಳ ಚಿತ್ರಗಳಿವೆ. ಇದು ಹಸುವಿಗೋಸ್ಕರ ಹೋರಾಡುತ್ತಿರುವುದು ಸ್ಪಷ್ಟವಾಗಿದೆ.

ಎರಡನೇ ಹಂತದ ಚಿತ್ರಗಳಲ್ಲಿ ಯುದ್ಧದಲ್ಲಿ ವೀರ ಮರಣವನ್ನಪ್ಪಿದ ವೀರರನ್ನು ದೇವತಾಸ್ತ್ರೀಯರು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವ ಚಿತ್ರಣವಿದೆ. ಪ್ರಾಚೀನ ಕಾಲದ ಯುದ್ಧ ಭೂಮಿಯಲ್ಲಿ ವೀರ ಮರಣವನ್ನಪ್ಪಿದರೆ ಸ್ವರ್ಗ ಸಿಗುತ್ತದೆ ಎಂಬ ಕಲ್ಪನೆ ಇತ್ತು ಹಾಗೂ ವೀರನನ್ನು ಕರೆದುಕೊಂಡು ಹೋಗಲು ಸ್ವರ್ಗದಿಂದ ದೇವತಾಸ್ತ್ರೀಯರು ಬರುತ್ತಿದ್ದರು. ಸತ್ತ ವೀರನಿಗೆ ದೇವಲೋಕದಲ್ಲಿ ಸ್ವರ್ಗವನ್ನು ಅನುಭವಿಸುತ್ತಾರೆಂಬ ನಂಬಿಕೆ ಇತ್ತು. ಒಟ್ಟಾರೆ ಹುಲಿಕಟ್ಟೆಯಲ್ಲಿ ದೊರೆಯುತ್ತಿರುವ ತುರುಗೊಳ್ ಶಾಸನಗಳು ಅಪರೂಪದ ಶಾಸನಗಳಾಗಿದ್ದು ಬಹುಶಃ ಹುಲಿಕಟ್ಟೆಯಲ್ಲೋ, ಚಕ್ರಬಾವಿಯಲ್ಲೋ ಹಸುಗಳನ್ನು ಕದಿಯಲು ಬಂದ ಶತೃಗಳನ್ನು ಈ ಊರಿನ ವೀರನು ಅವರೊಂದಿಗೂ ಹೋರಾಡಿ, ಹಸುಗಳನ್ನು ಬಿಡಿಸಿ ಯುದ್ಧದಲ್ಲಿ ಜಯಗಳಿಸಿ ವೀರ ಮರಣವನ್ನು ಅಪ್ಪಿದ್ದಾನೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಈ ಶಾಸನಗಳು ಈ ಊರುಗಳಿಗೆ, ಜನರಿಗೆ ಹೆಮ್ಮ ತರುವ ಶಾಸನವಾಗಿದೆ.

ಅಳಲುಕುಪ್ಪೆಯ ವೀರಗಲ್ಲು

ಅಳಲುಕುಪ್ಪೆ ಈಶ್ವರ ದೇವಸ್ಥಾನದ ಮುಂಭಾಗದಲ್ಲಿ ಒಂದು ವೀರಗಲ್ಲು ಶಿಲ್ಪದಲ್ಲಿ ಇಬ್ಬರು ವೀರರು ಯುದ್ಧ ಭೂಮಿಯಲ್ಲಿ ಹೋರಾಡುತ್ತಿರುವ ಚಿತ್ರವಿದೆ. ಒಬ್ಬ ವೀರನ ಕೈಲಿ ಬಿಲ್ಲುಬಾಣಗಳಿವೆ. ಇನ್ನೊಬ್ಬ ವೀರನ ಕೈಯಲ್ಲಿ ಈಟಿ ಮತ್ತು ಕುಡುಗೋಲುಗಳಿವೆ. ಈ ಆಯುಧಗಳನ್ನು ಹಿಡಿದು ಇಬ್ಬರೂ ಹೋರಾಡುತ್ತಿದ್ದಾರೆ. ಶಾಸನ ಮೇಲ್ಭಾಗದಲ್ಲಿ ಬರಹವಿದೆ. ಈ ಬರಹವು ಇವರಿಬ್ಬರ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ ಇದನ್ನು ವೀರಗಲ್ಲು ಶಾಸನವೆನ್ನಬಹುದು.

ಇನ್ನೊಂದು ಪಕ್ಕದಲ್ಲಿರುವ ಶಿಲ್ಪವು ವೀರಮಾಸ್ತಿಗಲ್ಲಾಗಿದೆ. ಶಾಸನದಲ್ಲಿ ಮೂರು ಹಂತಗಳ ಶಿಲ್ಪಗಳಿದ್ದು ಮೊದಲನೆಯ ಹಂತದಲ್ಲಿ ವೀರ ಕತ್ತಿ, ಗುರಾಣಿ ಹಿಡಿದು ನಿಂತಿರುವ ಶಿಲ್ಪವಿದ್ದು, ಪಕ್ಕದಲ್ಲಿ ಅವನ ಹೆಂಡತಿ ನಿಂತಿದ್ದಾಳೆ. ಅಂದರೆ ಈ ವೀರ ಯುದ್ಧದಲ್ಲಿ ಸತ್ತಿದ್ದಾನೆ. ಅವನ ಹೆಂಡತಿ ಸಹಗಮನಕ್ಕೆ ಸಿದ್ಧಳಾಗಿ ನಿಂತಿದ್ದಾಳೆ. ಎರಡನೇ ಹಂತದಲ್ಲಿ ಮೂರು ಜನ ಮಹಿಳೆಯರು ಬೆಂಕಿ ಹೊಂಡದ ಮೇಲೆ ಕುಳಿತಿದ್ದಾರೆ. ಅಂದರೆ ಈ ಮೂರು ಜನ

ಮಹಿಳೆಯರು ಕೆಳಗಿರುವ ವೀರ ಹೆಂಡತಿಯರು. ಮೂರನೇ ಹಂತದಲ್ಲಿ ಈ ಮಹಿಳೆಯರು ಸ್ವರ್ಗದಲ್ಲಿದ್ದಾರೆ. ಸ್ವರ್ಗದ ಕಲ್ಪನೆಯಾದ ನಂದಿ ಶಿವಲಿಂಗದ ಚಿತ್ರವಿದೆ.

ಒಟ್ಟಾರೆ ಇದೊಂದು ವೀರಶೈವ ಸಂಪ್ರದಾಯದ ವೀರಮಾಸ್ತಿಗಲ್ಲಾಗಿದ್ದು ಒಬ್ಬ ವೀರ ಯುದ್ಧದಲ್ಲಿ ಸತ್ತಾಗ ಅವನ ಮೂರು ಜನ ಹೆಂಡತಿಯರು ಒಟ್ಟಿಗೆ ಸಹಗಮನ ಮಾಡಿಕೊಂಡು ಸ್ವರ್ಗ ವಿಲಾಸಿಗಳಾಗಿರುವ ಚಿತ್ರಣವಾಗಿದೆ. ಮೇಲೆ ಸೂರ್ಯ-ಚಂದ್ರರ ಶಿಲ್ಪವಿದೆ. ಈ ಶಾಸನವು ಮತ್ತು ಇವರ ಕೀರ್ತಿ ಸೂರ್ಯ-ಚಂದ್ರರು ಇರುವವರೆಗೆ ಶಾಶ್ವತವಾಗಿರಲಿ ಎಂಬುದರ ಸಂಕೇತವಾಗಿದೆ.

ಲಕ್ಷ್ಮೀದೇವಿ ಗುಡಿ ವೀರಮಾಸ್ತಿಗಲ್ಲು

ಚಕ್ರಬಾವಿಯ ಲಕ್ಷ್ಮೀದೇವಾಲಯದ ಮುಂದೆ ಒಂದು ಮಾಸ್ತಿಗಲ್ಲಿದೆ. ಇದೂ ಕೂಡ ಸಹಗಮನದ ಕಲ್ಲಾಗಿದೆ. ಒಬ್ಬ ಮಹಿಳೆ ಯುದ್ಧದಲ್ಲಿ ಗಂಡ ಸತ್ತಾಗ ಅವನ ಜೊತೆ ಸಹಗಮನ ಮಾಡಿಕೊಂಡಿದ್ದಾಳೆ. ಅವಳ ಹೆಸರಿನಲ್ಲಿ ಒಂದು ಶಾಸನ ನಿಲ್ಲಿಸಿ ದೇವಾಲಯವನ್ನು ನಿರ್ಮಿಸಿರಬಹುದು. ಬಹುಶಃ ಅವಳು ಲಕ್ಷ್ಮೀದೇವಿಯೇ ಆಗಿರಬಹುದು. ಪ್ರಾಚೀನ ಕಾಲದಲ್ಲಿ ಸಹಗಮನ ಮಾಡಿಕೊಂಡ ಮಹಿಳೆಯ ಹೆಸರಿನಲ್ಲಿ ದೇವಾಲಯ ನಿರ್ಮಿಸುತ್ತಿದ್ದ ಸಂಪ್ರದಾಯವಿತ್ತು. ಅವಳು ಮಹಾಸತಿ ಅಂದರೆ ದೇವರಿಗೆ ಸಮ ಎಂದು ಆಕೆಯ ವಿಗ್ರಹವನ್ನು ಪೂಜಿಸುತ್ತಿದ್ದರು. ಈಗಲೂ ಕೆಲವು ಹಳ್ಳಿಗಳಲ್ಲಿ ವೀರಮಾಸ್ತಮ್ಮನ ಗುಡಿ (ಈರ್ ಮಾಸ್ತಮನಗುಡಿ) ಎಂದು ಪೂಜಿಸುತ್ತಾರೆ. ಚಕ್ರಬಾವಿಯಲ್ಲಿರುವ ಲಕ್ಷ್ಮಿದೇವಿ ದೇವಾಲಯ ಸ್ಥಳೀಯರು ಒಂದು ಕತೆ ಹೆಣೆದಿದ್ದಾರೆ. ಈ ಊರಿನಲ್ಲಿ ಏಳು ಜನ ಅಣ್ಣ ತಮ್ಮಂದಿರಿದ್ದರು. ಹಿರಿಯ ಸೊಸೆ ಲಕ್ಷ್ಮೀದೇವಿ, ಏಳು ಅಣ್ಣತಮ್ಮಂದಿರು ಹೊಲ ಉಳಿಮೆ ಮಾಡಲು ಹೋದರು. ಅವರಿಗೆ ಊಟ ತೆಗೆದುಕೊಂಡು ಹೋಗುವ ಜವಾಬ್ದಾರಿ ಹಿರಿಯ ಸೊಸೆ ಲಕ್ಷ್ಮೀದೇವಿಯದ್ದಾಗಿತ್ತು. ಒಂದು ದಿನ ಊಟ ತೆಗೆದುಕೊಂಡು ಹೊಗುವುದು ತಡವಾಗಿ ಬಂದಿದ್ದ ಅವಳ ಮೇಲೆ ಅನುಮಾನ ಪಟ್ಟರು. ಅಂದರೆ ಇವಳು ತಡವಾಗಿ ಬಂದಿರುವುದಕ್ಕೆ ಪರಪುರಷನ ಜೊತೆ ಇದ್ದು ಬಂದಿರಬಹುದೆಂದು ಅನುಮಾನಪಟ್ಟರು. ಆಕೆ 'ನಾನು ಪತಿವ್ರತೆಯೇ ಆಗಿದ್ದರೆ ನೆಲ ಸೀಳಿಹೋಗಲಿ' ಎಂದಾಗ ಭೂಮಿ ಎರಡು ಹೋಳಾಯಿತಂತೆ. ಆಗ ಲಕ್ಷ್ಮೀದೇವಿ ಸೀಳಿ ಇಬ್ಬಾಗವಾದ ಮಧ್ಯೆ ಬಿದ್ದ ತಕ್ಷಣ ಭೂಮಿ ಮುಚ್ಚಿಕೊಂಡಿತು. ಅಣ್ಣ-ತಮ್ಮಂದಿರು ಎಲ್ಲಿ ಹೋದಳು ಎಂದು ಹುಡುಕುತ್ತಿದ್ದಾಗ, ಭೂಮಿಯ ಒಳಗಿದ್ದ ಲಕ್ಷ್ಮಿದೇವಿ 'ನಾನು ಭೂಮಿ ಒಳಗಡೆ ಇದ್ದೇನೆ, ಮೇಲೆ ಬರುವುದಿಲ್ಲ. ನೀವು ಎಲ್ಲರೂ ಸೇರಿ ನನಗೆ ಈ ಸ್ಥಳದಲ್ಲಿ ಒಂದು ದೇವಸ್ಥಾನ ಕಟ್ಟಿಸಿ' ಎಂದಳಂತೆ. ಆ ದೇವಸ್ಥಾನವೇ ಈಗ ಲಕ್ಷ್ಮೀದೇವಿ

ದೇವಾಲಯವಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ. ಆದುದರಿಂದ ಈ ಗುಡಿಯು ಲಕ್ಷ್ಮಿದೇವಿಯ ವೀರಮಾಸ್ತಿಗುಡಿಯಾಗಿದೆ.

ಹೀಗೆ ಪ್ರಾಚೀನ ಕಾಲದಲ್ಲಿ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಎಲ್ಲಾ ಸಂಸ್ಕೃತಿಗಳು ಚಕ್ರಬಾವಿಯಲ್ಲಿದ್ದವೆಂದು ಹೇಳಬಹುದು. ಚಕ್ರಬಾವಿ ಗ್ರಾಮದಲ್ಲಿ ಪ್ರಾಚೀನ ಕಾಲದಿಂದಲೂ ಹಲವು ಸಂಸ್ಕೃತಿಗಳಿದ್ದು ಮುಮ್ಮಡಿ ಕೆಂಪ ವೀರಪ್ಪಗೌಡನಿಗೆ ಅಚ್ಚುಮೆಚ್ಚಿನ ಗ್ರಾಮ ಇದು. ಆದ್ದರಿಂದಲೇ ಇದನ್ನು ಹೋಬಳಿ ಕೇಂದ್ರವನ್ನಾಗಿ ಮಾಡಿಕೊಂಡಿದ್ದ.

ಕೋಟೆ

ಮಾಗಡಿ ಸೀಮೆಯಲ್ಲಿ ಕೆಂಪೇಗೌಡ ಆಳ್ವಿಕೆಯ ಸಂದರ್ಭದಲ್ಲಿ ಹಲವಾರು ಕೋಟೆಗಳಿದ್ದವೆಂದು ತಿಳಿದುಬರುತ್ತದೆ. ಕೋಟೆಗಳಿದ್ದ ಊರುಗಳೆಂದರೆ ಮಾಗಡಿ, ಸಾವನದುರ್ಗ, ಹುಲಿಯೂರು ದುರ್ಗ, ಹುತ್ರಿದುರ್ಗ, ಅಗಲಕೋಟೆ, ಏಳಗೆಗಳ್ಳಿ, ಚಕ್ರಬಾವಿ, ಮಾನಗಲ್ಲು ಮುಂತಾದ ಸ್ಥಳಗಳಲ್ಲಿ ಎಂಬ ಮಾಹಿತಿಯಿದೆ. ಕೆಲವು ಕಡೆ ಕೋಟೆಗಳು ಇನ್ನೂ ಅಸ್ತಿತ್ವದಲ್ಲಿವೆ. ಕೆಲವು ಕಡೆ ನಾಶವಾಗಿವೆ. ಚಕ್ರಬಾವಿಯಲ್ಲಿ ಇದ್ದವು. ಒಂದು ಕೋಟೆ ಇತ್ತು ಎಂಬುದು ಸ್ಪಷ್ಟವಾಗಿದೆ. ಏಕೆಂದರೆ ಕ್ರಿ.ಶ.1710ರಲ್ಲಿ ಆಳ್ವಿಕೆ ಮಾಡುತ್ತಿದ್ದ 3ನೇ ಕೆಂಪವೀರಪ್ಪಗೌಡನ ಕಾಲದಲ್ಲಿ ಚಕ್ರಬಾವಿ ಹೋಬಳಿಯಾಗಿತ್ತೆಂದು ಶಾಸನದಿಂದ ತಿಳಿದುಬರುತ್ತದೆ. ಹೋಬಳಿ ಕೇಂದ್ರವೆಂದ ಮೇಲೆ ಇಲ್ಲಿ ಹೆಚ್ಚಿನ ಜನರು ವಾಸಿಸುತ್ತಿದ್ದರು. ಅಂದರೆ ಜನಜಂಗುಳಿ ಪ್ರದೇಶವಾಗಿದ್ದು, ಶತೃಗಳು ಆಗಾಗ ಚಕ್ರಬಾವಿ ಮೇಲೆ ದಾಳಿ ಮಾಡುತ್ತಿದ್ದರು, ಯುದ್ಧಗಳು ನಡೆಯುತ್ತಿದ್ದವು. ಯುದ್ಧ ನಡೆದಿರುವುದಕ್ಕೆ ಒಂದೇ ಕಾಲ ಘಟ್ಟದ ಹಲವಾರು ವೀರಮಾಸ್ತಿಗಲ್ಲು ಮತ್ತು ವೀರಗಲ್ಲು ಚಕ್ರಬಾವಿಯಲ್ಲಿ ದೊರೆತಿವೆ. ಸೈನಿಕರು ಮತ್ತು ರಾಜನು ಉಳಿದುಕೊಳ್ಳುವುದಕ್ಕೆ ಕೋಟೆ ಇತ್ತೆಂದು ಹೇಳಬಹುದು.

ಮುಮ್ಮಡಿ ಕೆಂಪವೀರಪ್ಪಗೌಡನು ಚಕ್ರಬಾವಿಯನ್ನು ಹೋಬಳಿ ಕೇಂದ್ರ ಮಾಡಿಕೊಂಡು ಅಲ್ಲೇ ಕೋಟೆಯನ್ನು ಕಟ್ಟಿಸಿ, ಸೈನಿಕನು ತಂಗುವುದಕ್ಕೆ ಮತ್ತು ತಾನೂ ಇರುವುದಕ್ಕೆ ಎಲ್ಲ ವ್ಯವಸ್ಥೆ ಮಾಡಿದ್ದನೆಂದು ತಿಳಿದುಬರುತ್ತದೆ. ಆದರೆ ಚಕ್ರಬಾವಿಯಲ್ಲಿ ಕೋಟೆ ಎಲ್ಲಿತ್ತು? ಎಂಬುದರ ಮಾಹಿತಿ ದೊರೆತಿಲ್ಲ. ಬಹುಶಃ ಜಂಗಮ ಮಠಕ್ಕೆ ಹೊಂದಿಕೊಂಡಂತೆ ಕೋಡಿ ಬಸವಣ್ಣನ ಗುಡಿ ಮತ್ತು ಕೋಟೆ ಪಾಪಣ್ಣರ ಮನೆ ಮಧ್ಯೆ ಇದ್ದಿರಬಹುದು.

ಕೆರೆ, ಕಟ್ಟೆ, ಬಾವಿ, ಕಾಲುವೆ, ಕಲ್ಯಾಣಿ, ಶಾಲೆ

'ಕೆರೆಯಂ ಕಟ್ಟಿಸು ಭಾವಿಯಂ ಸವೆಸು ದೇವಾಗರಂ ಮಾಡಿಸು' ಎಂಬ ಲಕ್ಷ್ಮೀಧರನ ಪದ್ಯದಂತೆ ಪ್ರಾಚೀನ ಕಾಲದಲ್ಲಿ ಕೆರೆ, ಬಾವಿ, ದೇವಾಲಯ ಕಟ್ಟಿಸುವುದು ರಾಜರ ಕರ್ತವ್ಯ ಮತ್ತು ಆ ಕಾಲದ ಸಂಸ್ಕೃತಿ ಎಂದು ತಿಳಿಯುತ್ತಿದ್ದರು. ಮಾಗಡಿ ಸೀಮೆಯ ಪ್ರಾಚೀನ ಕೆರೆಗಳಲ್ಲಿ ಚಕ್ರಬಾವಿ ಕೆರೆಯೂ ಒಂದು. ಕೆಂಪಸಾಗರ ಕೆರೆಯನ್ನು ಮೂರನೇ ಕೆಂಪೇಗೌನು ನಿರ್ಮಿಸಿ ಅದಕ್ಕೆ 'ಮುಮ್ಮಡಿ ಕೆಂಪಸಾಗರ' ವೆಂದು ನಾಮಕರಣ ಮಾಡಿದನೆಂದು ಶಾಸನದಿಂದ ತಿಳಿದುಬರುತ್ತದೆ. ಕೆಂಪಸಾಗರ ಕೆರೆಯ ಮಾದರಿಯಲ್ಲಿ ಅವನ ಮೊಮ್ಮಗ ಮುಮ್ಮಡಿ ಕೆಂಪ ವೀರಪ್ಪಗೌಡನು ಚಕ್ರಬಾವಿಯಲ್ಲಿ ಒಂದು ಸುಂದರವಾದ ಕೆರೆಯನ್ನು ಕಟ್ಟಿಸಿದನು. ಚಕ್ರಬಾವಿಯನ್ನು ಹೋಬಳಿ ಕೇಂದ್ರ ಮಾಡಿಕೊಂಡ ಸಂದರ್ಭದಲ್ಲಿ ಸುಮಾರು 75 ಎಕರೆ ಜಾಗದಲ್ಲಿ ಕೆರೆಯನ್ನು ನಿರ್ಮಿಸಿದ್ದಾನೆ.

ಚಕ್ರಬಾವಿಯಲ್ಲಿ ಅನೇಕ ಪ್ರಾಚೀನ ಕಾಲದ ಬಾವಿಗಳಿವೆ. ಇವುಗಳನ್ನು ಸಿಹಿ ನೀರಬಾವಿ, ಉಪ್ಪುನೀರಿನ ಬಾವಿ ಎಂದು ಕರೆಯುತ್ತಿದ್ದರು. ಚಕ್ರಬಾವಿ ಈಗಲೂ ಕೆರೆಯಲ್ಲಿ ಸಿಹಿ ನೀರಿನ ಬಾವಿ, ಏರಿ ಪಕ್ಕದ ಬಾವಿ, ಗೋಪಾಲಸ್ವಾಮಿ ದೇವಾಲಯದ ಬಾವಿ, ಮಜ್ಜನಬಾವಿ, ಚೆನ್ನಪ್ಪನವರ ಬಾವಿ, ರಾಮಮಂದಿರದ ಬಾವಿ, ಶ್ರೀಕಂಠಯ್ಯನವರ ಬಾವಿ ಮುಂತಾದ ಬಾವಿಗಳು ಇವೆ. ಅಲ್ಲದೆ ಕೆಲವರು ಸ್ವಂತವಾಗಿ ಹಲವು ಬಾವಿ ಗಳನ್ನು ನಿರ್ಮಿಸಿಕೊಂಡಿದ್ದಾರೆ. ಬಹುಶಃ ಇಷ್ಟೊಂದು ಬಾವಿಗಳಿಂದಲೇ ಚಕ್ರಬಾವಿಗೆ 'ಚಕ್ರಬಾವಿ' ಎಂದು ಹೆಸರು ಬಂದಿರಬಹುದು.

ಚಕ್ರಬಾವಿಯಲ್ಲಿ ನೀರು ನಿಲ್ಲಲೂ ಅನೇಕ ಚಿಕ್ಕ ಚಿಕ್ಕ ಹೊಂಡಗಳನ್ನು ನಿರ್ಮಿಸಿಕೊಂಡಿದ್ದರೆಂದು ತಿಳಿದುಬರುತ್ತದೆ. ಸ್ಥಳೀಯರು ಇವುಗಳನ್ನು ಕಟ್ಟೆಗಳೆಂದು ಕರೆಯುತ್ತಾರೆ. ಚಿಕ್ಕಯ್ಯನಗುಡಿಕಟ್ಟೆ, ಕುಂಬಾರಗುಂಡಿ ಕಟ್ಟೆ, ಹೊನ್ನಯ್ಯನ ಕಟ್ಟೆ, ಮಗೆಕಟ್ಟೆ ಎಂಬ ಹೆಸರಿನ ಕಟ್ಟೆಗಳು ಈಗಲೂ ಇವೆ. ನೀರು ನಿಲ್ಲಲು ಕಾಲುವೆಗಳನ್ನು ನಿರ್ಮಿಸಿ ಕೊಂಡಿದ್ದರು. ಕೆಲವು ಕಾಲುವೆಗಳು ಈಗಲೂ ಇವೆ. ಅದೇರೀತಿ ಕೆಲವು ಪ್ರಾಚೀನ ಕಾಲದ ಕಲ್ಯಾಣಿಗಳನ್ನು ಚಕ್ರಬಾವಿಯಲ್ಲಿ ನೋಡಬಹುದು. ಈ ರೀತಿಯಾಗಿ ಚಕ್ರಬಾವಿಯಲ್ಲಿ ಕೆರೆ, ಕಟ್ಟೆ, ಬಾವಿ, ಕಾಲುವೆ, ಕಲ್ಯಾಣಿಗಳನ್ನು ಜನ, ಜಾನುವಾರು, ವ್ಯವಸಾಯಕ್ಕೆ ನಿರ್ಮಿಸಿಕೊಂಡಿದ್ದರು.

ಚಕ್ರಬಾವಿ ಶಾಲೆಯೂ ಇತಿಹಾಸವನ್ನು ಸೇರುವ ಸ್ಮಾರಕವಾಗಿದೆ. ಈ ಶಾಲೆಯು ಕ್ರಿ.ಶ.1915ರಲ್ಲಿ ಬ್ರಿಟೀಷರು ಸ್ಥಾಪಿಸಿದರು. ಅನೇಕ ವಿದ್ಯಾರ್ಥಿಗಳ ಪಾಲಿಗೆ ಯಾಗ ಶಾಲೆಯಾಗಿ,

ಅರ್ಥಪೂರ್ಣ ಜೀವನವನ್ನು ರೂಢಿಸಿ ಕೊಂಡಿದ್ದಾರೆ. ಈ ಶಾಲೆಯಲ್ಲಿ ಓದಿದ ಕೆಲವು ವಿದ್ಯಾರ್ಥಿಗಳು ಉನ್ನತ ವರ್ಗದ ಅಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದಾರೆ.

ಬೃಹತ್ ಶಿಲಾಯುಗದ ಘೋರಿಗಳು

ಚಕ್ರಬಾವಿಗೆ ಹೊಂದಿಕೊಂಡಂತೆ ಇರುವ ಅರಳುಕುಪ್ಪೆ ಗ್ರಾಮದಲ್ಲಿರುವ ಬೃಹತ್ ಶಿಲಾಯುಗದ ಘೋರಿಗಳನ್ನು ಸಹ ಸ್ಮಾರಕಗಳಿಗೆ ಸೇರಿಸಬಹುದು. ಅರಳುಕುಪ್ಪೆಯ ಬೋರೆದೇವರ ಗುಡಿ ಮತ್ತು ಮೂರುಗುಡ್ಡೆ ಬೆಟ್ಟಗಳಲ್ಲಿ ನೂರಾರು ಬೃಹತ್ ಶಿಲಾಯುಗದ ಸಮಾಧಿಗಳಿವೆ. ಈ ಘೋರಿಗಳಿಗೆ ಸುಮಾರು ಏಳು ಸಾವಿರ ವರ್ಷಗಳ ಇತಿಹಾಸವಿದೆ. ಇಲ್ಲಿ ಜನ ವಾಸಿಸುತ್ತಿದ್ದು, ಬೆಟ್ಟದ ತಪ್ಪಲಿನಲ್ಲಿ ಸಮಾಧಿಗಳನ್ನು ನಿರ್ಮಿಸಿ ಕೊಂಡಿದ್ದಾರೆ. ಚಕ್ರಬಾವಿಯ ಸುತ್ತಮುತ್ತ ಎಲ್ಲಿ ವಾಸಿಸುತ್ತಿರಬಹುದು ಎಂಬ ಮಾಹಿತಿ ಇಲ್ಲ. ಬಹುಶಃ ಚಕ್ರಬಾವಿಯ ಬೆಟ್ಟದ ಸಿದ್ದಪ್ಪ ಗುಡ್ಡೆ ಹತ್ತಿರ ಶಿಲಾಯುಗದ ಜನರ ನೆಲೆಗಳಿರಬಹುದು. ಇದರ ಬಗ್ಗೆ ಸರಿಯಾಗಿ ಸಂಶೋಧನೆ ನಡೆಸುವ ಅವಶ್ಯಕತೆಯಿದೆ.

ಅಧ್ಯಾಯ - 7

ಚಕ್ರಬಾವಿ ಗ್ರಾಮದ ಕೆಲವು ಶಾಸನಗಳು

ಅಧ್ಯಾಯ – ಏಳು

ಚಕ್ರಬಾವಿ ಗ್ರಾಮದ ಕೆಲವು ಶಾಸನಗಳು

ಶಾಸನ ಸಂಪತ್ತು ಒಂದು ಪ್ರದೇಶದ ಸಂಸ್ಕೃತಿಗಳ ಪ್ರತೀಕವಾಗಿವೆ. ಅವುಗಳ ಅಧ್ಯಯನದಿಂದ ಆ ಕಾಲದ ಚರಿತ್ರೆ ಪ್ರದೇಶ ಜನಜೀವನ ಧರ್ಮ ಮುಂತಾದ ಸಂಸ್ಕೃತಿಗಳನ್ನು ಅರಿಯಬಹುದು. ಪ್ರಸ್ತುತ ಅಧ್ಯಾಯದಲ್ಲಿ ಚಕ್ರಬಾವಿಗೆ ಸಂಬಂಧಿಸಿದಂತೆ ಸುಮಾರು 12 ಶಾಸನಗಳ ವಿವರಣೆಯನ್ನು ನೀಡಿದ್ದೇನೆ.

1. ಮುಮ್ಮಡಿ ಕೆಂಪವೀರಪ್ಪಗೌಡ ತಾಮ್ರ ಶಾಸನ[37]

1. ಶುಭಮಸ್ತು । ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ
2. ಚಾರವೇ । ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ
3. ಶಂಭವೇ ॥ ಸ್ವಸ್ತಿಶ್ರೀ ವಿಜೆಯಾಭ್ಯುದಯ ಶಾಲಿವಾಹನ ಶ
4. ಕ ವರುಷಂಗಳು 1932 ನೆಯ ವಿಕ್ರುತು ನಾಮ ಸಂವತ್ಸರ
5. ದ ಕಾತಿಕ ಬ 30 ಸೂರ್ಯಗ್ರಹಣದ ಪರ್ವಕಾಲದಲ್ಲು
6. ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ವೀರಪ್ರತಾಪ ಶ್ರೀ
7. ರಂಗದೇವ ಮಹಾರಾಯರ್ರೈಯ್ಯನವರು ಗನಗಿರಿಯಲ್ಲು
8. ರತ್ನ ಸಿಂಹಾಸನಾರೂಢರಾಗಿ ಪ್ರುಥುವೀ ಸಾಮ್ರಾಜ್ಯಂಗೈ
9. ವುತ್ತಿರಲು । ಸದಾಶಿವ ಗೋತ್ರದ ಯಲಹಂಕ ನಾಡಪ್ರಭು
10. ಳಾದ ಮುಂಮಡಿ ಕೆಂಪೇಗವುರಯ್ಯನವರ ಪವುತ್ರರಾ
11. ದ ಮುಂಮಡಿ ಕೆಂಪವೀರಪ್ಪ ಗವುಡರ್ರೈಯ್ಯನವರು
12. ತಮ್ಮ ತಂದೆ ತಾಯಿಗಳಿಗೆ ಪುಣ್ಯವಾಗಲಿಯೆಂದು ತಂಮ ಆಳು
13. ವಿಕೆಗೆ ಸಲ್ಲುವ ಮಾಗಡಿ ಸೀಮೆಗೆ ಸೇರಿದ ಚಕ್ರಬಾವಿ ಹೋ
14. ಬಳಿ ಕೆಂಪನಹಳ್ಳಿಗೆ ಪ್ರತಿನಾಮಧೆಯವಾದ ಶ್ರೀನಿವಾಸ
15. ಪುರವನ್ನು ಮುಂಡುಂಬೆ ತಿಮ್ಮಪ್ಪಯ್ಯನ ಮಗ ವೆಂಕಪ್ಪಯ್ಯನಿ
16. ಗೆ ಶಿವಾರ್ಪಿತವಾಗಿ ಕೊಟ್ಟು ಆ ಗ್ರಾಮದಲ್ಲೆ ಚತುಶೀಮೆ ವ

---

[37] ಡಾ.ಎಂ.ಜಿ.ಮಂಜುನಾಥ (ಸಂ.) ಯಲಹಂಕ ನಾಡಪ್ರಭುಗಳು ಶಾಸನ ಸಂಪುಟ ಶಾಸನಸಂಖ್ಯೆ 76. ಪು.150.

17. ಳಗುಳ್ಳ ನಿಧಿ ನಿ ಕ್ಷೇಪ ಜಲ ತರು ಪಾಷಾಣ ಅಕ್ಷಿಣಿ ಆಗಾಮಿ

18. ಸಿಧಸಾಧ್ಯಂಗಳೆಂಬ ಅಷ್ಟಭೋಗ ತೇಜಸಾಂಮ್ಯಂಗಳನು ದಾ

19. ನಾದಿ ಕ್ರಯ ವಿನಿಮಯ ಭೋಗ್ಯಂಗಳಿಗೆ ಯೋಗ್ಯವಾಗಿ ಆಚಂ

20. ದ್ರಾರ್ಕ ಸ್ಥಾಯಿಯಾಗಿ ನೀವು ನಿಮ್ಮ ಪುತ್ರ ಪೌತ್ರ ಪಾರಂಪರ್ಯ ವಾ

21. ಗಿ ನಿಂಮ ವಂಶ ವುಳ್ಳನ ಪರಿಯಂತ್ರವೂ ಅನುಭವಿಸಿಕೊಂಡು

22. ಬರುವದು ಯಂದು ಬರಶಿ ಕೊಟ ಸರ್ವ ಮಾಂನ್ಯ ತಾಂಬ್ರ ಶಾಸನಾ

23. ದಾನ ಪಾಲನಯೋರ್ಮಧ್ಯೇ ದಾನಶ್ರೇಯೋನು ಪಾಲನಂ ದಾನಾ

24. ಸ್ವರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ । ನ ವಿಷಂ ವಿಷ

25. ಮಿತ್ಯಾಹುಂ ಬ್ರಹ್ಮಸ್ವಂ ಪುತ್ರ ಪೌತ್ರಕಂ । ಸ್ವದತ್ತಾ ಪರದತ್ತಾ ವಾಯೋ

26. ಹರೇತು ವಸುಂಧರಾಂ ।ಷಷ್ಟಿರ್ವರ್ಷ ಸಹಸ್ರಾಣಿ ವಿಷ್ಟಾಯಾಂ

27. ಜಾಯತೇ ಕ್ರಿಮಿಃ ॥ ಯ ಧರ್ಮಕೆ ದೊರೆಗಳೇ ಆಗಲಿ ವುದ್ಯೋಗ

28. ಸ್ತರೇ ಆಗಲಿ ದ್ರೋಹ ಬುಧಿ ಯೆಣಿಸಿದರೆ ತ್ರಿಮೂರ್ತಿಗಳಿಗೂ ಹೊರ

29. ಗು ಯಿಹ ಪರಕೆ ಸಲದವರು ಯೀ ತಾಂಬ್ರ ಶಾಸನವಂನು ನಿಯೋಗಿ

30. ಕೋನಪ ವೆಂಗಟಗಿರೈಯನ ಮುಂದಿಟ್ಟು ರಾಯಸದ ವೆಂಗಟೇಶೈ

31. ಯನ ಕೈಯಲಿ ಸರ್ವಮಾನ್ಯವಾಗಿ ಬರೆಯಿಶಿ ಕೊಟ್ಟ ತಾಮ್ರಶಾಸ

32. ನ ॥ ಕೆಂಪವೀರಪ್ಪ

ಈ ಶಾಸನ ಸಾರಾಂಶ ಈ ರೀತಿಯಿದೆ. ವಿಜಯನಗರದ ಅರಸು ಶ್ರೀರಂಗದೇವರು ಪೆನುಗೊಂಡೆಯಿಂದ ರಾಜ್ಯಭಾರ ಮಾಡುತ್ತಿದ್ದಾಗ ಯಲಹಂಕ ನಾಡಪ್ರಭುಗಳ ಕೊನೆ ರಾಜ ಮುಮ್ಮಡಿ ಕೆಂಪ ವೀರಪ್ಪಗೌಡರು ತಮ್ಮ ತಂದೆ-ತಾಯಿಗಳಿಗೆ ಪುಣ್ಯವಾಗಲಿ ಎಂದು ತಮ್ಮ ಆಳ್ವಿಕೆಗೆ ಸೇರಿದ ಚಕ್ರಬಾವಿ ಹೋಬಳಿಯ ಕೆಂಪನಹಳ್ಳಿಗೆ ಪ್ರತಿನಾಮದೇಯವಾದ ಶ್ರೀನಿವಾಸಪುರವನ್ನು ಮುಡುಂಬೆ ತಿಮ್ಮಪ್ಪಯ್ಯನ ಮಗ ವೆಂಕಪ್ಪಯ್ಯನಿಗೆ ದಾನ ನೀಡಿದ ವಿವರವಿದೆ. ಈ ಶಾಸನವು ಕ್ರಿ.ಶ.1710 ನವೆಂಬರ್ 9 ಗುರುವಾರದಂದು ರಚನೆಯಾಗಿದೆ. ಈ ಶಾಸನದ ಕೊನೆಯಲ್ಲಿ 3ನೇ ಕೆಂಪವೀರಪ್ಪ ಗೌಡನು 'ಕೆಂಪವೀರಪ್ಪ' ಎಂಬ ಸಹಿಯನ್ನು ಮಾಡಿದ್ದಾನೆ.

ಈ ಶಾಸನದಿಂದ ಚಕ್ರಬಾವಿಯು ಕ್ರಿ.ಶ.1710ರಲ್ಲಿ ಮುಮ್ಮಡಿ ಕೆಂಪ ವೀರನ ಕಾಲದಲ್ಲಿ ಹೋಬಳಿ ಕೇಂದ್ರವಾಗಿತ್ತೆಂದು ತಿಳಿಯಬಹುದು. ಚಕ್ರಬಾವಿ ಹೋಬಳಿಯು ಕೆಂಪನಹಳ್ಳಿವರೆಗೂ ಇದ್ದು, ಇದರ ಮಧ್ಯೆ ಬರುವ ಈಗಿನ ಕೋರಮಂಗಲ, ಸೀಗೆಕುಪ್ಪೆ, ಕಲ್ಲುದೇವನಹಳ್ಳಿ

ಮುಂತಾದ ಊರುಗಳು ಸೇರಿಕೊಂಡಿದ್ದವು. ಚಕ್ರಬಾವಿಯು ದಕ್ಷಿಣಕ್ಕೆ 5–6 ಕಿ.ಮೀ ಹರಡಿದ್ದು ಪೂರ್ವ, ಪಶ್ಚಿಮ, ಉತ್ತರಕ್ಕೂ ಇಷ್ಟೇ ದೂರ ಹಬ್ಬಿರಬಹುದು. ಈ ವ್ಯಾಪ್ತಿಗೆ ಮರುಳದೇವನ ಪುರ, ಅಗಲಕೋಟೆ, ಹಲಸಬೆಲೆ, ಹುಲಿಕಟ್ಟೆ, ಅಳಲುಕುಪ್ಪೆ ಮುಂತಾದ ಗ್ರಾಮಗಳು ಸೇರಿದ್ದವೆಂದು ಹೇಳಬಹುದು.

ಈಗಿನ ಕೆಂಪನಹಳ್ಳಿಗೆ ಶ್ರೀನಿವಾಸಪುರವೆಂಬ ಪರ್ಯಾಯ ಹೆಸರಿದ್ದು, ಯಲಹಂಕ ನಾಡಪ್ರಭುಗಳು ವಿಜಯನಗರದ ಅರಸರ ಕಾಲದಲ್ಲಿ ಮಾಗಡಿ ಪ್ರಾಂತ್ಯದ ರಾಜರಾಗಿದ್ದರೆಂದು ಹೇಳಬಹುದು. ಕೆಂಪೇಗೌಡನ ವಂಶಸ್ಥರು ತಮ್ಮ ತಂದೆ–ತಾಯಿಗಳ ಬಗ್ಗೆ ಅಪಾರ ಗೌರವಗಳನ್ನಿಟ್ಟುಕೊಂಡು ಅವರಿಗೆ ಪುಣ್ಯವಾಗಲಿ ಎಂದು ದಾನಧರ್ಮ ಮಾಡುತ್ತಿದ್ದರು. ಕ್ರಿ.ಶ.1710ರಲ್ಲಿ ಶೈವ, ವೈಷ್ಣವ ಧರ್ಮಗಳು ಪ್ರಚಲಿತದಲ್ಲಿದ್ದು ರಾಜರು ಎರಡೂ ಧರ್ಮಗಳನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವವಿತ್ತೆಂದು ಈ ಶಾಸನದಿಂದ ತಿಳಿಯುತ್ತದೆ.

2 ಯಲಗದ ಹಳ್ಳಿ ಶಾಸನ [38]

ಶಾಸನದ ಪಾಠ ಈ ರೀತಿಯಿದೆ

1. ವಿಕ್ರುತಸಂವತ್ಸರದ ಜೇಷ್ಟ ಸು
2. 10 ಲು ಶ್ರೀಮತು ಚಕ್ರಬಾವಿಯ
3. ಸಿಂಹಾಸನದ ಪಟ್ಟದ ಮರಳ
4. ದೇವರು ಚಿಕ್ಕಪ್ಪ ವಡೆಯರ ದೇವ
5. ರು ಹೆರೂರ ಗವಿಯಮಠದ ಪಟದ
6. ಸಿದ್ದವೀರಣ್ಣ ಗರಿ ವಡೆದೇವರಿಗೆ ತಂಮ
7. ಮರುಳ ದೇವರಕಟ್ಟೆ ಚಿಕ್ಕವಡೇ
8. ರ ಕಟ್ಟೇನು ಅದಕೆ ಸಲುವ ಭೂ
9. ವಿಯ ಭಕ್ತಿಮಾಡಿದೆ ಇಯಿದಕೆ
10. ನಂಮು ಪಾರಂ ಪದವಿಯಲ್ಲಿ ಆವನಾ
11. ನೊಬ ಅಲ್ಪಿ ದರೆ ದೇವಲೋಕ ಮರ್ತ್ಯಲೋ
12. ಕಕೆಹೋಜಗುವಡಿಯ...

[38] EC-IX - ಮಾಗಡಿ – 33, ಸಾತನೂರು ಹೋಬಳಿ, ಪು.112

ಈ ಶಾಸನ ಸಾರಾಂಶ ಈ ರೀತಿಯಿದೆ. ಚಕ್ರಬಾವಿಯ ಪಟ್ಟದ ಮರಳ ದೇವರು ಮತ್ತು ಚಿಕ್ಕಪ್ಪ ವಡೆಯರದೇವರು ಹೆರೂರ ಗವಿಮಠದ ಸಿದ್ದ ವೀರಣ್ಣ ವಡೆದೇವರಿಗೆ ತಮಗೆ ಸೇರಿದ ಮರಳದೇವರಕಟ್ಟೆ ಮತ್ತು ಚಿಕ್ಕವಡೇರಕಟ್ಟೆಗೆ ಸೇರಿದ ಭೂಮಿಯನ್ನು ದಾನ ನೀಡಿದ ವಿವರವಿದೆ.

ಈ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ ವಿಕೃತ ಸಂವತ್ಸರ ಜೇಷ್ಠ ಶುದ್ಧ 10 ಎಂದು ಮಾತ್ರ ಇದೆ. ಇಲ್ಲಿ ಕೆಂಪೇಗೌಡನ ವಂಶಸ್ಥರ ಉಲ್ಲೇಖವಿಲ್ಲ. ಚಕ್ರಬಾವಿಯ ಸಿಂಹಾಸನದ ಅಧಿಪತಿಗಳಾದ ಮರುಳ ದೇವರು–ಚಿಕ್ಕಣ್ಣದ ವಡೆದೇವರು ಚಕ್ರಬಾವಿಯನ್ನು ಆಳ್ವಿಕೆ ಮಾಡುತ್ತಿದ್ದಾರೆಂದು ಹೇಳಬಹುದು. ಇವರು ಬಹುಶಃ ಕೆಂಪೇಗೌಡ ವಂಶಸ್ಥರ ನಂತರ ಅಧಿಕಾರಕ್ಕೆ ಬಂದಿರಬಹುದು. ಕ್ರಿ.ಶ.1728ರಲ್ಲಿ ಕೆಂಪೇಗೌರ ವಂಶ ಅಂತ್ಯವಾದಾಗ ಈ ಪಾಳೆಯಗಾರರು ಹುಟ್ಟಿಕೊಂಡಿರಬಹುದು. ಈ ಶಾಸನದ ಕಾಲ ಕ್ರಿ.ಶ. 1728 ನಂತರ ಕಾಲವಾಗಿದೆ. ಮರಳದೇವ ಮತ್ತು ಚಿಕ್ಕಪ್ಪದೇವರು ಇಬ್ಬರು ಅಣ್ಣ–ತಮ್ಮಂದಿರಬಹುದು. ಮರಳದೇವರು ಈಗಿನ ಮರುಳದೇವನಪುರದಲ್ಲಿ ವಾಸಿಸುತ್ತಿರಬಹುದು. ಇವನಿಂದಲೇ ಈಗಿನ ಮರಳದೇವನಪುರಕ್ಕೆ ಇವನ ಹೆಸರು ಬಂದಿದೆ. ಇವರಿಬ್ಬರ ಹೆಸರಿನಲ್ಲಿ ಮರುಳುದೇವರ ಕಟ್ಟೆ ಮತ್ತು ಚಿಕ್ಕವಡೇರಕಟ್ಟೆ ಎಂಬ ಎರಡು ಕಟ್ಟೆಗಳಿದ್ದವೆಂದು ತಿಳಿಯುತ್ತದೆ. ಈ ಕಟ್ಟೆಗಳ ಸುತ್ತಮುತ್ತಲ ಭೂಮಿಯನ್ನು ಹೆರೂರ ಗವಿಮಠದ ಸಿದ್ದ ವೀರಣ್ಣ ವಡೇರಿಗೆ ದಾನ ನೀಡಿದ್ದಾನೆ. ಹೆರೂರು ಈಗಿನ ನಿಟ್ಟೂರು ಕೆಂಪನಹಳ್ಳಿ ಹತ್ತಿರವಿರುವ ಗವಿಮಠವಾಗಿದೆ. ಅಲ್ಲೊಂದು ಮಠವಿದ್ದು ಅಲ್ಲಿಯ ಪೀಠಾಧ್ಯಕ್ಷ ಸಿದ್ದವೀರಣ್ಣ ಅವರಿಗೆ ಭೂಮಿಯನ್ನು ದಾನ ನೀಡಿದ್ದಾರೆ. ಕ್ರಿ.ಶ.1710ರಿಂದ ಹೋಬಳಿಯಾಗಿದ್ದ ಚಕ್ರಬಾವಿಯ ಅದಿಪತ್ಯವನ್ನು ವಹಿಸಿಕೊಂಡು ಚಿಕ್ಕಣ್ಣ ಒಡೆಯ ಮತ್ತು ಮರಳದೇವರು ಅಲ್ಲೇ ಇದ್ದು ಕೋಟೆಯೊಳಗೆ ವಾಸಿಸುತ್ತಿದ್ದು ಚಕ್ರಬಾವಿಯ ಸುತ್ತಮುತ್ತಲ ಗ್ರಾಮಗಳನ್ನು ಆಳ್ವಿಕೆ ಮಾಡುತ್ತಿದ್ದರೆಂದು ತಿಳಿದುಬರುತ್ತದೆ.

ಚಕ್ರಬಾವಿಯಲ್ಲಿ ಈಗಲೂ ಗದ್ದೆಯ ಹತ್ತಿರ ಒಂದು ಜಾಗವನ್ನು ವಡೇರ ಕಟ್ಟೆ ಎಂದು ಕರೆಯುತ್ತಾರೆ. ಅದೇ ರೀತಿ ಮರಳದೇವನಪುರದ ಹೊರಗಡೆ ಮರಳದೇವ ಕಟ್ಟೆಯೆಂದು ಕರೆಯುತ್ತಾರೆ.

ಮರಳದೇವ ಮತ್ತು ಚಿಕ್ಕಣ್ಣ ಒಡೆಯರು ತಮ್ಮ ಹೆಸರಿನಲ್ಲಿ ಒಂದೊಂದು ದೇವಾಲಯವನ್ನು ಕಟ್ಟಿಸಿದ್ದಾರೆ. ಮರಳದೇವನು, ಮರುಳದೇವನಪುರದಲ್ಲಿ 'ಮರುಳ ಸಿದ್ದೇಶ್ವರ' ಎಂಬ ದೇವಾಲಯವನ್ನು ನಿರ್ಮಿಸಿದರೆ, ಚಿಕ್ಕಣ್ಣ ಒಡೆಯನು ಚಕ್ರಬಾವಿಯಲ್ಲಿ ಚಿಕ್ಕಣ್ಣಸ್ವಾಮಿ ದೇವಾಲಯ ನಿರ್ಮಿಸಿದ್ದಾನೆ. ಮರುಳ ಸಿದ್ದೇಶ್ವರ ದೇವಾಲಯವು ಮೊದಲು ಮರುಳು ದೇವನಪುರದಲ್ಲಿದ್ದು, ಕಾಲ ಕ್ರಮದಲ್ಲಿ ಚಕ್ರಬಾವಿಯ ಮಠಕ್ಕೆ ಹಸ್ತಾಂತರಗೊಂಡಿದೆ.

ಚಿಕ್ಕಣ್ಣಸ್ವಾಮಿ ಈಗಲೂ ಚಕ್ರಬಾವಿಯಲ್ಲಿ ಊರ ಹೊರಗೆ ಇದೆ. ಪ್ರಸ್ತುತ ಈ ಶಾಸನ ದೊರೆತ್ತಿರುವುದು ಚಿಕ್ಕಣ್ಣಸ್ವಾಮಿ ದೇವಾಲಯದ ಅರ್ಧ ಕಿ.ಮೀ ದೂರದಲ್ಲಿ.

ಮರುಳದೇವರು ಮತ್ತು ಚಿಕ್ಕಪ್ಪ ವಡೆಯದೇವರು ಶೈವ ಯತಿಗಳಾಗಿರ ಬಹುದು. ಕರ್ನಾಟಕದಲ್ಲಿ ಬಸವಣ್ಣನ ನಂತರ ಅನೇಕರು ಅವರ ಮಾರ್ಗದರ್ಶನ ದಲ್ಲಿ ಯತಿಗಳಾದರು. ಅವರಲ್ಲಿ ಗೂಳೂರು ಸಿದ್ದಣ್ಣ ಒಡೆಯ, ಎಡೆಯೂರು ಸಿದ್ದಲಿಂಗೇಶ್ವರ (ಸಿದ್ದಲಿಂಗ ಯತಿಗಳು ಎಡೆಯೂರು ಸಿದ್ದಲಿಂಗೇಶ್ವರರಾಗಿ ಎಡೆಯೂರಲ್ಲಿ ಪೂಜಿಸಲ್ಪಡುತ್ತಿದ್ದಾರೆ) ಇನ್ನೂ ಮುಂತಾದವರು ತಮ್ಮ ಭಕ್ತಿಯಿಂದ ದೇವರುಗಳಾಗಿ ಇಂದಿಗೂ ಪೂಜಿಸಲ್ಪಡುತ್ತಿದ್ದಾರೆ. ಅದೇ ರೀತಿ ಮರುಳ ದೇವರು ಮತ್ತು ಚಿಕ್ಕಪ್ಪ ವಡೆದೇವರು ಶೈವ ಯತಿಗಳಾಗಿರಬಹುದು. ಆದರೆ ಮರುಳ ಸಿದ್ದೇಶ್ವರ ಚಿಕ್ಕಣ್ಣ ಸ್ವಾಮಿ ದೇವಾಲಯಗಳಲ್ಲಿ ಶಿವಲಿಂಗಗಳು ಇರುವುದರಿಂದ ಮರುಳದೇವರು ಚಿಕ್ಕಪ್ಪ ವಡೇದೇವರು ತಮ್ಮ ಹೆಸರುಗಳಲ್ಲಿ ಎರಡೂ ದೇವಾಲಯಗಳನ್ನು ನಿರ್ಮಿಸಿದ್ದಾರೆಂದು ತಿಳಿದುಬರುತ್ತದೆ.

3. ಉಡುವೆಗೆರೆಯ ಶಾಸನ [39]

ಶಾಸನ ಪಾಠ ಈ ರೀತಿಯಿದೆ.

1. ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪೃಥಿವೀ
2. ವಲ್ಲಭಂ ಮಹಾ ರಾಜಾಧಿ ರಾಜ ಪ
3. ರಮೇಶ್ವರು ಯಾದವ ಕುಳಾಂಬರ ದ್ಯುಮ
4. ಣಿ ಮಲೆರಾಜ ರಾಜ ಮಲೆಪರೊಳು ಗಂಡ
5. ಗಂಡೇರಭೂಂಡ ಶ್ರೀಮತು ಪ್ರತಾಪ ಚಕ್ರ
6. ವರ್ತಿ ಶ್ರೀ ಹೊಯ್ಸಳಶ್ರೀ ವೀರ ಬಲ್ಲಾಳದೇವ
7. ರು ಪ್ರುಥವೀ ರಾಜ್ಯಂಗೆ ಯುತ್ತಿರ್ದ್ದಲ್ಲಿ ಶ
8. ಕ ವರುಷ 1237 ನೆಯ ಆನಂದ ಸಂ
9. ವತ್ಸರದ ಆಷಾಡ ಬ 11 ನೋ । ಶ್ರೀಮನುಮ
10. ಹಾಪ್ರಧಾನ....... ಗೌಡದೇವಪ್ಪ ಗೌಡ
11. .. ನಾಯ್ಕ ಶ್ರೀಮತು ಮಇದುನ ಚವುಡ
12. ಪ್ಪನವರು ದಾಸರಯನಹಳ್ಳಿ ನಾಡೆ
13. ವೊಳಗಣ ವುಡುವೆಗೆರೆ ಯನ್ನು ಚ

[39] EC-IX - ಮಾಗಡಿ – 10, ಸಾತನೂರು ಹೋಬಳಿ ಪು.100

14. ಕ್ಕರ ಭಾವಿಯ ಮಂಜಶೆಟ್ಟಿಯ ರ ಮ

15. ಗ ಕೋಟೆಯಪ್ಪ ಶೆಟ್ಟಿಗೆ ಧಾರಾಪುರ್ಬ್ಬ

16. ಕಂ ಮಾಡಿ ಕೊಟ್ಟ ಕೊಡಿಗೆ ಈ ಧರ್ಮ

17. ವ ಆರು ಕೆಡಿಸಿದವರು ಗಂಗೆಯ ಡಿಯ

(ಮುಂದೆ ಹೋಗಿದೆ)

ಶಾಸನ ಕಾಲದ ಶಕವರ್ಷ 1237 ಅಂದರೆ ಕ್ರಿ.ಶ.1315. ಈ ಶಾಸನದ ಸಾರಾಂಶ ಈ ರೀತಿಯಿದೆ. ಹೊಯ್ಸಳರ ರಾಜ ವೀರಬಲ್ಲಾಳನ ಆಳ್ವಿಕೆಯ ಸಂದರ್ಭದಲ್ಲಿ ವೀರಬಲ್ಲಾಳನ ಮಹಾ ಪ್ರಧಾನರಾದ ದೇವಪ್ಪಗೌಡರ ಮೈದುನ ಚೌಡ್ವನವರು ದಾಸರಾಯನಹಳ್ಳಿ ನಾಡಿಗೆ ಸೇರಿದ ಉರಿಡುವೆಯನ್ನು ಚಕ್ರಬಾವಿಯ ಮಂಜಶೆಟ್ಟಿ ಮಗ ಕೋಟೆಯಪ್ಪ ಶೆಟ್ಟಿಗೆ ದಾನ ನೀಡಿದ ವಿವರವಿದೆ. ಉಡುವೆಗೆರೆ ಚಕ್ರಬಾವಿಯಿಂದ ಸುಮಾರು 15–20 ಕಿ.ಮೀ ದೂರದಲ್ಲಿದೆ. ಕ್ರಿ.ಶ.1315ರಲ್ಲಿ ಚಕ್ರಬಾವಿಯು ಒಂದು ದೊಡ್ಡ ಊರಾಗಿತ್ತು. ಇಲ್ಲಿ ಶೆಟ್ಟರು ಅಂದರೆ ವೈಶ್ಯರು ಇದ್ದರೆಂದು ತಿಳಿದು ಬರುತ್ತದೆ. ವೈಶ್ಯರು ಅಥವಾ ಶೆಟ್ಟರು ಇದ್ದ ಮೇಲೆ ಅವರು ವೃತ್ತಿ ಕೆಲಸಕ್ಕೋಸ್ಕರ ವ್ಯವಸಾಯವನ್ನು ಮಾಡುತ್ತಿರಲಿಲ್ಲ. ವ್ಯಾಪಾರವನ್ನೇ ಮಾಡುತ್ತಿದ್ದರು. ಆದ್ದರಿಂದ ಚಕ್ರಬಾವಿಯು ಒಂದು ವ್ಯಾಪಾರ ಕೇಂದ್ರವಾಗಿದ್ದು, ಮಂಜಶೆಟ್ಟಿ ಮತ್ತು ಕೋಟೆಯಪ್ಪ ಶೆಟ್ಟಿಯರು ವೈಶ್ಯರ ಅಥವಾ ವ್ಯಾಪಾರಸ್ಥರ ಮುಖಂಡರಾಗಿರಬಹುದು.

ಚಕ್ರಬಾವಿಗೂ ಉಡುವೆಗೆರೆಗೂ ವ್ಯಾಪಾರ ಸಂಬಂಧವಿತ್ತೆಂದು ಮಂಜಶೆಟ್ಟಿ ಕೋಟೆಯಪ್ಪ ಶೆಟ್ಟಿಯು ಚಕ್ರಬಾವಿಯಲ್ಲಿದ್ದುಕೊಂಡೇ ಉಡುವೆಗೆರೆಯನ್ನು ವ್ಯಾಪಾರ ಸ್ಥಳವಾಗಿ ಮಾಡಿಕೊಂಡಿದ್ದರೆಂದು ಈ ಶಾಸನದಿಂದ ತಿಳಿಯುತ್ತದೆ.

4. ಮುಮ್ಮಡಿ ದೊಡ್ಡ ವೀರಪ್ಪಗೌಡನ ಶಾಸನ [40]

ಈ ಶಾಸನ ಈ ರೀತಿಯಿದೆ.

1. ಶುಭಮಸ್ತು । ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹ
2. ನ ಶಕವರ್ಷಂಗಳು 1607 ನೆ ಸಂದ ವರ್ತಮಾನ ರಕ್ತಾಲ್ಷೊ ನಾಮ
3. ಸಂವತ್ಸರದ ಮಾರ್ಗಶಿರ ಶುದ್ದ 15 ಯಲೂಶ್ರೀಮದ್ರಾಜಾಧಿರಾಜ
4. ರಾಜಪರಮೇಶ್ವರ ಶ್ರೀವೀರಪ್ರತಾಪ ಶ್ರೀರಂಗದೇವ ಮಹಾರಾಯರೈ
5. ಯ್ಯನವರು ಘನಗಿರಿಯಲ್ಲೂ ರತ್ನ ಸಿಂಹಾಸನಾರೂಢರಾಗಿ ಪೃ

[40] EC-IX - ಅನುಬಂಧ ಸಂಪುಟ, ಮಾಗಡಿ–85, ಪು.97

6. ಥ್ವಿ ಸಾಮ್ರಾಜ್ಯಂಗೈಯುತ್ತಿರಲು ಸದಾಶಿವ ಗೋತ್ರದ ಯಲ
7. ಹಂಕ ನಾಡಪ್ರಭುಗಳಾದ ಯಿಂಮ್ಮಡಿ ಕೆಂಪೇಗವುಡರೈಯ್ಯ
8. ನವರ ಪೌತ್ರರದ ಮುಮ್ಮಡಿ ಕೆಂಪೇಗೌಡರೈಯ್ಯನವರ ಪುತ್ರ
9. ರಾದ ಮುಮ್ಮಡಿ ದೊಡ ವೀರಪ್ಪಗೌಡರೈಯ್ಯನವರು ಬರಹಿ
10. ಸಿಕೊಟ್ಟೆ ತಾಂಮ್ರದ ಶಾಸನ ಕ್ರಮವೆಂತೆಂದರೆ ಮಾಗಡೀ ಶೀಮೆಗೆ
11. ಸಲುವ ಕಲ್ಲುದೇವನಹಳಿ ಗ್ರಾಮ ನೆರಲವಾಡೀ ಗ್ರಾಮ ಸಾತ
12. ನೂರಲ್ಲಿ 1 ಹೊಲ॥ ಗದ್ದೆ 1 ಮನೆಸಹ । ತಟಾಕಾ ಪ್ರತಿಷ್ಟಾ ಕಾ
13. ಲದಲ್ಲಿ ನಂಮ್ಮ ಹಿರಿಯರು ಕೊಟ ಭಟ ಮಾಂನ್ಯಗಳು ಅಗಲ
14. ಕೋಟೆ ಗ್ರಾಮದಲ್ಲಿ ಹೊಲ । ಗದೆ । ೦ಮ ಮನೆಸಹ । ಆಳ
15. ಲಗುಪ್ಪೆ ಗ್ರಾಮದಲ್ಲಿ ಹೊಲ 10 ಗದ್ದೆ 10 ಮನೆ ಸಹ । ಚಕ್ರಬಾ
16. ವಿಯಲ್ಲೂ ಹೊಸ ॥ ಗದ್ದೆ॥। ಮಂನೆ ಸಹ । ಹುಣಶೆಕುಪ್ಪೆ
17. ಗ್ರಾಮ ಸಹ ಶ್ರೀರಾಮೇಶ್ವರಸ್ವಾಮಿಯವರ ಸನ್ನಧಾನದಲ್ಲಿ
18. ಸೋಮೋಪರಾಗ ಪುಣ್ಯಕಾಲದಲ್ಲಿ ವಿಶ್ವಾಮಿತ್ರಗೋತ್ರದ ಆ
19. ಶ್ವಲಾಯನ ಸೂತ್ರದ ಲಕ್ಷ್ಮೀಪತಿಭಟರಿಗೆ ಸಹಿರಣ್ಯೋ
20. ದಕ ದನ ದಾರಾಪೂರ್ವಕವಾಗಿ ನಂಮ್ಮ ಮಾತಾ ಪಿತ್ರುಗಳಿಗೆ
21. ಪುಂಕ್ಯಾ ಬರಲಿಯೆಂದು ಧಾರೆಯಂನೆರದು ಕೊಟ್ಟೆವು । ಯೀ ಗ್ರಾಮಗ
22. ಳಿಗೆ ಸಲುವ ಯಲ್ಲೆ ಚತೂಸೀಮೆವಳಗುಳ್ಳನಧಿ ನಕ್ಷೆಪ ಜಲ ತರುಪಾ
23. ಷಾಣ ಅಕ್ಷಿಣಿ ಆಗಮಿ ಸಿದ್ಧಸಾಧ್ಯಂಗಳೆಂಬ ಅಷ್ಟಭೋಗ ತೇಜ
24. ಸ್ವಾಮ್ಯಂಗಳಂನೂ ದಾನ ವಿಕ್ರಯ ವಿನಿಮಯ ಭೋಗ್ಯಂಗಳಿಗೆ
25. ಯೋಗ್ಯವಾಗಿ ಆಚಂದ್ರಾರ್ಕವಾಗಿ ಪುತ್ರಪೌತ್ರ ಪಾರಂಪರ್ಯ
26. ವಾಗಿ ಅನುಭವಿಸಿಕೊಂಡು ಬರಬೇಕೆಂಬುದಾಗಿ ಬರಯಿ
27. ಶಿ ಕೊಟ ಮಾನ್ಯದ ತಾಂಮ್ರಶಾಸನಾ ॥ ಶೀಗೆಕುಪ್ಪೆ ಗ್ರಾಮ
28. ಶ್ರೀ ಶ್ರೀಂಗೇಮಟಕೆ ಕೊಟು ಯಿದೇವೆ ॥
29. ಅರಭಟರಹಲಿ ಸುಬ್ರಂಮಣ್ಯಸ್ವಾಮಿಗೆ ಕೊಟುಯಿದೇವೆ
30. ಅಳಲಕುಪ್ಪೆ ನಮ್ಮ ಹಿರಿಯ
31. ರು ಕಾಶೀಧರ್ಮಕ್ಕೆ ಕೊಟು ಯಿದಾರೆ ॥ ಸ್ವದತ್ತಾ ದ್ವಿಗುಣಂ ಪುಂ
32. ಣ್ಯಂ ಪರದತ್ತಾನು ಪಾಲನಂ ಪರದತ್ತಾಪಹರೇಣ ಸ್ವದತ್ತಂ ನ

33. ಷ್ಫಲಂ ಭವೇತ್॥ ನ ವಿಷಂ ವಿಷಮಿತ್ಯಾಹುಃ ಬ್ರಂಹ್ಮಸ್ವಂ ವಿಷ

34. ಮುಚ್ಚಯತೇ ವಿಷಮೇಕಾಕಿನಂ ಹಂತ್ತಿ ಬ್ರಂಹ್ಮಸ್ವಂ ಪುತ್ರಪೌತ್ರ

35. ಕಂ ॥ ಸ್ವದತ್ತಾ ಪರದತ್ತಾಂ ವಾಯೋ ಹರೇತ ವಸುಂಧರ ಷ

36. ಷ್ಠಿರ್ವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೆ ಕ್ರಿಮಿಃ ॥

37. ಯೀಧರ್ಮಕ್ಕೆ ದೊರೆಳೇ ಆಗಲಿ ವುದ್ಯೋಗಸ್ತರೇ ಆಗಲಿ ದ್ರೋ

38. ಹ ಬುದ್ಧಿ ಯೆಣಿಸಿದರೆ ತ್ರಿಮೂರ್ತಿಗಳಿಗೂ ಹೊರಗೂ

39. ಯಿಹಪರಕೆ ಸಲ್ಲದವರು ॥ ಯೀ ತಾಂರಶಾಸನವಂನ್ನು

40. ನಿಯೋಗಿ ಕೋನಪ್ಪ ವೆಂಕಟಗಿರೈಯ್ಯನ ಮುಂದಿಟ್ಟು ರಾಯಸದ

41. ವೆಂಕಟಗಿರೈಯ್ಯನ ಕೈಯಲ್ಲಿ ಸರ್ವಮಾನ್ಯವಾಗಿ ಬರಯಿ

42. ಶಿಕೊಟ ತಾಂರಶಾಸನಾ ॥ ಮುಮ್ಮಡಿ ದೊಡವೀ

43. ರಪ್ಪನ ವಪಿತ್ತ ಶ್ರೀರಾಮ

ಶಾಸನದ ಸಾರಾಂಶ ಈ ರೀತಿಯಿದೆ. ಯಲಹಂಕ ನಾಡಪ್ರಭು 3ನೇ ದೊಡ್ಡ ವೀರಪ್ಪಗೌಡನು ಮಾಗಡಿ ಸೀಮೆಗೆ ಸೇರಿದ ಕಲ್ಲುದೇವನಹಳ್ಳಿ ಗ್ರಾಮ, ನೇರಲವಾಡಿ ಗ್ರಾಮ, ಸಾತನೂರಲ್ಲಿ ಹೊಲಗದ್ದೆ ಒಂದು ಮನೆಯನ್ನು ಅಲ್ಲದೆ ತಮ್ಮ ಪೂರ್ವಿಕರು ಕೆರೆಯ ಪ್ರತಿಷ್ಠಾಪನೆಯಲ್ಲಿ ಕಾಲದಲ್ಲಿ ಕೊಟ್ಟಿದ್ದ ಅಗಲಕೋಟೆ ಗ್ರಾಮದಲ್ಲಿ ಹೊಲಗದ್ದೆ, ಮನೆ ಅಳಲಗುಪ್ಪೆ ಗ್ರಾಮದಲ್ಲಿ ಹೊಲ, ಗದ್ದೆ, ಮನೆ, ಚಕ್ರಬಾವಿ ಗ್ರಾಮದಲ್ಲಿ ಹೊಲ, ಗದ್ದೆ, ಮನೆ, ಹುಣಸೆಕೊಪ್ಪ ಇವುಗಳನ್ನು ತಮ್ಮ ತಂದೆ–ತಾಯಿಗಳಲ್ಲಿ ಪುಣ್ಯವಾಲಿ ಎಂದು ಶ್ರೀ ರಾಮೇಶ್ವರ ಸ್ವಾಮಿ ಸನ್ನಿಧಾನದಲ್ಲಿ ಪುನರ್ ದತ್ತಿಯಾಗಿ ಲಕ್ಷ್ಮೀಪತಿಭಟ್ಟರಿಗೆ ದಾನ ನೀಡಿದ ಉಲ್ಲೇಖವಿದೆ. ಶಾಸನದ ಹಿಂಭಾಗದಲ್ಲಿ ಸೀಗೆಕುಪ್ಪೆ ಗ್ರಾಮವನ್ನು ಶೃಂಗೇರಿ ಮಠಕ್ಕೆ ಅರೆಭಟ್ಟರಹಳ್ಳಿ ಗ್ರಾಮವನ್ನು ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿಗೆ ಅಳಲಕುಪ್ಪೆ ಗ್ರಾಮವನ್ನು ಕಾಶಿ ಮಠಕ್ಕೆ ಅಂದರೆ ಶಿವಗಂಗೆಗೆ ದಾನ ನೀಡಿದ್ದರ ವಿವರವಿದೆ. ಕೊನೆಯಲ್ಲಿ ಮುಮ್ಮಡಿ ದೊಡ್ಡ ವೀರಪ್ಪ ಎಂಬ ಸಹಿಯಿದೆ.

ಈ ಶಾಸನದ ಪ್ರಕಾರ ಮುಮ್ಮಡಿ ದೊಡ್ಡ ವೀರಪ್ಪಗೌಡನು ಕಲ್ಲುದೇವನಹಳ್ಳಿ, ನೇರಲವಾಡಿ ಗ್ರಾಮ, ಸಾತನೂರಿನಲ್ಲಿ ಹೊಲ, ಗದ್ದೆ, ಮನೆಯನ್ನು ಲಕ್ಷ್ಮೀಪತಿ ಭಟ್ಟರಿಗೆ ದಾನ ನೀಡಿದ್ದನು. ಜೊತೆಗೆ ಸೀಗೆಕುಪ್ಪೆ ಗ್ರಾಮವನ್ನು ಶೃಂಗೇರಿ ಮಠಕ್ಕೆ, ಅರಭಟ್ಟರ ಹಳ್ಳಿಯನ್ನು ಕುಕ್ಕೆಯ ಸುಬ್ರಹ್ಮಣ್ಯಸ್ವಾಮಿಗೆ ಅಳಲುಗುಪ್ಪೆ ಗ್ರಾಮವನ್ನು ಕಾಶೀಮಠಕ್ಕೆ ದಾನ ನೀಡಿದ್ದನೆಂದು ತಿಳಿಯಬರುತ್ತದೆ.

ಇದರ ಜೊತೆಗೆ ಇದೇ ಕಾಲದಲ್ಲಿ ತಮ್ಮ ಪೂರ್ವಿಕರು ಕೆರೆಯ ಪ್ರತಿಷ್ಠಾಪನೆಯ ಕಾಲದಲ್ಲಿ ಅಗಲಕೋಟೆ ಗ್ರಾಮದಲ್ಲಿ ಹೊಲ, ಗದ್ದೆ, ಮನೆ, ಅಳಲಕುಪ್ಪೆ ಗ್ರಾಮವನ್ನು ಹೊಲ, ಗದ್ದೆ, ಮನೆ, ಚಕ್ರಬಾವಿ ಗ್ರಾಮದಲ್ಲಿ ಹೊಲ, ಗದ್ದೆ, ಮನೆ ಮತ್ತು ಹುಣಸೆಕೊಪ್ಪ ಗ್ರಾಮದಲ್ಲಿ ಇದೇ ಲಕ್ಷ್ಮೀಪತಿ ಭಟ್ಟರಿಗೆ ಪುನರ್ ದತ್ತಿಯಾಗಿ ನೀಡಿ ದಾನ ಶಾಸನವನ್ನು ಮುಂದುವರೆಸಿದ್ದರ ಉಲ್ಲೇಖವಿದೆ.

ಕ್ರಿ.ಶ.1674ರಲ್ಲಿ ಮುಮ್ಮಡಿ ದೊಡ್ಡ ವೀರಪ್ಪಗೌಡನ ತಂದೆ ಮುಮ್ಮಡಿ ಕೆಂಪೇಗೌಡನು ಕೆಂಪಸಾಗರದಲ್ಲಿ ಒಂದು ಕೆರೆಯನ್ನು ಕಟ್ಟಿಸಿ ಕೆಲವು ಪ್ರದೇಶಗಳಲ್ಲಿ ಹೊಲ, ಗದ್ದೆ, ಮನೆಗಳನ್ನು ದಾನ ನೀಡಿದ್ದರು. ಈ ದಾನವನ್ನು ಮಗ ಮುಮ್ಮಡಿ ದೊಡ್ಡ ವೀರಪ್ಪಗೌಡ ಮುಂದುವರೆಸಿದನು. ಪ್ರಸ್ತುತ ಈ ಶಾಸನದಲ್ಲಿ ತಮ್ಮ ಪೂರ್ವಿಕರು ಕೆರೆಯ ಪ್ರತಿಷ್ಠಾಪನೆಯ ಕಾಲದಲ್ಲಿ ನೀಡಿದ್ದ ಅಂದರೆ ಆ ಕೆರೆ ಬೇರೆ ಯಾವುದು ಅಲ್ಲ, ಈಗಿನ ಕೆಂಪಸಾಗರ ಕೆರೆಯೇ ಆಗಿದೆ. 3ನೇ ಕೆಂಪೇಗೌಡನು ಕೆಂಪಸಾಗರದಲ್ಲಿ ಕೆರೆಯನ್ನು ನಿರ್ಮಿಸಿ ಅದಕ್ಕೆ ತನ್ನ ಹೆಸರೇ ಆದ 'ಮುಮ್ಮಡಿ ಕೆಂಪಸಾಗರ' ಎಂದು ಹೆಸರಿಟ್ಟಿದ್ದನು.

3ನೇ ಕೆಂಪೇಗೌಡನು ಕ್ರಿ.ಶ.1674ರಲ್ಲಿನ ಚಕ್ರಬಾವಿಯಲ್ಲಿ ಹೊಲ, ಗದ್ದೆ, ಮನೆಯನ್ನು ಲಕ್ಷ್ಮೀಪತಿ ಭಟ್ಟರಿಗೆ ಧಾರೆ ಎರೆದು ಕೊಟ್ಟನೆಂಬ ಮಾಹಿತಿ ದೊರೆಯುತ್ತದೆ. ಲಕ್ಷ್ಮೀಪತಿ ಭಟ್ಟರಿಗೆ ಕೊಟ್ಟ ಚಕ್ರಬಾವಿಯ ಮನೆ, ಗದ್ದೆ, ಹೊಲ ಯಾವುದು ಎಂದು ತಿಳಿಯುತ್ತಿಲ್ಲ. ಒಟ್ಟಾರೆ ಚಕ್ರಬಾವಿಯಲ್ಲಿ ಮಾಗಡಿ ಕೆಂಪೇಗೌಡನ ಮಗ ಮುಮ್ಮಡಿ ಕೆಂಪೇಗೌಡನ ಆಳ್ವಿಕೆ ಇತ್ತೆಂದು ಚಕ್ರಬಾವಿಯಲ್ಲಿತ್ತೆಂದು ಈ ಶಾಸನದಿಂದ ತಿಳಿದುಬರುತ್ತದೆ.

5 ಹುಲಿಕಟ್ಟೆ ಶಾಸನ[41]

ಈ ಶಾಸನ ಪಾಠ ಈ ರೀತಿಯಿದೆ.

1. ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಹನ ಶಕ1406
2. ಕ್ರೋಧಿ ಸಂವತ್ಸರ ದ್ವಿತೀಯಚೈತ್ರ ಶುನಿ ಅಲುಶ್ರೀ ಮಹಾಮಂಡ
3. ಲೇಶ್ವವರ ಮೇದಿನೀಮೀಸರಗಂಡ ಕಠಾರಿಯಸಾಳುವನಾ..
4. ಗಮಹಾರಾಯರು ಪ್ರ ಪ್ರಥ್ವೀರಾಜ್ಯಂಗೆಯುತ್ತಿರಲು..
5. ಯರು
6. ಯಿ ಗ್ರಾಮವನು ಸಿದದೇವಡೆಯ ಮಕ್ಕಳು ಗಂಗೆಯಒ

[41] EC-IX, ಮಾಗಡಿ-32, ಸಾತನೂರು ಹೋಬಳಿ, ಪು.112

7. ಡೆಯರಿಗೆ ಗದ್ದೆಬೆದ್ದಲುಹಣಭತ್ತಸಕಲ ಆದಾಯ..

8. ಲ್ಲವನುಶ್ರೋತ್ರಿಯವಾಗಿ

9. ಗ22ಹೊನ್ನಿಗೆಕೊಟೆವಾ

10. ಗಿಈರ್ಯಾದೆಯಲ್ಲವನು

11. ವಿತ್ತೊಂದು.. ದೆಯಾಗಿಅಳು

12. ಏದವರು ವಾರಣಾಸಿಯತಡಿ

13. ಯಾಲಿ ಗೋಬ್ರಾಹ್ಮಣರು ತಂದೆತಾಯ ಎಲ್ಲವರು ಕೊಂದ ಪಾಪಕೆ ಹೋ

14. ದವರು. ನಾಯಕರ.. ಪಗೇರ

15. ..ವರು

ಶಾಸನ ಸಾರಾಂಶ ಈ ರೀತಿಯಿದೆ.

ಕ್ರಿ.ಶ.1406 ಅಂದರೆ ಕ್ರಿ.ಶ.1484ರಲ್ಲಿ ವಿಜಯನಗರ ಅರಸು ಸಾಳ್ವವಂಶದ ನರಸಿಂಹನ ಆಳ್ವಿಕೆಯ ಸಂದರ್ಭದಲ್ಲಿ ಈ ಸಿದ್ದದೇವ ಒಡೆಯ ಮಕ್ಕಳು ಗಂಗೆಯ ಒಡೆಯರಿಗೆ ಸಕಲ ಆದಾಯವಿರುವ ಈ ಗ್ರಾಮದಲ್ಲಿ 20 ಗದ್ಯಾಣಗಳಿಗೆ ನೀಡಲಾಗಿದೆ. ಇದೊಂದು ಕ್ರಯದಾನ ಶಾಸನವಾಗಿದೆ. ಈ ಶಾಸನದಲ್ಲಿ ಯಾವ ಗ್ರಾಮ ಮತ್ತು ಯಾರು ಎಂಬುದು ಅಳಿಸಿಹೋಗಿದೆ. ಬಹುಶಃ ಈ ಗ್ರಾಮ ಎಂದರೆ ಹುಲಿಕಟ್ಟೆ ಗ್ರಾಮ ಅಥವಾ ಚಕ್ರಬಾವಿ ಗ್ರಾಮವಾಗಿರಬಹುದು. ಕ್ರಿ.ಶ. 1484ರಲ್ಲಿ ವಿಜಯನಗರದ ಸಾಳ್ವ ರಾಜಮನೆತನದವರು ಚಕ್ರಬಾವಿ ಸುತ್ತಮುತ್ತಲ ಗ್ರಾಮಗಳಲ್ಲಿ ಆಳ್ವಿಕೆ ಮಾಡುತ್ತಿದ್ದರು. ಆಗ ಕೆಂಪೇಗೌಡನ ವಂಶಸ್ಥರು ಇಲ್ಲಿಗೆ ಇನ್ನೂ ಬಂದಿರಲಿಲ್ಲ. ಆಗ ಮಾಗಡಿ ಪ್ರಾಂತ್ಯವನ್ನು ವಿಜಯನಗರದ ಒಬ್ಬ ಸಾಳ್ವ ರಾಜ ನೋಡಿಕೊಳ್ಳುತ್ತಿದ್ದರೆಂದು ಹೇಳಬಹುದು.

6 ಹಲಸಬೆಲೆ ಶಾಸನ [42]

ಶಾಸನಪಾಠ ಈ ರೀತಿಯಿದೆ – (ಮೇಲ್ಭಾಗ ಹೋಗಿದೆ)

1. ....ಶಾಲಿವಾಹನಕ 1654

2. ಕವರುಷಂಗಳು 65ನೆಯ ಪರಿಧಾವಿಸಂವತ್ಸ

3. ರದ ಕಾರ್ತ್ತಿಕಶು 15 ಶುಕ್ರ ವಾರದಲು ಶ್ರೀಮ

4. ದ್ರಾಜಾಧಿರಾಜರಾಜಪರಮೇಶ್ವರ ಪ್ರೌಢಪ್ರತಾ

---

[42] EC-IX, ಮಾಗಡಿ–35, ಸಾತನೂರು ಹೋಬಳಿ, ಪು.113

5. ಪ ಅಪ್ರತಿಮ ವೀರನರಪತಿ ಮಹೀಶೂರರತ್ನ ಸಿಂಹಾ

6. ಸನಾರೂಢರಾದ ಚಾಮರಾಜವೊಡೆಯರ್ರೈಯ

7. ನವರು ದೇವದೇವೋತ್ತಮದೇವತಾಸಾರ್ವಭೌಮ

8. ಖಿಳಾಂಡಕೋಟಿಬ್ರಂಹ್ಮಾಡ ನಾಯಕರಾದಮ

9. ...... ಚಾಮುಂಡೇಶ್ವರಿಯಂಮನ

10. ವರದಿವ್ಯ......

11. ...ರಾಜನಗರದ...

12. ...... ಮಾಡಿಸಿದರಾದಕಾರಣಯೀಗ್ರಾಮಕ್ಕೆ ಸಲುವ ಚ

13. ತುಸೀಮೆಯೊಳಗಾದ ನಿಧಿ ನಿಕ್ಷೇಪವ ಜಲಪಾಷಾಣ ಅಕ್ಷೀ

14. ಣಿ ಆಗಮಿಸಿದ್ದ ಸಾಧ್ಯಗಳೆಂಬ..

15. ಸ್ವಾಮ್ಯ......... (ಮುಂದೆ ಕಾಣುವುದಿಲ್ಲ)

ಶಾಸನ ಸಾರಾಂಶ ಈ ರೀತಿಯಿದೆ. ಶಕವರ್ಷ 1654 ಅಂದರೆ ಕ್ರಿ.ಶ.1732 ಮೈಸೂರು ಅರಸು ಚಾಮರಾಜಒಡೆಯರು ಒಬ್ಬ ಬ್ರಾಹ್ಮಣನಿಗೆ ಒಂದು ಗ್ರಾಮವನ್ನು ದಾನ ನೀಡಿದ ವಿವರವಿದೆ. ಯಾರಿಗೆ, ಏಕೆ ದಾನ ಕೊಟ್ಟರು ಎಂಬುದು ಅಸ್ಪಷ್ಟವಾಗಿದೆ. ಶಾಸನದಲ್ಲಿ ಆ ಬ್ರಾಹ್ಮಣನನ್ನು ದೇವದೋವೋತ್ತಮ, ದೇವತಾ ಸಾರ್ವಭೌಮ, ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ ಎಂದು ಹೇಳಿದೆ.

7 ಅಳಲುಕುಪ್ಪೆ ಶಾಸನ [43]

ಶಾಸನ ಪಾಠ ಈ ರೀತಿಯಿದೆ

1. ಬಹುಧಾನ್ಯ ಸಂವತ್ಸರದ ಜ್ಯೇಷ್ಟ ಶುದ್ಧ ಪಾರ್ನೊ

2. ಮಿಮಯು ಮಂಗಳ ವಾರದಲು ಕಾಸೀವಾಸಿ ಕ

3. ಡೇಮನೆ ವಿಶ್ವೇಶ್ವರಭಟ್ಟರು ಮಾಡಿಸಿದ ಆಳ

4. ಲುಕುಪ್ಪೆ ಗ್ರಾಮದ ಊರಪ್ರತಿಷ್ಠೆ

5. ವಿಶ್ವೇಶ್ವರ

ಈ ಶಾಸನ ಸಾರಾಂಶ ಈ ರೀತಿಯಿದೆ. ಬಹುಧಾನ್ಯ ಸಂವತ್ಸರದ ಜ್ಯೇಷ್ಠ ಶುದ್ದ, ಪೊರ್ಣಮಿ, ಮಂಗಳವಾರದಲ್ಲಿ ಕಾಶಿಯ ನಿವಾಸಿ ಅಂದರೆ ಶಿವಗಂಗೆ ಕಡೆ ಮನೆ ವಿಶ್ವೇಶ್ವರ

[43] EC-IX, ಮಾಗಡಿ-34, ಸಾತನೂರು ಹೋಬಳಿ, ಪು.112

ಭಟ್ಟರು ಅಳಲುಕುಪ್ಪೆ ಗ್ರಾಮವನ್ನು ಪ್ರತಿಷ್ಠಾಪನೆ ಮಾಡಿದ್ದರ ಉಲ್ಲೇಖವಿದೆ. ಶಾಸನದ ಕೊನೆಯಲ್ಲಿ ವಿಶ್ವೇಶ್ವರ ಎಂಬ ಸಹಿಯಿದೆ. ಈ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ.

8. ಮುಮ್ಮಡಿ ಕೆಂಪೇಗೌಡರ ಅಳಲುಕುಪ್ಪೆ ಶಾಸನ[44]

ಈ ಶಾಸನ ಪಾಠ ಈ ರೀತಿಯಿದೆ

1. ಪ್ಲವಂಗ ಸಂವ್ಸರದ ಕಾರ್ತಿ
2. ಕಭಹುಳ ॥ಲು ಶ್ರೀಮತು
3. ಯಲಹಂಕ ನಾಡ ಪ್ರಭುಹಿರೀ
4. ಕೆಂಪೇಗೌಡರವರ ಪೌತ್ರರಾದ
5. ಯಿಂಮಡಿ ಕೇಂಪೇಗೌಡರವರ ಪು
6. ತ್ರರಾದ ಮುಂಮಡಿ ಕೆಂಪೇಗೌಡ
7. ರವರು ಕಾಸಿಯಲು ಮಟವಂನು
8. ಕಟ್ಟಿಸಿಲಿಂಗ ಪ್ರತಿಷ್ಠೆಯಂನು
9. ಮಾಡಿಸಿ ಮಟದ ಧರ್ಮಕ್ಕೆಕೊ
10. ಟ್ಟ ಅಳಲು ಕುಪೆ ಗ್ರಾಮವಂನು
11. ವಿಶ್ವೇಶ್ವರ ಪ್ರೀತಿಯಾಗಿ ಕೊಟೆಉ
12. ಇದೇ ದಾನಶಾಸನ ಅಕ್ಷಂ
13. ತಲಮುದುಭಟರಿಗೆ (ಮುಂದಿನಭಾಗ ತ್ರುಟಿತವಾಗಿದೆ)

ಮಾಗಡಿ ಕೆಂಪೇಗೌಡನ ಮಗ ಮುಮ್ಮಡಿ ಕೆಂಪೇಗೌಡನು ಕಾಶಿಯಲ್ಲಿ (ಶಿವಗಂಗೆ) ಒಂದು ಮಠ ಕಟ್ಟಿಸಿ ಅಳಲುಕುಪ್ಪೆಯಲ್ಲಿ ದಾನ ನೀಡಿದ್ದರಿಂದ ಈ ಶಾಸನವು ಕ್ರಿ.ಶ.1658ರ ಮುಂಚಿನದು ಎಂದು ಇದರ ಕಾಲಕ್ಕೆ ಮುಂಚೆಯೇ ಅಳಲುಕುಪ್ಪೆ ಗ್ರಾಮವು ಪ್ರತಿಷ್ಠಾಪನೆಯಾಗಿದ್ದು, ಈ ಗ್ರಾಮವನ್ನು ಕಾಶಿಯ (ಶಿವಗಂಗೆ) ಕಡೆ ಮನೆಯ ವಿಶ್ವೇಶ್ವರ ಎಂಬುವರು ಪ್ರತಿಷ್ಠಾಪಿಸಿದರೆಂದು ಈ ಶಾಸನದಿಂದ ತಿಳಿದುಬರುತ್ತದೆ.

9 ಅಳಲುಕುಪ್ಪೆ ಎರಡನೆ ಶಾಸನ [45]

ಉತ್ತರಕಡೆ

---

[44] EC-IX, ಮಾಗಡಿ–35, ಸಾತನೂರು ಹೋಬಳಿ, ಪು.113

[45] EC-IX, ಮಾಗಡಿ–36, ಸಾತನೂರು ಹೋಬಳಿ, ಪು.113

1. ವಿರೋಧಿ ಸಂವತ್ಸರದ ಮಾರ್ಗಸಿರ ಶುದ್ಧ 5 ಲು
2. ...ತುಕೊತ್ತಹಳ್ಳಿ ಸಂತಯಿಯನ ಮಗಮ
3. ಡಣಯ ಗೆಯಿಸಿದ ಬಸವ

ಪೂರ್ವಕಡೆ

4. ಆರುಲಕುಪ್ಪೆ ರಾಮಯನ ಮೊ
5. ಮಗ ಸಂಭುವಲಿಂಗ ಗೆಯಿಸಿ
6. ದ ಬಸವ

ಈ ಶಾಸನದಲ್ಲಿ ಕೊತ್ತಹಳ್ಳಿ ಸಂತಯ್ಯನ ಮಗ ಮಡಣಯ ಮತ್ತು ಅರಳುಕುಪ್ಪೆ ರಾಮಯ್ಯನ ಮೊಮ್ಮಗ ಶಂಭುಲಿಂಗ ಇಬ್ಬರು ಸೇರಿ ಬಸವಣ್ಣ ಮೂರ್ತಿಯನ್ನು ಮಾಡಿಸಿದ್ದರ ಉಲ್ಲೇಖವಿದೆ. ಈ ರೀತಿಯಾಗಿ ಚಕ್ರಬಾವಿಯನ್ನು ಉಲ್ಲೇಖಿಸುವ ಮತ್ತು ಸುತ್ತಮುತ್ತಲ ಗ್ರಾಮಗಳ ಶಾಸನಗಳಿಂದ ಚಕ್ರಬಾವಿ ಅಧ್ಯಯನವನ್ನು ಮಾಡಬಹುದು.

ಸಮಾರೋಪ

ಸಮಾರೋಪ

ಪ್ರಸ್ತುತ ಅಧ್ಯಯನದಿಂದ ಚಕ್ರಭಾವಿ ಗ್ರಾಮಕ್ಕೆ ಸುಮಾರು ಏಳುಸಾವಿರ ವರ್ಷಗಳ ಇತಿಹಾಸವಿರುವುದನ್ನು ಗಮನಿಸಬಹುದು. ಚಕ್ರಭಾವಿ ಗ್ರಾಮದ ಸುತ್ತಮುತ್ತ ಪ್ರಾಚೀನ ಶಿಲಾಯುಗದ ಜನರು ವಾಸಿಸುತ್ತಿದ್ದು, ಅನೇಕ ಬೃಹತ್ ಶಿಲಾಯುಗದ ಸಮಾಧಿಗಳು ದೊರಕಿರುವುದು ಇದಕ್ಕೆ ಸಾಕ್ಷಿಯಾಗಿದೆ. ಮೌರ್ಯ, ಶಾತವಾಹನ, ಕದಂಬ, ಗಂಗರ, ರಾಷ್ಟ್ರಕೂಟ, ಬಾದಾಮಿ ಚಾಲುಕ್ಯ, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ, ಯಲಹಂಕ ನಾಡಪ್ರಭು ಮುಂತಾದವರು ಕರ್ನಾಟಕವನ್ನು ಆಳಿದ್ದಾರೆ. ಚಕ್ರಭಾವಿಯಲ್ಲಿ ಮೌರ್ಯ, ಶಾತವಾಹನ, ರಾಷ್ಟ್ರಕೂಟ, ಬಾದಾಮಿ ಚಾಲುಕ್ಯ, ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕುರುಹುಗಳು ದೊರಕಿಲ್ಲ. ಆದರೆ ಚಕ್ರಭಾವಿಯು ಮೇಲಿನ ರಾಜಮನೆತನಗಳು ಆಳ್ವಿಕೆಗೆ ಸೇರಿತ್ತೆನ್ನಬಹುದು.

ಒಂದು ಪ್ರಾಚೀನ ಊರಿನ ಸಂಸ್ಕೃತಿಯನ್ನು ಹೇಳುವಲ್ಲಿ ಸ್ಮಾರಕ ಶಿಲೆಗಳ ಪಾತ್ರ ಪ್ರಮುಖವಾದದ್ದು. ಚಕ್ರಭಾವಿಯ ಅನೇಕ ಪ್ರಾಚೀನ ಸ್ಮಾರಕಗಳು ದೊರೆತಿದೆ. ವೀರಗಲ್ಲು, ಮಾಸ್ತಿಗಲ್ಲು, ಲಜ್ಜಾಗೌರಿ ಶಿಲ್ಪ, ಅನೇಕ ವೀರಮಾಸ್ತಿಗಲ್ಲುಗಳ ಸಮೂಹಗಳು, ಕೆರೆ, ಕಟ್ಟೆ, ಕಾಲುವೆ, ಕಲ್ಯಾಣಿ, ಕೋಟೆ ಮುಂತಾದವುಗಳು ಚಕ್ರಭಾವಿ ಪ್ರಾಚೀನ ಕಾಲದ ಸಂಸ್ಕೃತಿಯ ಹಳ್ಳಿ ಎಂಬುದನ್ನು ಮನದಟ್ಟು ಮಾಡಿವೆ. ಚಕ್ರಭಾವಿಯ ಕೆಲವು ಶಾಸನಗಳಿಂದಲೂ ಅನೇಕ ಸಂಸ್ಕೃತಿಯನ್ನು ತಿಳಿಯಬಹುದಾಗಿದೆ. ಶಾಸನಗಳಿಂದ ರಾಜರ ಚರಿತ್ರೆ, ಆ ಕಾಲದ ಸಂಪ್ರದಾಯ, ಗುರು–ಹಿರಿಯರಿಗೆ ತೋರುತ್ತಿದ್ದ ಗೌರವ, ದಾನಧರ್ಮ ಇತ್ಯಾದಿಗಳನ್ನು ತಿಳಿಯಪಡಿಸಲಾಗಿದೆ. ಕ್ರಿ.ಶ.1710ರ ಶಾಸನದಿಂದ ಚಕ್ರಭಾವಿ ಹೋಬಳಿ ಕೇಂದ್ರವಾಗಿದ್ದು ಮುಮ್ಮಡಿ ಕೆಂಪ ವೀರಪ್ಪಗೌಡನು ಕೋಟೆ ಕಟ್ಟಿಸಿ ರಾಜ್ಯಭಾರ ಮಾಡುವ ಸಂದರ್ಭದಲ್ಲಿ ಅನೇಕ ಯುದ್ಧಗಳು ಚಕ್ರಭಾವಿಯಲ್ಲಿ ಜರುಗಿದ ಮಾಹಿತಿಯನ್ನು ನೀಡುತ್ತವೆ. ಚಕ್ರಭಾವಿಯಲ್ಲಿ ವೈಷ್ಣವ ಧರ್ಮ–ಶೈವಧರ್ಮಗಳು ಅಸ್ತಿತ್ವದಲ್ಲಿರುವುದನ್ನು ಅನೇಕ ದೇವಾಯಗಳು, ಶಾಸನಗಳು, ವೈಷ್ಣವ ಮತ್ತು ಶೈವ ಸಂಪ್ರದಾಯದ ವೀರಮಾಸ್ತಿಗಲ್ಲು, ಕೆಲವು ಶಿಲ್ಪಗಳಿಂದ ಚಕ್ರಭಾವಿಯ ಧಾರ್ಮಿಕ ಚರಿತ್ರೆಯ ಜೊತೆ ಶಿಲ್ಪಕಲೆಯನ್ನು ತಿಳಿಯಬಹುದಾಗಿದೆ. ಪ್ರಾಚೀನ ಕಾಲದ ಚಕ್ರಭಾವಿಯಲ್ಲಿ ಸಂತೆಗಳು ನಡೆಯುತ್ತಿರುವುದು ಆ ಕಾಲದ ಜನರ ಸಮಾಜ ಮತ್ತು ಆರ್ಥಿಕ ಸ್ಥಿತಿಯನ್ನು ಕಾಣಬಹುದು. ಕೆರೆ, ಕಟ್ಟೆ, ಸಂತೆ, ಗಡಿ ಕಲ್ಲುಗಳು, ಅಳತೆಮಾಪನಗಳು, ಅನೇಕ ವೀರಗಲ್ಲು, ಮಾಸ್ತಿಗಲ್ಲುಗಳು ಚಕ್ರಭಾವಿಯ ಸಮಾಜದ ಆರ್ಥಿಕ ಸ್ಥಿತಿ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ತಿಳಿಸುತ್ತದೆ.

ಇನ್ನೂ ಕೆಲವು ವರ್ಷಗಳ ಹಿಂದೆ ಆಗಿದ್ದ ಹೋಬಳಿ, ಕೋಟೆ, ಚೌಡಮ್ಮನ ಗುಡಿ, ಮಹದೇಶ್ವರ ದೇವಾಲಯ ವೀರಾಂಜನೇಯನ ಗುಡಿ, ಕಲ್ಪತರು ಗ್ರಾಮೀಣ ಬ್ಯಾಂಕ್, ಪೊಲೀಸ್ ಠಾಣೆ, ಸಿನಿಮಾ ಮಂದಿರ ಮುಂತಾದವುಗಳನ್ನು ಕಳೆದು ಕೊಂಡಿದ್ದೇವೆ. ಇವುಗಳನ್ನೆಲ್ಲ ಮರಳಿಪಡೆಯಬೇಕೆಂದರೆ ನಾವೆಲ್ಲರೂ ಮನಸ್ಸು ಮಾಡಬೇಕು ಅಷ್ಟೇ.

ಸ್ವತಂತ್ರ ಪೂರ್ವದಲ್ಲೇ 'ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ'ವು ಸ್ಥಾಪನೆಯಾಗಿದೆ. ಇದೂ ಕೂಡ ಚಕ್ರಬಾವಿಯ ಜನರ ಸೌಹಾರ್ದತೆ ಮತ್ತು ಭಾತೃತ್ವದ ಸಂಕೇತವಾಗಿದೆ. ಕಲ್ಪತರು ಗ್ರಾಮೀಣ ಬ್ಯಾಂಕ್ ಮತ್ತು ಪೊಲೀಸ್ ಠಾಣೆಗಳು ಇದ್ದವೂ (ಈಗ ಮಾಗಡಿಗೆ ಸ್ಥಳಾಂತರವಾಗಿದೆ) ಇವೆಲ್ಲಾ ಇದ್ದುದರಿಂದ ಚಕ್ರಬಾವಿ ಗ್ರಾಮವು ಒಂದು ಪ್ರಾಚೀನ ಗ್ರಾಮವಾಗಿದ್ದು, ಸುಸಂಸ್ಕೃತ ಮಾದರಿ ಗ್ರಾಮವಾಗಿತ್ತು ಎಂದು ಹೇಳಬಹುದು.

ಅನುಬಂಧಗಳು

ಛಾಯಾಚಿತ್ರಗಳು

ಛಾಯಾಚಿತ್ರಗಳು



ನಾಡಪ್ರಭು ಕೆಂಪೇಗೌಡರ ಚರಿತ್ರೆಗೆ ಹೊಸ ಬೆಳಕು

ನಗರಕ್ಕೆ ತಂಪೆರೆದ ತುಂತುರು ಮಳೆ

ವಿಜಯ ಕರ್ನಾಟಕ, ದಿನಾಂಕ : 21-04-2017



ಅಶ್ವಮೇಧ ಬಿಂಬಿಸುವ ಶಿಲೆ ಪತ್ತೆ!

ರಾಮಾಯಣ, ಮಹಾಭಾರತದ ಯುದ್ಧ ಸನ್ನಿವೇಶವಿರುವ ಚಿತ್ರ ಕಲ್ಲು


ವಿಜಯವಾಣಿ, ದಿನಾಂಕ : 25-03-2017





ಕೆಂಪೇಗೌಡರ ಮೊಮ್ಮಗನ ಮಾಸ್ತಿಗಲ್ಲು ಪತ್ತೆ

ಚಕ್ರಬಾವಿ ಗ್ರಾಮದಲ್ಲಿ ಇತ್ತೀಚೆಗಷ್ಟೆ ಅಶ್ವಮೇಧ ಕುದುರೆಯಿರುವ ಕಲ್ಲು ಪತ್ತೆಯಾಗಿತ್ತು



ಕನ್ನಡ ಪ್ರಭ, ದಿನಾಂಕ : 05-05-2017

ಚಕ್ರಬಾವಿಯಲ್ಲಿವೆ 34 ವೀರಮಾಸ್ತಿಗಲ್ಲು!

ಗ್ರಾಮದ ಸುತ್ತಮುತ್ತ ಪತ್ತೆಯಾದ ಕಲ್ಲುಗಳ ಸಂರಕ್ಷಣೆ | 400 ವರ್ಷಗಳಷ್ಟು ಹಿಂದಿನ ಕೆತ್ತನೆ






ವಿಜಯವಾಣಿ, ದಿನಾಂಕ : 12-04-2017



ಹೂಲಿಯೂರಮ್ಮ ಕೊಂಡೋತ್ಸವ ಸಂಪನ್ನ

ವಿಜಯವಾಣಿ, ದಿನಾಂಕ : 20–03–2017



ವಿಜಯಕರ್ನಾಟಕ, ಬೆಂಗಳೂರುನಗರ, ದಿನಾಂಕ : 10–04–2017



ಶಿಲಾಯುಗದ ಜನರ ಸಮಾಧಿ (ಅರಳಕುಪ್ಪೆ)



ಶಿಲಾಯುಗದ ಜನರ ಸಮಾಧಿ (ಅರಳಕುಪ್ಪೆ)







ವೇಣುಗೋಪಾಲಸ್ವಾಮಿ ದೇವಾಲಯ



ವೇಣುಗೋಪಾಲಸ್ವಾಮಿ







ಹುಲಿಕಟ್ಟೆ ಬಳಿ 2 ವೀರಗಲ್ಲು ಪತ್ತೆ

12-13ನೇ ಶತಮಾನಕ್ಕೆ ಸೇರಿದ ತುರುಗೋಳ್ ಶಾಸನಗಳು ಪತ್ತೆ

ಅಧ್ಯಯನದಿಂದ ಮಾಹಿತಿ

- ಹೊಯ್ಸಳರ ಕಾಲದ ಲಿಪಿ
- ಹಸು ಕಳ್ಳರ ಜತೆ ಹೋರಾಡಿ ಮಡಿದ ವೀರನ ಚಿತ್ರ
- ಬಿಲ್ಲು ಬಾಣ ಹಿಡಿದಿರುವ ವೀರ

ವಿಜಯವಾಣಿ, ದಿನಾಂಕ : 08-03-2017



ಶಿಲಾಯುಗದ ಜನರು ಉಪಯೋಗಿಸುತ್ತಿದ್ದ ನೀರಿನ ಬುಗ್ಗೆ (ಬೆಟ್ಟದ ಸಿದ್ದಪ್ಪನ ಗುಡ್ಡೆ)







ಜಂಗಮಮಠ ಮತ್ತು ನಂದಿ ಮಂಟಪ



ಜಂಗಮಮಠ ಮತ್ತು ನಂದಿ ಮಂಟಪ







ಮರುಳುಸಿದ್ದೇಶ್ವರ ಸ್ವಾಮಿ ಮತ್ತು ಗದ್ದುಗೆ



ಚಿಕ್ಕಯ್ಯಸ್ವಾಮಿ ದೇವಾಲಯ



ಚಿಕ್ಕಯ್ಯನ ಗುಡಿ



ಚಿಕ್ಕಯ್ಯನ ಗುಡಿಯ ಗರ್ಭಗುಡಿ







ವೀರಭದ್ರಸ್ವಾಮಿ ದೇವಾಲಯ



ವೀರಭದ್ರ ಮತ್ತು ಲಕ್ಷ್ಮಿದೇವಿ ಗುಡಿ







ವೀರಭದ್ರ ಮತ್ತು ಲಕ್ಷ್ಮೀದೇವಿ ಗುಡಿ



ಮುಮ್ಮಡಿ ಕೆಂಪವೀರಪ್ಪಗೌಡ ನಿರ್ಮಿಸಿದ ಕೆರೆ







ಕೋಡಿ ಬಸವಣ್ಣ ಮತ್ತು ದೇವಾಲಯ



ಮುತ್ತುರಾಯಸ್ವಾಮಿ ಗುಡಿ



ವೀರಭದ್ರ ದೇವಾಲಯದ ಹೊರಗಡೆ ಇರುವ ಶಿಲ್ಪಗಳು



ಬೆಟ್ಟದ ಸಿದ್ದಪ್ಪನ ಗುಡಿಯ ಮೇಲೆ ಶಿಲಾಯುಗದ ಜನರು ವಾಸಿಸುತ್ತಿದ್ದ ಪ್ರದೇಶ ಮತ್ತು ಗುಹೆ



ಹುಲಿಯೂರಮ್ಮನ ಗುಡಿ







ನಾಡ ಮಾರಮ್ಮನ ಗುಡಿ



ನಾಡ ಮಾರಮ್ಮ







ಗವಿ ಮಠ



ಹುಲಿಕಟ್ಟೆ ಮಹದೇವಮ್ಮನ ಗುಡಿ







ಬೆಟ್ಟದ ಸಿದ್ದಪ್ಪನ ಪಾದ



12ನೇ ಶತಮಾನದ ಹೊಯ್ಸಳರ ಕಾಲದ ವೇಣುಗೋಪಾಲಸ್ವಾಮಿ



ಜಂಗಮ ಮಠದ ಆವರಣದಲ್ಲಿರುವ ಲಕ್ಷ್ಮೀದೇವಿ, ಶಿವಲಿಂಗ, ವೀರಭದ್ರ ಶಿಲ್ಪಗಳು










ಚಿಕ್ಕಯ್ಯನ ಗುಡಿ ಮುಂಭಾಗದ ವೀರಮಾಸ್ತಿಗಲ್ಲು



ಜಂಗಮ ಮಠದ ಮರುಳ ಸಿದ್ದೇಶ್ವರ ದೇವಾಲಯದ ದ್ವಾರಪಾಲಕರು







ವೈಷ್ಣವ ವೀರಮಾಸ್ತಿಗಲ್ಲು ಮತ್ತು ಶೈವ ವೀರಮಾಸ್ತಿಗಲ್ಲು



ಅರಳಕುಪ್ಪೆಯ ವೀರಗಲ್ಲು



ಮರಳದೇವನ ಪುರದ ಗಡಿಕಲ್ಲು









ಜಂಗಮ ಮಠದ ಆವರಣದಲ್ಲಿರುವ ಲಕ್ಷ್ಮೀದೇವಿ ಮತ್ತು ಗಣೇಶ ವಿಗ್ರಹಗಳು



ಅರಳುಕುಪ್ಪೆಯ ಶಿಲಾಯುಗದ ಸಮಾಧಿ







ಚಕ್ರಬಾವಿಯ ಶಿಲಾಯುಗದ ಸಮಾಧಿ



ಶಿವಲಿಂಗ



ಲಕ್ಷ್ಮೀದೇವಿ



ಲಜ್ಜಗೌರಿ ಶಿಲ್ಪ












ನಂದಿ



ಗಣೇಶ



ಬಸವಣ್ಣ



ಬಸವಣ್ಣ



ಮುಮ್ಮಡಿ ಕೆಂಪವೀರಪ್ಪಗೌಡ ಕಟ್ಟಿಸಿದ ತೂಬು



ಜಂಗಮಮಠದ ಮೂಲ ಪೀಠಾಧ್ಯಕ್ಷರು





ಆಕರ ಗ್ರಂಥಗಳು

ಆಕರ ಗ್ರಂಥಗಳು

1) ಕರ್ನಾಟಕ ಪರಂಪರೆ, ಸಂಪುಟ-1, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

2) ಕರ್ನಾಟಕ ಪರಂಪರೆ, ಸಂಪುಟ-2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

3) ಡಾ. ಎಂ.ಜಿ. ಮಂಜುನಾಥ (ಸಂ.) ಯಲಹಂಕ ನಾಡ ಪ್ರಭುಗಳ ಶಾಸನ ಸಂಪುಟ.

4) ಫಾಲಾಕ್ಷ : ಕರ್ನಾಟಕ ಇತಿಹಾಸ ಪರಿಚಯ ಶಶಿ ಪ್ರಕಾಶನ, ತುಮಕೂರು.

5) ಡಾ. ಎಂ.ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ ಬುಕ್ ಹೌಸ್, 2008, ಬೆಂಗಳೂರು.

6) ಲಜ್ಜಾಗೌರಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

7) ಡಾ. ಎಂ. ಚಿದಾನಂದಮೂರ್ತಿ, ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು.

8) ಡಾ. ಆರ್. ಶೇಷಶಾಸ್ತ್ರ, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

9) ಬಿ.ಎಲ್. ರೈಸ್, EC-IX, ಶಾಸನ ಸಂಪುಟ.

10) ಡಾ. ಎಂ. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ ಸಂಸ್ಕೃತಿ

11) ಯಳನಾಡು ಆಂಜನಪ್ಪ, ಧರ್ಮ ಮತ್ತು ಮುಕ್ತ ವಿಚಾರ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಕ್ತೃಗಳ ವಿವರ

ವಕ್ತೃಗಳ ವಿವರ

1) ಬದ್ರಿನಾರಾಯಣ್, ಅರ್ಚಕರು, ಹುಲಿಯೂರಮ್ಮ ದೇವಾಲಯದ ಅರ್ಚಕರು, ವಯಸ್ಸು : 50 ವರ್ಷಗಳು.

2) ನಂಜುಂಡಯ್ಯ, ಅರಳಕುಪ್ಪೆ ಗ್ರಾಮ, ವಯಸ್ಸು : 70 ವರ್ಷಗಳು.

3) ಯೋಗನರಸಿಂಹಯ್ಯ, ಚಕ್ರಬಾವಿ ಗ್ರಾಮ, ವಯಸ್ಸು : 60 ವರ್ಷಗಳು.

4) ವೆಂಕಟಸ್ವಾಮಯ್ಯ, ಚಕ್ರಬಾವಿ ಗ್ರಾಮ, ವಯಸ್ಸು : 90 ವರ್ಷಗಳು.

5) ಸೀತಾರಾಮಯ್ಯ, ಚಕ್ರಬಾವಿ ಗ್ರಾಮ, ವಯಸ್ಸು : 62 ವರ್ಷಗಳು.

6) ಶ್ರೀ ಸಿದ್ದಲಿಂಗ ಸ್ವಾಮೀಜಿ, ಜಂಗಮಮಠದ ಪೀಠಾಧ್ಯಕ್ಷರು, ಚಕ್ರಬಾವಿ, ವಯಸ್ಸು : 60 ವರ್ಷಗಳು.

7) ಚಿಕ್ಕಯ್ಯನ ಗುಡಿ ಅರ್ಚಕರು, ಚಕ್ರಬಾವಿ, ವಯಸ್ಸು : 57 ವರ್ಷಗಳು.

8) ಲಕ್ಷ್ಮಮ್ಮ, ನಾಡಮಾರಮ್ಮ ಗುಡಿ ದೇವಾಲಯದ ಅರ್ಚಕರು, ಚಕ್ರಬಾವಿ, ವಯಸ್ಸು : 65 ವರ್ಷಗಳು.

9) ಕೃಷ್ಣಮೂರ್ತಿ, ಚಕ್ರಬಾವಿ ಗ್ರಾಮ, ವಯಸ್ಸು : 65 ವರ್ಷಗಳು.

10) ಲಕ್ಷ್ಮಮ್ಮ, ಚಕ್ರಬಾವಿ ಗ್ರಾಮ, ವಯಸ್ಸು : 70 ವರ್ಷಗಳು.

11) ತಿಮ್ಮಮ್ಮ, ಚಕ್ರಬಾವಿ ಗ್ರಾಮ, ವಯಸ್ಸು : 75 ವರ್ಷಗಳು.

12) ತಾಯಮ್ಮ, ಚಕ್ರಬಾವಿ ಗ್ರಾಮ, ವಯಸ್ಸು : 72 ವರ್ಷಗಳು.

13) ಶಾಂತಮ್ಮ, ಚಕ್ರಬಾವಿ ಗ್ರಾಮ, ವಯಸ್ಸು : 68 ವರ್ಷಗಳು.

ಚಕ್ರಬಾವಿ ನಕ್ಷೆ

